ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

KARNATAKA STATE OPEN UNIVERSITY
Manasagangotri, Mysore - 570 006

# ಸಾರ್ವಜನಿಕ ಆಡಳಿತ

## ಎಂ. ಎ. (ಪ್ರಥಮ) ಕನ್ನಡ ಮಾಧ್ಯಮ

## ಆಡಳಿತಾತ್ಮಕ ಸಿದ್ಧಾಂತಗಳು


Thomas Woodrow Wilson


Renis Likert


Max Weber


M.P. Follett


Douglas McGregor


Luther Gullic


Elton Mayo


F. W. Taylor


Chester Irving Barnard


Chris Argyris


A H Maslow


Herbert A Simon

ಕೋರ್ಸ್ – 3

ಬ್ಲಾಕ್ – 1

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 1986

*The Open University system has been initiated in order to augment opportunities for higher education and as instrument of democrating education.*

*National Education Policy 1986*

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಸಾರ್ವಜನಿಕ ಆಡಳಿತ
ಕೋರ್ಸ್ 3

## ಬ್ಲಾಕ್ 1


| | | |
|---|---|---|
| ಘಟಕ - 1 | ಆಡಳಿತಾತ್ಮಕ ಸಿದ್ಧಾಂತ ಅರ್ಥ, ಸ್ವಭಾವ ಮತ್ತು ಪ್ರಾಮುಖ್ಯತೆ | 1 to 10 |
| ಘಟಕ- 2 | ಸಾರ್ವಜನಿಕ ಆಡಳಿತದ ಅಧ್ಯಯನದ ಉಗಮ. | 11 to 20 |
| ಘಟಕ- 3 | ಆಡಳಿತಾತ್ಮಕ ಸಿದ್ಧಾಂತದ ಉಗಮ ತೌಲನಿಕ ಸಾವಜನಿಕ ಆಡಳಿತ | 21 to 26 |
| ಘಟಕ- 4 | ನೂತನ ಸಾರ್ವಜನಿಕ ಆಡಳಿತ. | 27 to 36 |

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡೀನ್ ಶೈಕ್ಷಣಿಕ ಸಮಾವೇಶಕರು,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ವಿಷಯ ಸಂಯೋಜಕರು

**ಡಾ. ಟಿ.ಡಿ. ದೇವೇಗೌಡ**
ಪ್ರೊಫೆಸರ್ ಮತ್ತು ಅಧ್ಯಕ್ಷರು
ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಪಠ್ಯಕ್ರಮ ನಿರೂಪಕರು

**ಪ್ರೊ. ಆರ್. ಪ್ರಭಾಕರ (ನಿವೃತ್ತ)**
ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತದ
ಸಂಶೋಧನಾ ಮತ್ತು ಅಧ್ಯಯನ ವಿಭಾಗ
ಕ. ರಾ.ಮ.ವಿ
ಮೈಸೂರು

ಕೋರ್ಸ್ 3
ಘಟಕ 1 - 4

## ಪ್ರಕಾಶಕರು

ಕುಲಸಚಿವರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು -570 006



**ಕ.ರಾ.ಮು.ವಿ., ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.**


**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2009**

ಎಲ್ಲಾ ಹಕ್ಕುಗಳು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು - 6 ಇಲ್ಲಿಂದ ಪಡೆಯಬಹುದು.

## ಕೋರ್ಸ್ -3
## ಪರಿಚಯ

ಪ್ರಿಯ ವಿದ್ಯಾರ್ಥಿ,

ಸಾರ್ವಜನಿಕ ಆಡಳಿತದ ವಿದ್ಯಾರ್ಥಿಯಾದ ನಿಮ್ಮನ್ನು ಸ್ವಾಗತಿಸಲು ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತದ ಅಧ್ಯಾಯನ ಮತ್ತು ಸಂಶೋಧನಾ ವಿಭಾಗ ತುಂಬಾ ಹೆಮ್ಮೆಪಡುತ್ತದೆ. ನೀವು ಎಂ.ಎ. ಸಾರ್ವಜನಿಕ ಆಡಳಿತವನ್ನು ಅಭ್ಯಾಸ ಮಾಡಲು ತೋರಿಸುತ್ತಿರುವ ಇಚ್ಛೆಗೆ ಅಭಿನಂದಿಸುತ್ತದೆ. ಆಡಳಿತ, ಸರ್ಕಾರ ಹಾಗೂ ಇನ್ನಿತರ ವಿವಿಧ ಅಂಗಗಳ ಅಧ್ಯಯನದ ಬಗ್ಗೆ ಅರಿತುಕೊಳ್ಳಲು ನೀವು ತೋರುತ್ತಿರುವ ಕಾತುರತೆ ಹಾಗೂ ಆಕಾಂಕ್ಷೆ ನಮಗೆ ತುಂಬಾ ಸಂತೋಷ ತಂದಿದೆ. ಈ ಪತ್ರಿಕೆಯಲ್ಲಿ ನೀವು ಆಡಳಿತಾತ್ಮಕ ಸಿದ್ಧಾಂತದ ಅರ್ಥ ಮತ್ತು ಪ್ರಾಮುಖ್ಯತೆ ಆಡಳಿತಾತ್ಮಕ ಸಿದ್ಧಾಂತಗಳ ಹುಟ್ಟುವಳಿ ಮತ್ತು ನೂತನ ಸಾರ್ವಜನಿಕ ಆಡಳಿತದ ಬಗೆ ಅಧ್ಯಯನ ಮಾಡುತ್ತೀರಿ ಹಾಗೂ ಈ ಪತ್ರಿಕೆಯಲ್ಲಿ ಆಡಳಿತಾತ್ಮಕ ಸಿದ್ಧಾಂತಕ್ಕೆ ಕೊಡುಗೆ ನೀಡಿರುವ ಅನೇಕ ಆಡಳಿತಶಾಸ್ತ್ರದ ಚಿಂತಕರುಗಳು ಹಾಗೂ ನಿರ್ವಹಣಾಶಾಸ್ತ್ರದ ಅನೇಕ ಸಿದ್ಧಾಂತಗಳನ್ನು ಹುಟ್ಟು ಹಾಕಿದ ನಿರ್ವಹಣಾ ಚಿಂತಕರ ಬಗ್ಗೆ ಅಭ್ಯಾಸ ಮಾಡುತ್ತೀರಿ.

**ಡಾ|| ಟಿ. ಡಿ. ದೇವೇಗೌಡ,**
ಅಧ್ಯಕ್ಷರು ಮತ್ತು ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತದ
ಸಂಶೋಧನಾ ಮತ್ತು ಅಧ್ಯಾಯನ ವಿಭಾಗ,
ಕ.ರಾ.ಮ.ವಿ, ಮೈಸೂರು

## ಬ್ಲಾಕ್-1

## ಪರಿಚಯ

ಈ ಬ್ಲಾಕ್ ನಾಲ್ಕು ಘಟಕಗಳನ್ನು ಒಳಗೊಂಡಿದೆ. ಘಟಕ ಒಂದರಲ್ಲಿ ಆಡಳಿತಾತ್ಮಕ ಸಿದ್ಧಾಂತ ಅದರ ಹುಟ್ಟುವಳಿ, ಅರ್ಥ, ಸ್ವಭಾವ ಮತ್ತು ಪ್ರಾಮುಖ್ಯತೆಯ ಬಗ್ಗೆ ವಿವರ ನೀಡಲಾಗಿದೆ. ಎರಡನೆಯ ಘಟಕದಲ್ಲಿ ಸಾರ್ವಜನಿಕ ಆಡಳಿತದ ಅಧ್ಯಾಯನ ಮತ್ತು ಅದರ ಉಗಮದ ಬಗ್ಗೆ ವಿವರಿಸಲಾಗಿದೆ. ಮೂರನೆಯ ಘಟಕದಲ್ಲಿ ಸಾರ್ವಜನಿಕ ಆಡಳಿತದ ತೌಲನಿಕ ಅಧ್ಯಯನ ಇತರ ದೇಶದ ಆಡಳಿತದೊಂದಿಗೆ ಹೋಲಿಕೆ ಮಾಡಿದಾಗ ಕಂಡು ಬರುವ ನ್ಯೂನ್ಯತೆಗಳು ಹಾಗೂ ಸಾಮರಸ್ಯದ ಬಗ್ಗೆ ವಿವರಿಸಲಾಗಿದೆ. ನಾಲ್ಕನೆಯ ಘಟಕದಲ್ಲಿ ನೂತನ ಸಾರ್ವಜನಿಕ ಆಡಳಿತ ಎಂದರೇನು ಅದರ ಪ್ರಾಮುಖ್ಯತೆ ಹಾಗೂ ವಿವಿಧ ಸಮಿತಿಗಳು ನೀಡಿರುವ ವರದಿಗಳು ಹಾಗೂ ಅದರ ಮುಖ್ಯಾಂಶಗಳು ಸಂಪ್ರದಾಯವಾದಿ ಆಡಳಿತಕ್ಕೂ ನೂತನ ಸಾರ್ವಜನಿಕ ಆಡಳಿತಕ್ಕೂ ಇರುವ ವ್ಯತ್ಯಾಸಗಳನ್ನು ಚರ್ಚಿಸಲಾಗಿದೆ. ಜೊತೆಗೆ ನೂತನ ಸಾರ್ವಜನಿಕ ಆಡಳಿತ ನೀಡಿರುವ ನೀತಿ ನಿಯಮಾವಳಿಗಳನ್ನು ಕೂಡ ವಿವರಿಸಲಾಗಿದೆ.

# ಘಟಕ- 1 ಆಡಳಿತಾತ್ಮಕ ಸಿದ್ಧಾಂತ ಅರ್ಥ, ಸ್ವಭಾವ ಮತ್ತು ಪ್ರಾಮುಖ್ಯತೆ

ರಚನೆ.


1.0 ಉದ್ದೇಶಗಳು

1.1 ಪರಿಚಯ

1.2 ಆಡಳಿತಾತ್ಮಕ ಸಿದ್ಧಾಂತದ ಅರ್ಥ, ಸ್ವಭಾವ ಮತ್ತು ಪ್ರಾಮುಖ್ಯತೆ

1.3 ಆಡಳಿತಾತ್ಮಕ ಸಿದ್ಧಾಂತ ಲಕ್ಷಣಗಳು

1.4 ಸಿದ್ಧಾಂತ ಮತ್ತು ವಾಸ್ತವಾಂಶ

1.5 ಸಿದ್ಧಾಂತದ ಪಾತ್ರ

1.6 ವಾಸ್ತವಾಂಶದ ಪಾತ್ರ

1.7 ಸಾರಾಂಶ

1.8 ಕಠಿಣ ಪದಗಳು

1.9 ಉಪಯುಕ್ತ ಗ್ರಂಥಗಳು

1.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

## 1.0 ಉದ್ದೇಶಗಳು

ಈ ಘಟಕದಲ್ಲಿ ಆಡಳಿತಾತ್ಮಕ ಸಿದ್ಧಾಂತದ ಹಿನ್ನೆಲೆ, ಅರ್ಥ ಮತ್ತು ಪ್ರಾಮುಖ್ಯತೆಯನ್ನು ವಿವರಿಸಲಾಗಿದೆ ಹಾಗೂ ಸಿದ್ಧಾಂತ ಎಂದರೇನು ಅದರ ಹಿನ್ನಲೆ ಹಾಗೂ ಅಭಿವೃದ್ಧಿ ಹಾಗು ಅದರ ವೈಜ್ಞಾನಿಕ ಸಮಂಜಸತೆಯ ಬಗ್ಗೆ ವಿವರಿಸಲಾಗಿದೆ. ಈ ಘಟಕವನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿದಾಗ ನಿಮಗೆ ತಿಳಿದು ಬರುವುದೇನೆಂದರೆ

- ಆಡಳಿತಾತ್ಮಕ ಸಿದ್ಧಾಂತದ ಅರ್ಥ ಮತ್ತು ಪ್ರಾಮುಖ್ಯತೆ.
- ಸಿದ್ಧಾಂತದ ಹಿನ್ನೆಲೆ ಹಾಗೂ ಅಭಿವೃದ್ಧಿ.
- ಸಿದ್ಧಾಂತದ ವೈಜ್ಞಾನಿಕ ಸಮಂಜಸತೆ.

## 1.1 ಪರಿಚಯ

ಸಂಘಟಿತ ಸಮಾಜದ ಕಾರ್ಯ ಚಟುವಟಿಕೆ ಹೆಚ್ಚಿದಂತೆಲ್ಲಾ ಇತ್ತೀಚಿನ ದಿನಗಳಲ್ಲಿ ಆಡಳಿತದ ಮೇಲಿನ ಆಸಕ್ತಿ ಹೆಚ್ಚಿತು ಎಂದರೆ ತಪ್ಪಾಗಲಾರದು. ನಾಗರೀಕತೆಗಿಂತಲೂ ಪುರಾತನವಾದಂತಹ ಆಡಳಿತದ ಬಗ್ಗೆ ಕ್ರಮಬದ್ಧವಾದ ಅಧ್ಯಯನ ನಡೆಸಲು ಇತ್ತೀಚಿನ ದಿನಗಳವರೆಗೆವಿಗೂ ಪ್ರಯತ್ನ ನಡೆದಿರಲಿಲ್ಲ. ಆದರೆ ಆಧುನಿಕ ಸಮಾಜದ ಗೊಂದಲ ಮಯ ವ್ಯವಸ್ಥೆ ಮತ್ತು ರಾಜ್ಯದ ವಿವಧೋಭಿನ್ನ ಕೆಲಸ ಕಾರ್ಯಗಳು ಹಾಗೂ ಕಾರ್ಯ ಕ್ರಮಗಳ ಒತ್ತಡ ಜಾಸ್ತಿಯಾದಂತೆಲ್ಲಾ ಆಡಳಿತದ ಬಗೆಗಿನ ಅಧ್ಯಯನ ಹಾಗೂ ಅದರೆ ಬಗ್ಗೆ ಕ್ರಮಬದ್ಧವಾದ ತಿಳುವಳಿಕೆ ತೀವ್ರಗೊಂಡ ಕಾರಣದಿಂದಾಗಿ ಅದರ ಬಗೆಗಿನ ಅಭ್ಯಾಸ ಅನಿವಾರ್ಯವಾಯಿತು. ಹತ್ತೊಂಬತ್ತನೆ ಶತಮಾನದಿಂದೀಚೆಗೆ ಶೈಕ್ಷಣಿಕವಾಗಿ ಶಾಲಾ ಕಾಲೇಜುಗಳಲ್ಲಿ ಐಚ್ಛಿಕ ಅಧ್ಯಯನ ವಿಷಯವಾಗಿ ಸ್ಥಾನ ಪಡೆದು ಕೊಂಡ ಆಡಳಿತ ಶಾಸ್ತ್ರದ ಬಗ್ಗೆ ಆಸಕ್ತಿ ಹೆಚ್ಚಲಾರಂಭಿಸಿತು. ಆಧುನಿಕ ರಾಜ್ಯಗಳು ಕೈಗೊಳ್ಳುತ್ತಿರುವ ವಿವಿಧ ಕಾರ್ಯಗಳು, ಸುಖೀರಾಜ್ಯದ ಹೆಸರಿನಲ್ಲಿ ಕೈಗೊಳ್ಳಲೇಬೇಕಾದ ಕಲ್ಯಾಣ ಕಾರ್ಯ ಕ್ರಮಗಳು ವಿಭಿನ್ನ ರೀತಿಯ ಹಾಗೂ ಜನತೆಯ ಹಿತಕೋಸ್ಕರ ಮಾಡಲಾಗುವ ವಿವಧೋಭಿನ್ನ ಕಾರ್ಯ ಕ್ರಮಗಳ ಅನುಷ್ಠಾನ ಮಾಡುವಲ್ಲಿ ಅಧಿಕಾರಿಗಳ ಪಾತ್ರ ಹಾಗೂ ಆಡಳಿತದ ಪ್ರಾಮುಖ್ಯತೆ ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ದೀರ್ಘ ಅಧ್ಯಯನ ಮತ್ತು ಇದಕ್ಕೆ ಸಂಬಂಧಿದಂತೆ ಸಂಶೋಧನೆ ಅನಿವಾರ್ಯವಾಯಿತು. ಈ ಮೇಲ್ಕಂಡ ಕಾರಣಗಳಿಂದಾಗಿ ಆಡಳಿತದ ಬಗ್ಗೆ ಸಂಪೂರ್ಣವಿವರ, ದೀರ್ಘ ಅಧ್ಯಯನ ವಸ್ತುನಿಷ್ಟ ತಿಳುವಳಿಕೆ ಮತ್ತು ಈ ಎಲ್ಲಾ ಅಂಶಗಳಿಗೂ ಪೂರಕವಾದ ಸನ್ನಿವೇಶದ ಸೃಷ್ಟಿಯ ಫಲಶೃತಿಯೇ ಆಡಳಿತ ಸಿದ್ಧಾಂತ ಹುಟ್ಟುವಳಿಗೆ ಕಾರಣವಾಯಿತು.

## 1.2 ಆಡಳಿತಾತ್ಮಕ ಸಿದ್ಧಾಂತ - ಅರ್ಥ, ಸ್ವಭಾವ ಮತ್ತು ಪ್ರಾಮುಖ್ಯತೆ

ವಿವಿಧ ವಿಶೇಷಗಳಿಗೆ ಸಂಬಂಧಿಸಿದ ಅನಿಶ್ಚಿತ ವಿಷಯಗಳ ಕಲ್ಪನೆ ಮತ್ತು ಅದರ ಬಗ್ಗೆ ಕ್ರಮಬದ್ಧ ವಿವರಣೆಯನ್ನೊಳಗೊಂಡ ಅಧ್ಯಯನದ ಚೌಕಟ್ಟೇ ಸಿದ್ಧಾಂತ.

ಪರೀಕ್ಷೆಗೆ ಒಳ ಪಡಿಸಬಹುದಾದಂತಹ ಹಾಗೂ ಸೈದ್ಧಾಂತಿಕ ತತ್ವಗಳನ್ನು ರೂಪಿಸಲು ಅನುಕೂಲಕರ ಮತ್ತು ವಾಸ್ತವಿಕ ಸಂಗತಿಗಳನ್ನು ಸಂಕ್ಷಿಪ್ತವಾಗಿ ಸಾದರಪಡಿಸುವುದೇ ಸಿದ್ಧಾಂತ

ನಿರ್ದಿಷ್ಟ ಸಂಗತಿಯನ್ನು ವೈಜ್ಞಾನಿಕ ರೀತಿಯಲ್ಲಿ ಸಾದರ ಪಡಿಸಲು ಅದರ ವಿಶ್ಲೇಷಣೆ, ಅಭಿವೃದ್ಧಿ ಪಡಿಸಲು ಸಹಕಾರಿಯಾದ ಅಂಶಗಳು ಹಾಗೂ ಇದನ್ನು ಅರ್ಥೈಸಿಕೊಂಡು ಸೂಕ್ತರೀತಿಯಲ್ಲಿ ನಿರೂಪಿಸಲು ಅವಕಾಶವಿರುವ ಅಧ್ಯಯನ ವಸ್ತು ವಿಷಯವೇ ಸಿದ್ಧಾಂತ.

ಸಿದ್ಧಾಂತ ಈ ಕೆಳಗಿನ ರೀತಿಗಳಲ್ಲಿ ವಿಜ್ಞಾನದ ಸಾಧನವಾಗಿದೆ.

1) ಅದು ಊಹನೆಗೊಳಿಸಬೇಕಾದ ವಿವಿಧ ವಾಸ್ತವಾಂಶಗಳನ್ನು ನಿರೂಪಿಸುವುದರ ಮೂಲಕ ವಿಜ್ಞಾನದ ಒಂದು ಪ್ರಮುಖ ವಿಚಾರ ಪದ್ದತಿಯನ್ನು ನಿರೂಪಿಸುತ್ತದೆ.

2) ಅದು ಕಲ್ಪನಾ ವ್ಯೂಹವನ್ನು ಒದಗಿಸುವುದರ ಜೊತೆಗೆ, ಅದರಿಂದ ಸಂಗತವಾದ ಘಟನೆಗಳು ಮತ್ತು ಅದರ ವ್ಯವಸ್ಥಿತಗೊಳಿಸುವಿಕೆ, ವರ್ಗೀಕರಣ ಹಾಗೂ ಪರಸ್ಪರ ಸಂಬಂಧ ಕಲ್ಪಿಸಲು ಸದಾವಕಾಶ ನೀಡುತ್ತದೆ.( ಸಿದ್ಧಾಂತ)

3) ಅದು ವಾಸ್ತವಾಂಶಗಳ ಸಾರಾಂಶವನ್ನು ಕೆಳಗಿನ ವಿಧದಲ್ಲಿ ತಿಳಿಸುತ್ತದೆ. ಅನುಭವ ಗಮ್ಯ ಹಾಗೂ ವ್ಯಾಪಕೀಕರಣಗಳ ಕ್ರಮಪದ್ಧತಿಗಳು

4) ಅದು ವಾಸ್ತವಾಂಶಗಳನ್ನು ಮುನ್ಸೂಚಿಸುತ್ತದೆ.

5) ಅದು ನಮ್ಮ ಜ್ಞಾನದಲ್ಲಿಯ ಆಭಾವಗಳನ್ನು ತೋರಿಸುತ್ತದೆ.

ಇನ್ನೊಂದು ರೀತಿಯಲ್ಲಿ ವಾಸ್ತವಾಂಶಗಳು ಸಹ ಕೆಳಗೆ ಸೂಚಿಸಿದಂತೆ ಸಿದ್ಧಾಂತವನ್ನು ಸೃಷ್ಟಿಸುತ್ತವೆ.

1) ವಾಸ್ತವಾಂಶಗಳು ಸಿದ್ಧಾಂತಗಳನ್ನು ಪ್ರಾರಂಭಿಸಲು ಸಹಾಯವಾಗುತ್ತದೆ.

2) ಅವು ಪ್ರಸಕ್ತ ಸಿದ್ಧಾಂತಗಳ ಬದಲಾವಣೆಗೆ ದಾರಿ ಮಾಡುತ್ತವೆ.

3) ವಾಸ್ತವಾಂಶಗಳಿಗೆ ಹೊಂದಿಕೆ ಯಾಗದಂತಹ ಸಿದ್ಧಾಂತಗಳನ್ನು ತಿರಸ್ಕರಿಸಲು ಅವು ಕಾರಣವಾಗುತ್ತವೆ.

4) ಅವು ಸಿದ್ಧಾಂತದ ವಿಚಾರ ಕೇಂದ್ರವನ್ನು ಹಾಗೂ ವಿಚಾರ ಪದ್ದತಿಯನ್ನು ಬದಲು ಮಾಡುತ್ತದೆ ಹಾಗೂ ಅವು ಸಿದ್ಧಾಂತವನ್ನು ವಿಶದಗೊಳಿಸುವುದಲ್ಲದೆ ಪುನರ್ನಿರೂಪಿಸುತ್ತದೆ.

ಸಿದ್ಧಾಂತ ಎಂಬ ಪದದ ಅರ್ಥವನ್ನು ತಿಳಿದುಕೊಳ್ಳಬೇಕಿದ್ದರೆ ಅದಕ್ಕೆ ಪೂರಕವಾದ ಮತ್ತೊಂದು ಪದ ಆಚರಣೆಯ ಬಗ್ಗೆ ತಿಳಿದು ಕೊಳ್ಳುವುದು ಸೂಕ್ತ ಎನಿಸುತ್ತದೆ. ಸಿದ್ಧಾಂತ ಎಂದರೆ ಸುಸೂತ್ರವಾಗಿ ಆಚರಣೆಗೆ ಸುಲುಭವಾಗುವಂತಹ ಒಂದಕ್ಕೊಂದು ಪೂರಕವಾದ ತಾತ್ವಿಕ ಪದಗಳ ಜೋಡಣೆ. ಇದಕ್ಕೆ ಉದಾಹರಣೆ- ಮೊದಲನೆಯದಾಗಿ ಗುರುತ್ವಾಕರ್ಷಣಶಕ್ತಿ ಎರಡನೆಯದಾಗಿ ಯೋಗ ಸಿದ್ಧಾಂತ ಇದೇ ರೀತಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸೃಷ್ಟಿಸಲಾಗುವ ಸಿದ್ಧಾಂತವನ್ನು ಎರಡು ಭಾಗ ಮಾಡಬಹುದು ಮೊದಲನೆಯದಾಗಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ರಚಿಸಲ್ಪಡುವ ಭಾಗಶಃ ಸಿದ್ಧಾಂತ. ಎರಡನೆಯದಾಗಿ ಇಡೀ ವಿಷಯದ ದೃಷ್ಟಿ ಕೋನಕ್ಕೆ ಸಂಬಂಧಿಸಿದಂತೆ ರಚಿಸಲ್ಪಡುವ ಸಂಪೂರ್ಣ ಸಿದ್ಧಾಂತ. ಸಿದ್ಧಾಂತದ ಕಾರ್ಯಾಚರಣೆಗೆ ಉದಾಹರಣೆಯಾಗಿ ಗುರುತ್ವಾಕರ್ಷಣೆ ಸಿದ್ಧಾಂತ ಹಾಗೂ ಐನ್‌ಸ್ಟೀನ್ ಭೌತ ಶಾಸ್ತ್ರದ ಸಾಪೇಕ್ಷ ಸಾಂದ್ರತೆ ಸಿದ್ಧಾಂತ.

ವಿಜ್ಞಾನವೆಂದು ಕರೆಯಲ್ಪಡುವ ಓದುಗರ ಎಲ್ಲಾ ಶಿಕ್ಷಣ ವ್ಯವಸ್ಥೆಯಲ್ಲೂ ಭಾಗಶಃ ಹಾಗೂ ಸಂಪೂರ್ಣ ಸಿದ್ಧಾಂತಗಳ ರಚನೆಯನ್ನು ನೋಡುತ್ತವೆ ಸಂಪೂರ್ಣವಾಗಿ ರಚಿಸಲ್ಪಡುವ ಸಿದ್ಧಾಂತ, ಮೊದಲು ಹೊಸ ಹೊಸ ಶಿಕ್ಷಣ ವ್ಯವಸ್ಥೆಯಲ್ಲಿ ಭಾಗಶಃ ಸಿದ್ಧಾಂತ ರಚಿಸಿ ನಂತರದಲ್ಲಿ ಸಂಪೂರ್ಣ ಸಿದ್ಧಾಂತಕ್ಕೆ ಪ್ರಯತ್ನಿಸುತ್ತವೆ. ಈ ರೀತಿಯಾಗಿ ಅಭಿವೃದ್ಧಿ ಪಡಿಸಲಾಗುವ ಸಂಪೂರ್ಣ ಸಿದ್ಧಾಂತವನ್ನು ಪರೀಕ್ಷೆಗೆ ಒಳಪಡಿಸುವ ಹಾಗೂ ವೈಜ್ಞಾನಿಕ ದೃಷ್ಟಿಕೋನದಿಂದ ಪರಿಗಣಿಸಲಾಗುವ ಸಿದ್ಧಾಂತ ಕರಾರುವಕ್ಕಾಗಿರುವುದರ ಜೊತೆಗೆ ಎಲ್ಲರೂ ಒಪ್ಪಬಹುದಾದ ಸಿದ್ಧಾಂತವಾಗಿರುತ್ತದೆ. ಆದರೆ ಸಾರ್ವಜನಿಕ ಆಡಳಿತ ಕುರಿತು ಹೇಳುವುದಾದರೆ. ಈ ಶಿಕ್ಷಣ ವಿಷಯದಲ್ಲಿ ಸಾಕಷ್ಟು ಭಾಗಶಃ ಸಿದ್ಧಾಂತ ಹೊರಬಂದಿರುವುದು ತಿಳಿದ ವಿಷಯವಾಗಿದೆ. ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದಂತೆ ಸಂಘಟನಾ ಸಿದ್ಧಾಂತಗಳು, ಪರಿಸರವಾದಿ ಸಿದ್ಧಾಂತಗಳು, ರಾಜಕೀಯ-ಆಡಳಿತಕ್ಕೆ ಸಂಬಂಧಿಸಿದಂತೆ ಹಾಗೂ ನಿರ್ವಹಣೆ ಸೇರಿದಂತೆ 1937

ರಿಂದ ಇಂದಿನವರೆವಿಗೂ ಅನೇಕ ಭಾಗಶಃ ಸಿದ್ಧಾಂತವನ್ನು ಕಾಣಬಹುದಾಗಿದೆ. ಈ ರೀತಿಯಾಗಿ ರಚಿಸಿ ಹೊರಬಂದಿರುವ ಸಾರ್ವಜನಿಕ ಆಡಳಿತದ ಸಿದ್ಧಾಂತ ಇನ್ನೂಅನೇಕ ಸೀಳುಗಳಾಗಿ ಅಥವಾ ಸಣ್ಣ ಸಣ್ಣ ಭಾಗಗಳಾಗಿ ಉಳಿದಿವೆಯೇ ವಿನಃ ಎಲ್ಲರೂ ಒಪ್ಪುವಂತಹ ಹಾಗೂ ಸರ್ವಸಮ್ಮತವಾಗುವಂತಹ ಸಿದ್ಧಾಂತ ಹೊರಬರುವುದು ಇನ್ನೂ ಸಾಧ್ಯವಾಗಿಲ್ಲ. ಬಹುಶಃ ಈ ಎಲ್ಲಾ ಕಾರಣಗಳಿಂದಾಗಿ ವಾಲ್ಡೊ ಹಾಗೂ ಇನ್ನಿತರರು ಈ ಕೆಳಕಂಡಂತೆ ಅಭಿಪ್ರಾಯ ಪಡುತ್ತಾರೆ. ಸಾರ್ವಜನಿಕ ಆಡಳಿತದ ದಿಡೀರ್ ಬೆಳವಣಿಗೆ ಗೊಂದಲ ಮಯ ಮೌಲ್ಯಾಧಾರಿತ ವಿಷಯವಾಗಿದ್ದರೂ ಸಹ ವಿಜ್ಞಾನವೆಂದು ಕರೆಸಿಕೊಳ್ಳುವುದು ಸಾಧ್ಯವಿಲ್ಲದ ಮಾತಾಗಿದೆ. ಆ ಕಾರಣದಿಂದಾಗಿ ವಾಲ್ಡೋಮತ್ತಿರರು ಆಡಳಿತವನ್ನು ವ್ಯವಹಾರಿಕ ಜ್ಞಾನವೆಂದು ಪರಿಗಣಿಸಿದ್ದಾರೆಯ ಹೊರತು ಇದು ವೈಜ್ಞಾನಿಕ ಶಿಕ್ಷಣ ಕ್ರಮವಲ್ಲ ಎಂದು ತಿಳಿಸಿದ್ದಾರೆ. ಗೊಲಂಬೆ ವಿಸ್ಕಿ ಹಾಗೂ ಇನ್ನಿತರರು ಸಾರ್ವಜನಿಕ ಆಡಳಿತ ಸಂಪೂರ್ಣವಾದ ಹಾಗೂ ಎಲ್ಲಾ ವಿಷಯಗಳನ್ನೊಳಗೊಂಡ ಹಾಗೂ ಸಂಪೂರ್ಣ ಮಾಹಿತಿ ಉಳ್ಳ ಸಿದ್ಧಾಂತವನ್ನು ಹೊಂದಿಲ್ಲದಿರುವುದು ಅಚ್ಚರಿ ಸಂಗತಿಯಾಗಿದೆ. ಮತ್ತು ಸಂಪೂರ್ಣ ವಿಶ್ಲೇಷಣೆಗಳ ಹಾಗೂ ಅಂಕಿಅಂಶಗಳನ್ನೊಳಗೊಂಡ ಭಾಗಶಃ ಹಾಗೂ ಸಂಪೂರ್ಣ ಸಿದ್ಧಾಂತವನ್ನು ಹೊಂದಿಲ್ಲ. ಹಾಗೂ ಸಮಾಜ ವಿಜ್ಞಾನದ ಇತರ ವಿಷಯಗಳಂತೆ ತನ್ನದೆ ಆದ ಸೈದ್ಧಾಂತಿಕ ತಳಹದಿಯ ಮಾದರಿ ರೀತಿಯನ್ನು ಹೋಲುತ್ತಿಲ್ಲ.

1970 ರಿಂದ ಈಚೆಗೆ ಹೊರಬಂದಿರುವ ಲೇಖನಗಳು ಸಾರ್ವಜನಿಕ ಆಡಳಿತದ ಬರಹಗಾರರು ಹೊರ ತಂದಿರುವ ಅನೇಕ ವಿಷಯಗಳ ಬಗ್ಗೆ ಗಮನ ಹರಿಸಿದಾಗ ನಮಗೆ ತಿಳಿದು ಬರುವುದೇನೆಂದರೆ ವಾಲ್ಡೋ ಹಾಗೂ ಡಬ್ಲೂ. ಎಸ್.ಸೇಯರ್ಸ್‌ರವರ ಹೇಳಿಕೆ ಸೂಕ್ತವೆಂದೆನಿಸುತ್ತದೆ. ಡನ್ಸೈರ್‌ರವರ ಪ್ರಕಾರ ಕ್ರಮಬದ್ಧ ಅಧ್ಯಯನವನ್ನೊಳಗೊಂಡ ವಿವಿಧ ಭಾಗಶಃ ಸಿದ್ಧಾಂತಗಳು ಹಾಗೂ ಈ ಸಿದ್ಧಾಂತದ ವಿವಿಧ ಮಜಲುಗಳು ಹಾಗೂ ಆಡಳಿತಕ್ಕೆ ಸಂಬಂಧಿಸಿದಂತೆ ವಿವಿಧ ರೀತಿಯ ವರ್ಗೀಕರಣವನ್ನು ಗಮನಿಸಿದಾಗ ಆಡಳಿತ ವಿಜ್ಞಾನ ಎಂದು ಕರೆಯುವುದರಲ್ಲಿ ತಪ್ಪಿಲ್ಲವೆಂದು ಎನಿಸುತ್ತದೆ. ವಾಲ್ಡೋ ಪ್ರಕಾರ ಸಿದ್ಧಾಂತಗಳ ಸಂಪೂರ್ಣ ವಿಶ್ಲೇಷಣೆಯನ್ನು ಈ ಕೆಳಕಂಡಂತೆ ನಾಲ್ಕು ಭಾಗಗಳಾಗಿ ವರ್ಗೀಕರಿಸಬಹುದೆಂದು ತಿಳಿಸುತ್ತಾನೆ.

1) ಸೂಕ್ಷ್ಮ ವಿಭಾಗ:ಸಾರ್ವಜನಿಕ ಆಡಳಿತದಲ್ಲಿ ಅತಿಸೂಕ್ಷ್ಮ ಘಟಕಕ್ಕೆ ಸಂಬಂಧ ಪಟ್ಟ ಸೂಕ್ಷ್ಮ ಸಿದ್ಧಾಂತ ಉದಾಹರಣೆಗೆ ನಿರ್ಣಯ ಕೈಗೊಳ್ಳುವ ಸಿದ್ಧಾಂತ

2) ಮದ್ಯಮ ವಿಭಾಗ: ಮಧ್ಯಮ ಸಿದ್ಧಾಂತಗಳು ಇದು ಸಂಘಟನೆಯ ರಚನೆಯ ಹಾಗೂ ಕಾರ್ಯಗಳ ಬಗ್ಗೆ , ನೌಕರ ಸಾಹಿ ಸಿದ್ಧಾಂತ ಹಾಗೂ ನಾಗರೀಕ ಸೇವಾವರ್ಗದ ಕಾರ್ಯ ಚಟುವಟಿಕೆಗೆ ಸಂಬಂಧಿಸಿದುವುಗಳು

ದೊಡ್ಡ ವಿಭಾಗ: ಇಲ್ಲಿ ದೊಡ್ಡ ಸಿದ್ಧಾಂತಗಳ ರಚನೆ ಹಾಗೂ ಆಡಳಿತ ವ್ಯವಸ್ಥೆಯೊಳಗಿನ ವಿವಿಧ ರೀತಿಯ ಸಂಘಟನೆಗಳಿಗೆ ಸಂಬಂಧಿಸಿದ ಸಿದ್ಧಾಂತಗಳು

ಬೃಹತ್ ವಿಭಾಗ:ವಿಶ್ವದಾದ್ಯಂತ ಮಾನ್ಯತೆ ಪಡೆದಿರುವ ಸಿದ್ಧಾಂತಗಳು, ಆಡಳಿತದ ಸಾಮಾನ್ಯ ಸಿದ್ಧಾಂತಗಳು, ಆಲ್ಮಂಡ್‌ರವರ ರಚನಾತ್ಮಕ ಮತ್ತು ಕಾರ್ಯಾತ್ಮಕ ಸಿದ್ಧಾಂತಗಳ ವಿಶ್ಲೇಷಣೆ ಹಾಗೂ ರಿಗ್ಸ್‌ರವರ ಪಟ್ಟಿಕ ಸಿದ್ಧಾಂತ ಇತ್ಯಾದಿ.

ನಾಗರೀಕತೆಯ ಬೆಳವಣಿಗೆ ಅತ್ಯಗತ್ಯವಾದ ಸಾಧನವೇ ಸಿದ್ಧಾಂತ. ಸಿದ್ಧಾಂತ ಸತ್ಯಾಸತ್ಯತೆಯನ್ನು ಪ್ರತಿಬಿಂಬಿಸುವ ಒಂದು ನೈಜ ಚಿತ್ರಣ. ಸಂಗ್ರಹಿತ ವಿಷಯದ ಬಗ್ಗೆ ಹಾಗೂ ಅಂಕಿಅಂಶಗಳ ಬಗ್ಗೆ ಬಹು ಬೇಗ ಹಾಗೂ ಪರಿಣಾಮಕಾರಿಯಾಗಿ ಜನತೆಗೆ ತಿಳಿಸಬಹುದಾದುದ್ದೆ ಈ ಸಿದ್ಧಾಂತ ಸಂಕ್ಷಿಪ್ತವಾದ, ಚಿಕ್ಕ ಹಾಗೂ ಚೊಕ್ಕದಾದ ಮತ್ತು ಮುಂದಿನ ಪೀಳಿಗೆಗೆ, ಸಂಶೋಧಿಸಿದ ತಿಳಿದ ವಿಷಯವನ್ನು ತಿಳಿಸಬಹುದು. ಈ ರೀತಿಯಾಗಿ ಸಿದ್ಧಾಂತ ತರ್ಕಬದ್ಧವಾದ ವಿಶ್ವದಾದ್ಯಂತ ಒಪ್ಪಬಹುದಾದ ವಿಷಯ ಸಂಗ್ರಹಣೆಯನ್ನೊಳಗೊಂಡ ತತ್ವಾಧಾರಿತ ಹೇಳಿಕೆಗಳಾಗಿರುತ್ತವೆ. ಪ್ರಾರಂಭದಲ್ಲಿ ಕಲ್ಪನೆಯಾಗಿ ವಿಭಿನ್ನ ಹಂತಗಳಲ್ಲಿ ಪರೀಕ್ಷೆಗೆ ಒಳಪಟ್ಟು, ಒಪ್ಪಿಕೊಳ್ಳಬಹುದಾದ ಅಥವಾ ಒಪ್ಪಲಾರದ ವಿಷಯವಾಗಿ ಹೊರ ಹೊಮ್ಮುತ್ತದೆ. ಈ ರೀತಿಯಾಗಿ ಕಲ್ಪನೆ ಪರೀಕ್ಷಿಸಿದಾಗ ನಪಾಸಾದಲ್ಲಿ ಅದನ್ನು ಕೈಬಿಟ್ಟು ಪ್ರಯೋಗಶಾಲೆಯಲ್ಲಿ ಅಥವಾ ಪರೀಕ್ಷೆಯಲ್ಲಿ ಪಾಸಾದಲ್ಲಿ ಅದು ಸಿದ್ಧಾಂತವಾಗಿ ಹೊರಹೊಮ್ಮುತ್ತದೆ.

ಸಿದ್ಧಾಂತದ ಸೃಷ್ಟಿಗೆ ಪೂರಕವಾದ, ಪರಿಗಣಿಸಲ್ಪಡಬಹುದಾದ ಆಂತರಿಕ ಸಬಂಧ ಉಳ್ಳ ಯಾವುದಾದರೂ ವಿಷಯದ ಬಗ್ಗೆ ಅದರ ಧ್ಯೇಯವನ್ನು ಕಾರಾರುವಾಕ್ಕಾಗಿ ತಿಳಿಸುವುದೇ(ಸಿದ್ಧಾಂತ) ಆಗಿದೆ. ಜ್ಞಾನಾರ್ಜನೆಯ ಅನುಕೂಲಕೋಸ್ಕರವಾಗಿ ಕಕಾರುವಾಕ್ಕಾದ ಆಂತರಿಕ ಸಂಬಂಧ ಉಳ್ಳಕಲ್ಪನೆ ಹಾಗೂ ತಾತ್ವಿಕತೆಯ ಆಧಾರದ ಮೇಲೆ ಹುಟ್ಟಿ ಹೊರಬರುವಂತಹುದೆ ಸಿದ್ಧಾಂತ. ಸಂಶೋಧಕ ಗಮನಿಸಿಲ್ಲವಾದ ವಿಷಯದ ಬಗ್ಗೆ ಗಮನಿಸಲು ಅವಕಾಶ, ಘಟನಾವಳಿಗಳ ಬಗ್ಗೆ ಸೂಕ್ತ ವಿವರಣೆ ಹಾಗೂ ಅವುಗಳ ಪರಸ್ಪರ ಸಂಬಂಧ ಮತ್ತು ಸುಪ್ತಜ್ಞಾನವನ್ನು ಹೊರತೆಗೆಯುವುದರ ಜೊತೆಗೆ ಇವೆಲ್ಲದರ ಇಡೀ ಚಿತ್ರಣವನ್ನು ಒಂದೆಡೆ ಇಡುವುದೇ ಸಿದ್ಧಾಂತ. ಸಿದ್ಧಾಂತ ಎಂದರೆ ಪ್ರಾಯೋಗಿಕ ಯೋಗ್ಯ ವಿಷಯಗಳ ತರ್ಕಬದ್ಧ ಸಂಕ್ಷಿಪ್ತ ಮಂಡನೆ. ಎಲ್ಲರಿಗೂ ಅನ್ವಯವಾಗುವಂತಹ ಸಾಮಾನ್ಯ ವಿಷಯಗಳ ನಡುವಿನ ಸಂಬಂಧವನ್ನು ಒಂದು ನಿಗದಿತ ಚೌಕಟ್ಟಿನಲ್ಲಿ ಮಂಡಿಸುವಂತಹದ್ದೇ ಸಿದ್ಧಾಂತ.

## 1.3 ಆಡಳಿತಾತ್ಮಕ ಸಿದ್ಧಾಂತದ ಲಕ್ಷಣಗಳ

ಸಿದ್ಧಾಂತವನ್ನು ಅಭಿವೃದ್ಧಿ ಪಡಿಸುವುದು ಒಂದು ಕಾರಣಕ್ಕಾಗಿ ಹೇಗೆ ಎಂದರೆ ಮುಂದೆ ಆಗ ಬಹುದಾದುದನ್ನು ಕರಾರುವಾಕ್ಕಾಗಿ ಊಹಿಸುವುದು, ವಿಷಯಗಳ ವಾಸ್ತವ ಸ್ಥಿತಿ ಕುರಿತಂತೆ ನೈಜ ಚಿತ್ರಣ ಹೊರತರುವುದು, ನೈಜ ದೃಷ್ಟಿ ಕೋನದಿಂದ ಹೊಸತನ್ನು ಕಾಣಲು  ಉತ್ತೇಜಿಸುವುದು, ಹಾಗೂ ಇವುಗಳೆಲ್ಲದರ ಆಧಾರದ ಮೇಲೆ ಸಿದ್ಧಾಂತವನ್ನು ರೂಪಿಸುವುದು. ಪರೀಕ್ಷಿಸಲ್ಪಡಬಹುದಾದ ವಿಷಯಗಳ ಬಗ್ಗೆ ವಿವರಣೆ ಅದರ ಜೊತೆಗೆ ಹೊಸ ವಿಷಯಗಳ ಬಗ್ಗೆ ಗಹನವಾದ ತಿಳುವಳಿಕೆ ಹಾಗೂ ಇದಕ್ಕೆ ಪೂರಕವಾಗಿ ಸಂಗ್ರಹಿಸುವ ವಿಷಯಗಳು ಇವುಗಳ ಆಧಾರದ ಮೇಲೆ ಕೈಗೊಳ್ಳುವ ಕಾರ್ಯವೇ ಸಿದ್ಧಾಂತದ ರಚನೆ ಸಮಸ್ಯೆಯನ್ನು ಪತ್ತೆ ಹಚ್ಚುವುದು ಅದನ್ನು ವರ್ಗೀಕರಿಸುವುದರಲ್ಲಿ ಸಿದ್ಧಾಂತ ಸಹಾಯ ಮಾಡುತ್ತದೆ. ಸಂಘಟನೆಯ ಕಾರ್ಯ ಕಲಾಪಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಹಾಗೂ ಮುಂದೆ ಆಗಬಹುದಾದ ಭವಿಷ್ಯಗ ಬಗ್ಗೆ ವರ್ಚಸ್ಸು ಬೀರುವುದೇ ಸಿದ್ಧಾಂತ. ನಿರ್ಧರಿತ ಗುರಿ ತಲುಪಲು ಇರುವ ಮಾರ್ಗವೇ ಸಿದ್ಧಾಂತ. ಸಾರ್ವಜನಿಕ ಆಡಳಿತ ಮಾತ್ರವಲ್ಲದೆ ಯಾವ ಶಿಕ್ಷಣ ಕ್ರಮವೇ ಆಗಿರಲಿ ಅದು ಸಂಪೂರ್ಣ ಬೆಳೆಯಲು ಹಾಗೂ ಅಭಿವೃದ್ಧಿ ಪಡಿಸಲು ಅತ್ಯಗತ್ಯವಾಗಿರುವುದೇ ಸಿದ್ಧಾಂತ. ಕೊನೆಯದಾಗಿ ವೈಜ್ಞಾನಿಕವಾಗಿ ಗುರಿ ತಲುಪಲು ಸಾಕಷ್ಟು ಸಹಕಾರಿಯಾಗಿರುವುದೇ ಸಿದ್ಧಾಂತ. ಆದುದರಿಂದ ಒಳ್ಳೆಯ ಸಿದ್ಧಾಂತಗಳು ಸಂಕ್ಷಿಪ್ತವಾಗಿರುವುದರ ಜೊತೆಗೆ ಅನೇಕ ಪ್ರಮುಖ ವಿಷಯಗಳ ಬಗ್ಗೆ ವೀಕ್ಷಣಾ ವಿಧಾನವನ್ನು ಕಡಿಮೆ ಮಾಡಿಕೊಂಡಿರುತ್ತದೆ. ಒಂದು ಒಳ್ಳೆಯ ಸಿದ್ಧಾಂತದಲ್ಲಿ ಕ್ರಮ ಬದ್ಧ ಹಾಗೂ ಅರ್ಥ ಕೊಡುವ ಹೇಳಿಕೆಗಳ ಜೊತೆಗೆ ಅದರ ನಿಯಂತ್ರಣದ ಬಗ್ಗೆ ನಿಗಾ ವಹಿಸಬೇಕು. ಸಿದ್ಧಾಂತ ಯಾವಾಗಲೂ ಸಂಶೋಧನೆಗೆ ಮಾರ್ಗದರ್ಶನ ವಾಗುವಂತಿರಬೇಕು. ಅದು ಯಾವಾಗಲೂ  ಯಾವ ಮಾದರಿ ಅಂಕಿ ಅಂಶಗಳು ಸಂಶೋಧನೆಗೆ ಯೋಗ್ಯ ಎಂಬುದನ್ನು ಕರಾರುವಾಕ್ಕಾಗಿ ತೋರಿಸಬೇಕು. ಸಿದ್ಧಾಂತದಲ್ಲಿ ಗಮನಿಸಬೇಕಾದ  ಮತ್ತೊಂದು ಅಂಶ ಏನೆಂದರೆ ಸಂಶೋಧನೆಯಿಂದ ಹೊರಬಿದ್ದ ಉಪಯುಕ್ತ ವಿಷಯಗಳ ಸದ್ಬಳಕೆಯಾಗಬೇಕು. ಆಂತರಿಕ ಹಾಗೂ ಬಾಹ್ಯವಾಗಿ ತರ್ಕಬದ್ಧ ಹಾಗೂ ಸಂಕ್ಷಿಪ್ತ ವಿವರಗಳನ್ನೊಳಗೊಂಡ ಪೌಡ ಪ್ರಬಂಧವನ್ನು ಒಳ್ಳೆಯ ಸಿದ್ಧಾಂತವೆಂದು ಕರೆಯಬಹುದು.  ಹಾಗೂ ಮೌಲ್ಯಾಧಾರಿಕ ಸಿದ್ಧಾಂತ ಪರೀಕ್ಷಿಸಲು ಅಥವಾ ಪ್ರಯೋಗ ನಡೆಸಲು ಸಿದ್ಧವಿರಬೇಕು

## 1.4 ಸಿದ್ಧಾಂತ ಹಾಗೂ ವಾಸ್ತವಾಂಶ

ಸಿದ್ಧಾಂತ ಮತ್ತು ವಾಸ್ತವಾಂಶದೊಳಗಿನ ಗಹನವಾದ ಸಂಬಂಧವು ಆಧುನಿಕ ವಿಜ್ಞಾನದ ಬುನಾದಿಯಾಗಿದೆ. ಸಿದ್ಧಾಂತವನ್ನು ಊಹೆಯೆಂದು ತಪ್ಪಾಗಿ ಭಾವಿಸಲಾಗಿದೆ. ಆದ್ದುದರಿಂದ  ಸಿದ್ಧಾಂತವು ರುಜುವಾತು ಮಾಡಲ್ಪಡುವ ಮೊದಲು ಊಹೆಯಾಗೆ ಉಳಿಯುತ್ತದೆ. ಸಾಧನೆ ಮಾಡಿದ ಮೇಲೆ ಸಿದ್ಧಾಂತವು ವಾಸ್ತವಾಂಶವಾಗುತ್ತದೆ. ವಾಸ್ತವಾಂಶಗಳು ಖಚಿತವಾದುವುಗಳೆಂದು

ನಿಶ್ಚಯವಾದುವುಗಳೆಂದು, ಪ್ರಶ್ನಾತೀತವೆಂದು ಮತ್ತು ಅವುಗಳ ಅರ್ಥ ಸ್ವಯಂ ವಿಧಿತವೆಂದು ಭಾವಿಸಲಾಗುತ್ತದೆ. ವಿಶೇಷವೆಂದರೆ ಈ ಸಾಮಾನ್ಯ ತಪ್ಪು ಕಲ್ಪನೆಯಲ್ಲಿ ವಿಜ್ಞಾನವು ವಾಸ್ತವಾಂಸಗಳಿಗಷ್ಟೆ ಸಂಬಂಧಿಸಿದೆ ಎಂದು ತಿಳಿಯಲಾಗುತ್ತದೆ. ಅಲ್ಲದೆ ಸಿದ್ಧಾಂತವು ತತ್ವಜ್ಞರ ಕಾರ್ಯಕ್ಷೇತ್ರವೆಂದು ತಿಳಿಯಲಾಗುತ್ತದೆ. ಆದ್ದುದರಿಂದ ವೈಜ್ಞಾನಿಕ ಸಿದ್ಧಾಂತವು ಕೇವಲ ಯಾವುದೊಂದು ವಿಷಯದ ಬಗ್ಗೆ ಕ್ರೋಡಿಕರಿಸಲ್ಪಟ್ಟ ವಾಸ್ತವಾಂಶಗಳ ಮೊತ್ತವೆಂದು ಭಾವಿಸುತ್ತಾರೆ. ಆದರೆ ಈ ಕಾರ್ಯವೂ ಸಹ ಪರಿಮಿತವಾದುದು ಏಕೆಂದರೆ ವಾಸ್ತವಾಂಶಗಳು ಸ್ವಯಂ ವಿಧಿತವಾಗಿರುತ್ತವೆ.

ಆದರೆ ವಿಜ್ಞಾನಿಗಳ ಪ್ರಕಾರ ಸಿದ್ಧಾಂತ ಮತ್ತು ವಾಸ್ತವಾಂಶಗಳು ಅವಿಭಾಜ್ಯವಾಗಿ ಹೆಣೆಯಲ್ಪಟ್ಟಿವೆ. ಹಾಗೂ ಸಿದ್ಧಾಂತವು ವಿಜ್ಞಾನಿಗಳ ಪ್ರಕಾರ ಊಹೆಯಲ್ಲಿ ಹಾಗೂ ವಿಜ್ಞಾನಿಗಳು ಸಿದ್ಧಾಂತ ಮತ್ತು ವಾಸ್ತವಾಂಶಗಳೆರಡರಲ್ಲೂ ಇಚ್ಛೆ ಉಳ್ಳವರಾಗಿದ್ದಾರೆ. ವಿಜ್ಞಾನಿಗಳು ವಾಸ್ತವಾಂಶಗಳನ್ನು ನೋಡುವ ದೃಷ್ಟಿ ಸಾಮಾನ್ಯ ಕಲ್ಪನೆಗಿಂತ ಭಿನ್ನವಾಗಿರುತ್ತದೆ. ವಾಸ್ತವಾಂಶವು ಅನುಭವದಿಂದ ಪ್ರಮಾಣೀಕರಿಸಬಹುದಾದ ವೀಕ್ಷಣೆ ಎಂದು ಪರಿಗಣಿಸಲ್ಪಡುತ್ತದೆ. ವಿಜ್ಞಾನಿಗೆ ಸಿದ್ಧಾಂತವು ವಾಸ್ತವಾಂಶದೊಳಗಿನ ಸಂಬಂಧವನ್ನು ಇಲ್ಲವೇ ಆ ವಾಸ್ತವಾಂಶಗಳ ಅರ್ಥ ಪೂರ್ಣ ಜೋಡಣೆಯನ್ನು ಸೂಚಿಸುತ್ತದೆ. ವಾಸ್ತವಾಂಶಗಳ ಅನುಭವದಿಂದ ಪ್ರಮಾಣಿಕರಿಸಬಹುದಾದ ವೀಕ್ಷಣೆಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಕಲೆಹಾಕಲ್ಪಡದಿದ್ದರೆ ಆಧುನಿಕ ವಿಜ್ಞಾನವನ್ನು ಸೃಷ್ಟಿಸಲು ಸಾಧ್ಯವಾಗುತ್ತಿರಲಿಲ್ಲ. ಒಂದು ಕ್ರಮ ಪದ್ದತಿ ಇಲ್ಲದೆ, ಒಂದು ವ್ಯವಸ್ಥಿತ ರೀತಿ ಇಲ್ಲದೆ ಸಂಕ್ಷಿಪ್ತವಾಗಿ ಹೇಳುವುದದರೆ ಒಂದು ಸಿದ್ಧಾಂತವಿಲ್ಲದ ವಿಜ್ಞಾನವು ಮುನ್ಸೂಚನೆಯನ್ನು ಕೊಡಲಾರದು ಮುನ್ಸೂಚನೆಗಳಿಲ್ಲದೆ ಭೌತ ಜಗತ್ತಿನ ಮೇಲೆ ನಿಯಂತ್ರಣವಿರಲಾರದು. ಆದುದರಿಂದ ವಿಜ್ಞಾನದ ವಾಸ್ತವಾಂಶಗಳು ಅವ್ಯವಸ್ಥಿತ ವೀಕ್ಷಣೆಗಳ ಪ್ರತಿಫಲವಾಗಿರದೆ, ಸಿದ್ಧಾಂತಕ್ಕೆ ಅರ್ಥಪೂರ್ಣ ಸುಸಂಗತವಾದಿ ವೀಕ್ಷಣೆಗಳು ಪ್ರತಿಫಲವಾಗಿವೆಯೆಂದು ಹೇಳುಬಹುದು. ಹೀಗಾಗಿ ವಾಸ್ತವಾಂಶ ಮತ್ತು ಸಿದ್ಧಾಂತಗಳನ್ನು ಪರಸ್ಪರ ವಿರೋಧಿಗಳೆಂದು ತಿಳಿಯಲಾಗುವುದಿಲ್ಲ ಬದಲಾಗಿ ಅವುಗಳು ಬಹುತರದ ರೀತಿಯಲ್ಲಿ ಪರಸ್ಪರ ಸಂಬಂಧಿತವಾಗಿವೆ. ವಿಜ್ಞಾನ ಪ್ರಗತಿಯನ್ನು ಸಿದ್ಧಾಂತ ಮತ್ತು ವಾಸ್ತವಾಂಶಗಳ ಅವ್ಯಾಹಕವಾದ ಪರ್ಸಪರ ಸಂಘರ್ಷಣೆಯ ಪರಿಣಾಮವೆಂದು ಪರಿಗಣಿಸಬಹುದಾಗಿದೆ.

## 1.5 ಸಿದ್ಧಾಂತದ ಪಾತ್ರ

ಅಧ್ಯಯನ ಮಾಡುವ ವಾಸ್ತವಾಂಶಗಳ ವ್ಯಾಪ್ತಿಯನ್ನು ಕಿರಿದಾಗಿಸುವುದು ಸಿದ್ಧಾಂತದ ಒಂದು ಮುಖ್ಯ ಕಾರ್ಯವಾಗಿದೆ. ಯಾವ ಘಟನೆಯಾಗಲಿ ಅಥವಾ ವಸ್ತುವಾಗಲಿ ಅದನ್ನು ಬಹುವಿಧದಲ್ಲಿ ಅಭ್ಯಾಸ ಮಾಡಬಹುದು. ಹೀಗಾಗಿ ಸಿದ್ಧಾಂತ ಒಂದು ವಿಚಾರ ಪದ್ಧತಿ ಎಂದರೆ ತಪ್ಪಾಗಲಾರದು. ಮೂಲ ಕಲ್ಪನಾತ್ಮಕವಾಗಿ ಮತ್ತು ವರ್ಗೀಕರಣ ಪದ್ಧತಿಯಾಗಿ ಸಿದ್ಧಾಂತವನ್ನು ಪರಿಗಣಿಸಬಹುದಾಗಿದೆ. ಉದಾಹರಣೆಗೆ ಪ್ರತಿ ವಿಜ್ಞಾನವೂ ಅದರಲ್ಲಿ ಅಭ್ಯಸಿಸುವ ಮುಖ್ಯ ಪ್ರಕ್ರಿಯೆಗಳ ಹಾಗೂ ವಸ್ತುಗಳ ವಿಷಯಕ್ಕೆ ಸಂಬಂಧಿಸಿದಂತಹ ಮೂಲ ಕಲ್ಪನೆಗಳ ಅಸ್ತಿಭಾರದಿಂದ ವ್ಯವಸ್ಥೆಗೊಂಡಿರುತ್ತದೆ. ಮೂಲ ಕಲ್ಪನೆಗಳೊಳಗಣ ಈ ಸಂಬಂಧಗಳನ್ನೇ ವಿಜ್ಞಾನದ ವಾಸ್ತವಾಂಶಗಳೆಂದು ಕರೆಯುತ್ತಾರೆ. ಇಂತಹ ಶಬ್ದಗಳೇ ವಿಜ್ಞಾನಿಯು ಉಪಯೋಗಿಸುವ ವಿಶಿಷ್ಟ ಶಬ್ದಕೋಶವಾಗುತ್ತದೆ. ಇವು ವಿಜ್ಞಾನ ಬೆಳೆದಂತೆ ಬದಲಾಗುತ್ತವೆ. ಏಕೆಂದರೆ ಆಗ ಬೇರೆ ಬೇರೆ ಘಟನೆಗಳು ಮುಖ್ಯ ಪಾತ್ರ ವಹಿಸತೊಡಗುತ್ತದೆ. ಆದರೂ ಜ್ಞಾನವು ವ್ಯವಸ್ಥಿತವಾಗ ಬೇಕಾದರೆ ವೀಕ್ಷಣೆಯ ವಾಸ್ತವಾಂಶಗಳ ಮೇಲೆ ಯಾವುದಾದರು ಕ್ರಮ ಪದ್ಧತಿಯನ್ನು ಅನುಸರಿಸಬೇಕಾಗುತ್ತದೆ. ಆದ್ದರಿಂದ ಯಾವುದೇ ವಿಜ್ಞಾನದಲ್ಲಾದರು ಮುಖ್ಯ ಸಮಸ್ಯೆ ಎಂದರೆ ವರ್ಗೀಕರಣ ಕ್ರಮ ಪದ್ಧತಿಯನ್ನು ಮೂಲ ಕಲ್ಪನೆಗಳ ಅಸ್ತಿ ಭಾರವನ್ನು ಮತ್ತು ಈ ಪದಗಳಿಗೆ ಹೆಚ್ಚು ನಿಖರವಾದ ನಿರೂಪಣೆ ಬೆಳೆಸುವುದು ಸೂಕ್ತವಾಗಿರುತ್ತದೆ. ಸಿದ್ಧಾಂತದ ಮತ್ತೊಂದು ಕಾರ್ಯವೇನೆಂದರೆ ಸಾರಾಂಶೀಕರಣ. ಸಿದ್ಧಾಂತವು ಕೈಗೊಳ್ಳುವ ಮತ್ತೊಂದು ಕಾರ್ಯವೇ ಸಾರಾಂಶೀಕರಣ. ಎಂದರೆ ಅಧ್ಯಯನ ವಸ್ತುವಿನ ಬಗ್ಗೆ ಈಗಾಗಲೇ ತಿಳಿದಿರುವ ವಿಷಯಗಳನ್ನು ಸ್ವಲ್ಪದರಲ್ಲೇ ಸಂಕ್ಷೇಪಿಸಿ ಹೇಳುವುದು ಎಂದರ್ಥ. ಮತ್ತೊಂದು ಸಿದ್ಧಾಂತದ

ಪ್ರಮುಖ ಪಾತ್ರ ಏನೆಂದರೆ ವಾಸ್ತವಾಂಶವನ್ನು ತಿಳಿಸುವುದು ಅದೇನೆಂದರೆ ಸಿದ್ಧಾಂತವು ದತ್ತಗಳನ್ನು ಸಾರಾಂಶೀಕರಿಸುವುದಾದರೆ ತಾತ್ಕಾಲಿಕ ವೀಕ್ಷಣೆಗೆಳಾಚೆಯ ಸಾಮಾನ್ಯ ಏಕತೆಯನ್ನು ಹೇಳುವುದಾದರೆ ಅದು ವಾಸ್ತವದ ಮುನ್ಸೂಚಕವೂ ಆಗುತ್ತದೆ. ಮುನ್ಸೂಚನೆಗೆ ಅನೇಕ ಮುಖಗಳಿರುತ್ತದೆ. ಸಿದ್ಧಾಂತವು ತಿಳಿದ ವಾಸ್ತವಾಂಶಗಳನ್ನು ಸಾರಾಂಶೀಕರಿಸುವುದರಿಂದ ಮತ್ತು ವೀಕ್ಷಿಸಲ್ಪಡದ ವಾಸ್ತವಾಂಶಗಳನ್ನು ಮುನ್ಸೂಚಿಸುವುದರಿಂದ ಅದು ಇನ್ನೂ ಅನ್ವೇಷಿಸಲ್ಪಡದ ಕ್ಷೇತ್ರಗಳನ್ನು ಕೂಡ ಸೂಚಿಸುತ್ತದೆ. ಈ ರೀತಿಯಾದ ಮುನ್ಸೂಚನೆಯ ವಾಸವಾಂಶವೂ ನಮ್ಮ ಜ್ಞಾನವನ್ನು ಎಲ್ಲಿ ಪರೀಕ್ಷಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತದೆ.

## 1.6 ವಾಸ್ತವಾಂಶದ ಪಾತ್ರ

ಸಿದ್ಧಾಂತ ಮತ್ತು ವಾಸ್ತವಾಂಶಗಳು ಸತತವಾಗಿ ಪರಸ್ಪರ ಪರಿಣಾಮಕಾರಿಗಳಾಗಿರುತ್ತವೆ. ಒಂದರಲ್ಲಿಯ ಬೆಳವಣಿಗೆಗಳು ಇನ್ನೊಂದರಲ್ಲಿಯ ಬೆಳವಣಿಗೆಗೆ ಕಾರಣವಾಗಬಹುದು. ಸಿದ್ಧಾಂತವು ವ್ಯಕ್ತಿಯಾಗಿರಲಿ ಅಲ್ಲದಿರಲಿ ಜ್ಞಾನಕ್ಕೆ ಮತ್ತು ಅರಿವಿಗೆ ಸಹ ಮೂಲವಾಗಿರುತ್ತದೆ. ಸಿದ್ಧಾಂತವು ಕೇವಲ ನಿಷ್ಕ್ರಿಯ ವಸ್ತುವಲ್ಲ. ಅದು ವಾಸ್ತವಾಂಶವನ್ನು ಹೊರಗೆಡವುವಲ್ಲಿ ಚುರುಕಾದ ಪಾತ್ರವಹಸುತ್ತದೆ. ಈ ರೀತಿಯ ವಾಸ್ತವಾಂಶವು ಸಿದ್ಧಾಂತವನ್ನು ರೂಪಿಸುತ್ತದೆ. ವಿಜ್ಞಾನ ಚರಿತ್ರೆಯಲ್ಲಿಯ ಮಾವನ ಕುತೂಹಲದ ಬಹಳ ಕತೆಗಳು ಹೇಗೆ ಅಕಸ್ಮಾತಾಗಿ ಘಟಿಸಿದ ಆಶ್ಚರ್ಯಕರ ವಾಸ್ತವಾಂಶವು ಮುಖ್ಯವಾದ ಹೊಸ ಸಿದ್ಧಾಂತಗಳಿಗೆ ದಾರಿ ಮಾಡಿಕೊಟ್ಟಿದೆ ಎಂಬುದನ್ನು ವಿವರಿಸುತ್ತವೆ. ಇದನ್ನೇ ಸಾರ್ವಜನಿಕರು ಶೋಧನೆ, ದರ್ಶನ ಎಂದು ಕರೆಯುವುದು. ವಾಸ್ತವಾಂಸಗಳು ಸಿದ್ಧಾಂತವನ್ನು ಪೂರ್ಣವಾಗಿ ನಿರ್ಣಯಿಸಲಾರವು ಏಕೆಂದರೆ ಒಂದು ವಿಶಿಷ್ಟ ವೀಕ್ಷಣಾ ಸಮೂಹವನ್ನು ವಿವರಿಸಲು ಅನೇಕ ಸಿದ್ಧಾಂತಗಳನ್ನು ಬೆಳೆಸಬಹುದು. ಆದಾಗ್ಯೂ ವಾಸ್ತವಾಂಶಗಳು ಇವೆರಡರಲ್ಲಿ ಹೆಚ್ಚು ಗಟ್ಟಿಯಾದವು . ಯಾವುದೇ ಸಿದ್ಧಾಂತವಾಗಲಿ ವಾಸ್ತವಾಂಶಕ್ಕೆ ಹೊಂದಿಕೊಳ್ಳಲೇಬೇಕು. ಇಲ್ಲವಾದರೆ ಅದು ನಿರಾಕರಿಸಲ್ಪಡುತ್ತದೆ. ಅಥವಾ ಪುನರ್ ಪ್ರತಿಪಾದಿಸಬೇಕಾಗುತ್ತದೆ. ಸಂಶೋಧನೆಯು ಅವಿರತ ಕಾರ್ಯವಾದುದರಿಂದ ನಿರಾಕರಣೆ ಮತ್ತು ಪುನರ್ ಪ್ರತಿಪಾದನೆಗಳು ಏಕಕಾಲಕ್ಕೆ ನಡೆಯುತ್ತಿರುವ ಸಾಧ್ಯತೆ ಇದೆ. ವಾಸ್ತವಾಂಶಗಳು ಸಿದ್ಧಾಂತವನ್ನು ಪುನರ್ನಿರೂಪಿಸುತ್ತದೆ ಹಾಗೂ ಪುಷ್ಟೀಕರಿಸುತ್ತದೆ. ಹೇಳುವುದಾದರೆ ಸಾಮಾನ್ಯವಾಗಿ ಪ್ರಯೋಗಾಲಯದಲ್ಲಾಗಲಿ ಅಥವಾ ವಾಸ್ತವ ಕ್ಷೇತ್ರದಲ್ಲಾಗಲೀ ಪರೀಕ್ಷಿಸುವ ಮೊದಲು ವಿಜ್ಞಾನಿಯು ತನ್ನ ಸಮಸ್ಯೆಯನ್ನು ದೀರ್ಘಕಾಲ ವಿವೇಚಿಸಿರುತ್ತಾನೆ. ಆದ್ದುದರಿಂದ ಪ್ರಯೋಗಗಳಲ್ಲಿ ಕಂಡುಬರುವ ಪರಿಣಾಮಗಳಿಂದ ಆತ ಚಕಿತನಾಗುವುದಿಲ್ಲ. ಆಕಸ್ಮಿಕವಾಗಿ ಮಾತ್ರ ಹಿಂದಿನ ಸಿದ್ಧಾಂತಕ್ಕೆ ಹೊಂದಿಕೊಳ್ಳದ ವಾಸ್ತವಾಂಶಗಳನ್ನು ಕಂಡುಹಿಡಿಯುತ್ತಾನೆ ಅಥವಾ ಸಮಾನ ಸಾಕ್ಷಿ ಉಳ್ಳ ಎರಡು ಪರ್ಯಾಯ ಮೂಲ ಕಲ್ಪನೆಗಳನ್ನು ಪರೀಕ್ಷಿಸುತ್ತಾನೆ. ಮುಖ್ಯವಾಗಿ ಆತನ ಕೆಲಸವು ತಾನು ಸತ್ಯವೆಂದು ನಂಬಿದುದನ್ನು ಪ್ರತ್ಯೇಕ್ಷ ತೋರಸುವುದಾಗಿರುತ್ತದೆ. ಆದರೂ ಸಿದ್ಧಾಂತಕ್ಕೆ ಹೊಂದಿಕೊಳ್ಳುವ ಹೊಸ ವಾಸ್ತವಾಂಶಗಳು ಯಾವಾಗಲೂ ಸಿದ್ಧಾಂತವನ್ನು ಪುನರ್ ನಿರೂಪಿಸುತ್ತದೆ. ಏಕೆಂದರೆ ಸಿದ್ಧಾಂತವು ಬಹುಸಾಮಾನ ರೀತಿಯಲ್ಲಿ ಹೇಳುವುದನ್ನು ಅವು ವಿವರವಾಗಿ ಹೇಳುತ್ತದೆ. ಅವು ಸಿದ್ಧಾಂತದ ಮೂಲ ಕಲ್ಪನೆಗಳ ಮೇಲೆ ಹೊಸ ಬೆಳಕು ಬೀರುತ್ತದೆ. ಆಡಳಿತಾತ್ಮಕ ಸಿದ್ಧಾಂತ ಪಾಶ್ಚತ್ಯಾ ರಾಷ್ಟ್ರ ಹಾಗೂ ಬಹುಮುಖ್ಯವಾಗಿ ಅಮೇರಿಕಾದಲ್ಲಿ ಜನ್ಮ ತಾಳಿತು ಎಂದರೆ ತಪ್ಪಾಗಲಾರದು. ಬಂಡವಾಳ ಶಾಹಿ ಮತ್ತು ಬಹುತ್ವವಾದ ಸಮ್ಮಿಳಿತ ಹಾಗೂ ಅಮೇರಿಕಾದ ರಾಜಕೀಯ ಸಂಸ್ಕೃತಿ ಒಂದಲ್ಲಾ ಒಂದು ವಿಧದಲ್ಲಿ ಸಿದ್ಧಾಂತದ ಹುಟ್ಟುವಳಿಗೆ ಕಾರಣವಾಯಿತು ಎಂದರೆ ತಪ್ಪಾಗಲಾರದು. ಆದೇಶದ ಮಹತ್ವ ಪೂರ್ಣ ಶಿಸ್ತು ನಿರ್ವಹಣಾ ಕೌಶಲ್ಯ ಇವುಗಳ ಪ್ರೇರಣೆಯೂ ಸಹ ಸಿದ್ಧಾಂತದ ಹುಟ್ಟುವಳಿಗೆ ನಾಂದಿ ಹಾಕಿತು. ಈ ಹಿನ್ನೆಲೆಯಲ್ಲಿ ಮಾರ್ಕ್ಸ್‌ರವರ ಸಮಾಜವಾದಿ ಸಾರ್ವಜನಿಕ ಆಡಳಿತ ಸಿದ್ಧಾಂತ ಸಿಗುವ ಉದಾಹರಣೆಗಳಲ್ಲಿ ಒಂದಾಗಿ ಪರಿಗಣಿಸಬಹುದಾದಗಿದೆ. ಮಾರ್ಕ್ಸ್‌ನ ಪ್ರತಿಪಾದನೆಗೆ ಸಂಬಂಧಿಸಿದಂತೆ ದೊಡ್ಡ ಸಮಾಜಿಕ ರಚನೆಯಲ್ಲಿ ರಾಜಕೀಯ ಆರ್ಥಿಕ ಅಗತ್ಯಗಳ ಐತಿಹಾಸಿಕ ಬದಲಾವಣೆ, ಸಂಘಟನೆಯ ವಿಶ್ಲೇಷಣೆ ಮತ್ತು ಸಾರ್ವಜನಿಕ ಆಡಳಿತದ ಅಭ್ಯಾಸಕ್ಕೆ ಕಾರಣವಾಗುತ್ತದೆ. ರಾಜ್ಯದ ಸ್ವಭಾವದ ಬಗ್ಗೆ ಮಾರ್ಕ್ಸ್ ಹಾಗೂ ಮಾರ್ಕ್ಸ್‌ನ ನವ್ಯ ಸಾಹಿತ್ಯ ಸಾರ್ವಜನಿಕ ಆಡಳಿತದ ಸಿದ್ಧಾಂತಕ್ಕೆ ನಾಂದಿ ಹಾಕಿತು

ಎಂದರೆ ತಪ್ಪಾಗಲಾರದು ಸಾಂಪ್ರದಾಯಿಕವಾಗಿ ಸಾಕಷ್ಟು ಪರಿಶೀಲನೆಗೆ ಮತ್ತು ಪರೀಕ್ಷೆಗೆ ಒಳಪಟ್ಟು ಹೊರಬಂದಂತಹ ಸಾರ್ವನಿಕ ಆಡಳಿತ ಸಿದ್ಧಾಂತವನ್ನು ತೀವ್ರವಾದಿಗಳು ನಿಷೇದಿಸುತ್ತಿರುವುದನ್ನು ಕಾಣಬಹುದಾಗಿದೆ. ಈ ರೀತಿ ತೀವ್ರಗಾಮಿಗಳ ನಿಷೇದ ಹಾಗೂ ಅವರ ಇಚ್ಛಾನುಸಾರ ಹೊರಬರುವ ಆಡಳಿತ ಸಿದ್ಧಾಂತ ನಿಜಕ್ಕೂ ಒಂದು ನಿಶ್ಚಿತ ರೂಪವನ್ನು ಪಡೆಯಬೇಕಾಗಿದೆ. ಇಷ್ಟೆಲ್ಲಾ ಪ್ರಶ್ನಾತೀತವಾದಾಗ್ಯೂ ಸಹ ತೃತೀಯ ಜಗತ್ತಿನ ವಿದ್ವಾಂಸರೂ, ಬರಹಗಾರರೂ ತೃತೀಯ ಜಗತ್ತಿನ ಸಮಾಜಿಕ ಹಾಗೂ ರಾಜಕೀಯದ ನೈಜ ಚಿತ್ರಣವನ್ನು ಸೈದ್ಧಾಂತಿಕ ರೂಪದಲ್ಲಿ ವಿವರಿಸಲು ಮುಂದಾದರು.

**ಸಾರ್ವಜನಿಕ ಆಡಳಿತದ ಸಿದ್ಧಾಂತ ಎರಡು ಪ್ರಮುಖ ವಿಷಯಗಳ ವರ್ಚಸ್ಸಿಗೆ ಒಳಗಾಗಿದೆ.**

1) ಒಂದು ಸಾಮಾನ್ಯ ವ್ಯವಸ್ಥೆಯಲ್ಲಿ ವಿಶ್ವವ್ಯಾಪ್ತಿ ಮನ್ನಣೆ ಪಡೆಯಬಹುದಾದಂತಹ ಸಿದ್ಧಾಂತ.

2) ತೃತೀಯ ಜಗತ್ತಿಗೆ ಸಂಬಂಧಿಸಿದಂತೆ ವಿಶೇಷವಾಗಿ ಸೈದ್ಧಾಂತಿಕ ಚಿತ್ರಣವನ್ನು ರೂಪಿಸುವುದು.

ತೃತೀಯ ಜಗತ್ತಿನಲ್ಲಿ ಪಡೆದಂತಹ ಅನುಭವ ಆಧಾರದ ಮೇಲೆ ಆಡಳಿತಕ್ಕೆ ಸಂಬಂಧಿಸಿದಂತೆ ಹೊಸ ಸಿದ್ಧಾಂತದ ನಿರೂಪಿಸುವುದು

ಸಂಘಟಿತ ಸಮಾಜದಲ್ಲಿ ಆಡಳಿತಾತ್ಮಕ ಸಿದ್ಧಾಂತವನ್ನು ಕಡೆಗಣಿಸಲಾಗದು. ಈ ರೀತಿಯಾಗಿ ಸಾರ್ವಜನಿಕ ಆಡಳಿತ ತನ್ನದೇ ಆದ ವ್ಯವಸ್ಥಿತ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ಈ ಆಡಳಿತಾತ್ಮಕ ಸಿದ್ಧಾಂತ ಬದಲಾವಣೆಗೆ ಸ್ಪಂದಿಸುವುದರ ಜೊತೆಗೆ ಅದಕ್ಕೆ ಸೂಕ್ತ ಕಾರಣಗಳನ್ನು ಕೂಡ ವಿವರಿಸಬೇಕಾಗಿದೆ. ಇದು ಸಾರ್ವಜನಿಕ ಆಡಳಿತ ಶಿಕ್ಷಣ ಒಳಗೊಂಡಂತೆ ತನ್ನದೇ ಆದ ಆಂತರಿಕ ವ್ಯವಹಾರವನ್ನು ಒಳಗೊಂಡಿರುತ್ತದೆ.

**ನಿಮ್ಮ ಪ್ರಗತಿ ಪರೀಶೀಲನೆ - 1**

ಸೂಚನೆ : 1) ಖಾಲಿ ಇರುವ ಜಾಗವನ್ನು ನಿಮ್ಮ ಉತ್ತರಕೋಸ್ಕರ ಉಪಯೋಗಿಸಿ

2) ನಿಮ್ಮ ಉತ್ತರವನ್ನು ಈ ಘಟಕದ ಅಂತ್ಯದಲ್ಲಿ ನೀಡಿರುವ ಮಾದರಿ ಉತ್ತರದೊಡನೆ ಪರಿಶೀಲಿಸಿ.

1) ಆಡಳಿತಾತ್ಮಕ ಸಿದ್ಧಾಂತದ ಅರ್ಥ ಸ್ವಭಾವ ಹಾಗೂ ಪ್ರಾಮುಖ್ಯತೆಯನ್ನು ವಿವರಿಸಿ.

.............................................................................................................

.............................................................................................................

.............................................................................................................

.............................................................................................................

.............................................................................................................

.............................................................................................................

2) ಆಡಳಿತಾತ್ಮಕ ಸಿದ್ಧಾಂತದ ಲಕ್ಷಣಗಳಾವುವು?

.............................................................................................................

.............................................................................................................

.............................................................................................................................

.............................................................................................................................

.............................................................................................................................

.............................................................................................................................

3) ಸಿದ್ಧಾಂತ ಮತ್ತು ವಾಸ್ತವಾಂಶಕ್ಕೂ ಇರುವ ವಯತ್ಯಾಸವನ್ನು ತಿಳಿಸಿ.

.............................................................................................................................

.............................................................................................................................

.............................................................................................................................

.............................................................................................................................

.............................................................................................................................

.............................................................................................................................

4) ವಾಸ್ತವಾಂಶ ಎಂದರೇನು ತಿಶಿಸಿ?

.............................................................................................................................

.............................................................................................................................

.............................................................................................................................

.............................................................................................................................

.............................................................................................................................

.............................................................................................................................

## 1.7 ಸಾರಾಂಶ

ಸಿದ್ಧಾಂತ ಅನೇಕ ತರ್ಕಬದ್ಧ ತತ್ವಗಳನ್ನೊಳಗೊಂಡ ಸರ್ವವ್ಯಾಪಿಸತ್ಯವನ್ನು ಪ್ರತಿನಿಧಿಸುವ ಹೇಳಿಕೆ ಸಂಘಟನೆಯ ಕಾರ್ಯ ವೈಖರಿಯನ್ನು ಅರ್ಥೈಸಿಕೊಳ್ಳಲು ಹಾಗೂ ಸಂಘಟನೆಯ ಗುರಿ ಸಾಧಿಸಲು ಸಹಾಯ ಮಾಡುವುದೇ ಈ ಸಿದ್ಧಾಂತ. ಆದುದರಿಂದ ಒಂದು ಶಿಕ್ಷಣ ಕ್ರಮದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಿದ್ಧಾಂತದ ರಚನೆ ಅತ್ಯವಶ್ಯಕವಾಗಿರುತ್ತದೆ. ಆಡಳಿತಾತ್ಮಕ ಸಿದ್ಧಾಂತವನ್ನು ಚೆನ್ನಾಗಿ ಅರಿತಂತ ವ್ಯಕ್ತಿ ಆಡಳಿತ ವ್ಯವಸ್ಥೆಯನ್ನು ಧಕ್ಷ ಹಾಗೂ ಸಮರ್ಥವಾಗಿ ನಡಿಸ ಬಲ್ಲವನಾಗಿರುತ್ತಾನೆ. ಈ ರೀತಿಯಾಗಿ ಆಡಳಿತ ಸಿದ್ಧಾಂತ ಬೆಳೆದು ಬಂದ ರೀತಿಯನ್ನು ಗಮನಿಸಿದಲ್ಲಿ ಹೇಗೆ ಅದು ಸಾರ್ವಜನಿಕ ಆಡಳಿತಕ್ಕೆ ವೈಜ್ಞಾನಿಕ ನಿರ್ವಹಣಾ ಸಿದ್ಧಾಂತ, ಸಮಕಾಲೀನ ವಾದಿಗಳ ಸಿದ್ಧಾಂತ ಮತ್ತು ಅಧಿಕಾರ ಶಾಹಿ ಸಿದ್ಧಾಂತ ತನ್ನದೇ ಆದ ಕೊಡುಗೆಯನ್ನು ನೀಡಿದೆ ಎಂಬುದು ಅರ್ಥವಾಗುತ್ತದೆ. ಜೊತೆಗೆ ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಆಡಳಿತ ಹೊಸ ಹೊಸ ದಿಕ್ಕಿನಲ್ಲಿ ಪ್ರಸರಿಸುತ್ತಿದೆ. ಎಂಬುದನ್ನು ಗಮನಿಸಿಬಹುದಾಗಿದೆ. ತುಲನಾತ್ಮಕ ಸಾರ್ವಜನಿಕ ಆಡಳಿತ, ಅಭಿವೃದ್ಧಿ ಆಡಳಿತ ನವ್ಯ ಸಾರ್ವಜನಿಕ ಆಡಳಿತ ಮತ್ತು ಅಂತರ

ರಾಷ್ಟ್ರೀಯ ಸಾರ್ವಜನಿಕ ಆಡಳಿತ ಇತ್ಯಾದಿ ಆದರೆ ಇಷ್ಟೆಲ್ಲಾ ಬೆಳೆದಿದ್ದರೂ ಸಹ ಸಾರ್ವಜನಿಕ ಆಡಳಿತ ತನ್ನದೇ ಆದ ಸಿದ್ಧಾಂತವನ್ನು ಹೊಂದಿಲ್ಲದಿರುವುದು ಅಚ್ಚರಿಯ ಸಂಗತಿಯಾಗಿದೆ. ಇದಕ್ಕೆ ಮುಖ್ಯ ಕಾರಣ ಸಾರ್ವಜನಿಕ ಆಡಳಿತ ತನ್ನದೇ ಆದಂತಹ ವಿಭಿನ್ನ ಸಂಸ್ಕೃತಿಯ ಸ್ವಭಾವವನ್ನು ಹೊಂದಿರುವುದೇ ಕಾರಣ ಎಂದು ಹೇಳಲಾಗುತ್ತಿದೆ. ಆದುದರಿಂದ ವಿವಿಧ ಆಯಾಮಗಳಲ್ಲಿ ಆಡಳಿತ ಶಾಸ್ತ್ರ ಗೊಂದಲಮಯ ವಿಷಯಗಳನ್ನು ಒಳಗೊಂಡಿರುವುದರಿಂದ ಇದನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಲು ಒಂದು ಸುಭದ್ರ ಸಿದ್ಧಾಂತದ ರಚನೆ ಅನಿವಾರ್ಯವಾಗಿರುತ್ತದೆ.

## 1.8 ಕಠಿಣ ಪದಗಳು

ಸುಖೀರಾಜ್ಯ = ಎಲ್ಲಾ ಪ್ರಜೆಗಳು ಸುಖವಾಗಿರುವುದು

ಕಲ್ಪನೆ = ಊಹೆ

ಹೊಮ್ಮುವಿಕೆ = ಹೊರಬರುವುದು

ವಾಸ್ತವಾಂಶ = ನಿಜವಾದ ಅಂಶ

## 1.9 ಉಪಯುಕ್ತ ಗ್ರಂಥಗಳು

Arora R.K = Prorpective in Adminisrtative theory

Edword H. Litch filed = Notes on a general theory Admonistration

Mosher F. c = Research in public Adminisration

## 1.10 ನಿಮ್ಮ ಪ್ರಗತಿ ಪರೂಶೀಲನೆಗೆ ಉತ್ತರ

ಪ್ರಶ್ನೆ 1ಕ್ಕೆ ವಿಭಾಗ 1.2 ನ್ನು ನೋಡಿ

ಪ್ರಶ್ನೆ 2ಕ್ಕೆ ವಿಭಾಗ 1.3 ನ್ನು ನೋಡಿ

ಪ್ರಶ್ನೆ 3ಕ್ಕೆ ವಿಭಾಗ 1.4 ನ್ನು ನೋಡಿ

ಪ್ರಶ್ನೆ 4ಕ್ಕೆ ವಿಭಾಗ 1.6 ನ್ನು ನೋಡಿ

## ಘಟಕ- 2 ಸಾರ್ವಜನಿಕ ಆಡಳಿತದ ಅಧ್ಯಯನದ ಉಗಮ.

ರಚನೆ.

2.0 ಉದ್ದೇಶಗಳು

2.1 ಪರಿಚಯ.

2.2 ರಾಜಕೀಯ ಮತ್ತು ಆಡಳಿತದ ದ್ವಂದಾತ್ಮಕವಾದ 1887-1926.

2.3 ಆಡಳಿತದ ತತ್ವಗಳ ಬೆಳವಣಿಗೆ - 1927-1937,

2.4 ಸಾರ್ವಜನಿಕ ಆಡಳಿತದ ತತ್ವಗಳ ಬಗ್ಗೆ ಸವಾಲು -1938-1947.

2.5 ಬಿಕ್ಕಟ್ಟಿನ ಸ್ಥಿತಿಯಲ್ಲಿ ಆಡಳಿತದ ದೃಷ್ಟಿಕೋನ 1948-1970

2.6 ಸಾರಾಂಶ.

2.7 ಕಠಿಣ ಪದಗಳು.

2.8 ಉಪಯುಕ್ತ ಗ್ರಂಥಗಳು.

2.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ.

## 2.0 ಉದ್ದೇಶಗಳು

ಈ ಘಟಕ ಪ್ರಮುಖವಾಗಿ ಸಾರ್ವಜನಿಕ ಆಡಳಿತದ ಅಧ್ಯಯನದ ಬೆಳವಣಿಗೆಯ ವಿವಿಧ ಹಂತಗಳ ಬಗ್ಗೆ ವಿವರ ನೀಡುತ್ತದೆ. ಈ ಘಟಕವನ್ನು ನೀವು ಅಭ್ಯಾಸ ಮಾಡಿದಾಗ ನಿಮಗೆ ತಿಳಿದು ಬರುವುದೇನೆಂದರೆ.

- ವುಡ್ರೋವಿಲ್ಸನ್‌ರವರ - ಕೊಡುಗೆ
- ಆಡಳಿತದ ಅಧ್ಯಯನದಲ್ಲಿ ಎಫ್. ಡಬ್ಲು. ಟೇಲರ್‌ನ ಕೊಡುಗೆ
- ಆಡಳಿತ ವಿಷಯದ ಬಗ್ಗೆ ಆಕ್ಷೇಪ
- ಬಿಕ್ಕಟ್ಟಿನ ಸ್ಥಿತಿಯಲ್ಲಿ ಆಡಳಿತದ ಗುರುತು

## 2.1 ಪರಿಚಯ:-

ಸಾರ್ವಜನಿಕ ಆಡಳಿತದ ಕ್ರಮಬದ್ಧ ಅಧ್ಯಯನ ಪ್ರಾಯಶಃ ಯೂರೋಪಿನಲ್ಲಿ ಪ್ರಾರಂಭವಾಯಿತೆಂದರೆ ತಪ್ಪಾಗಲಾರದು. ಜರ್ಮನಿ ಮತ್ತು ಆಸ್ಟ್ರಿಯದಲ್ಲಿನ ಪ್ರಾಧ್ಯಾಪಕರು ಸಂಘಟಿತವಾಗಿ ಆಡಳಿತದ ಬಗ್ಗೆ ನಾಗರೀಕ ಸೇವಾ ವರ್ಗದ ಬಗ್ಗೆ ಸಂಶೋಧನೆ ಪ್ರಾರಂಭಿಸಿದರು. ಇದಕ್ಕೆ ಪ್ರಮುಖ ಕಾರಣ ಸರ್ಕಾರದಲ್ಲಿ ಆಡಳಿತ ನಡೆಸಲು ಧಕ್ಷ ಹಾಗೂ ಪ್ರಮಾಣಿಕ ಅಧಿಕಾರಿಗಳ ಅವಶ್ಯಕತೆ ಇತ್ತು. ಇದೇ ಸಮಯದಲ್ಲಿ ಅಮೆರಿಕಾದಲ್ಲಿ ಸಾರ್ವಜನಿಕ ಆಡಳಿತದ ಅಧ್ಯಯನ ಪ್ರಾರಂಭವಾಯಿತಲ್ಲದೆ ಒಂದು ಸಂಪೂರ್ಣ ಶಿಕ್ಷಣ ಕ್ರಮವೆಂದು ಪರಿಗಣಿಸಲ್ಪಟ್ಟಿತ್ತು.

## 2.2 ರಾಜಕೀಯ-ಆಡಳಿತದ ದ್ವಂದತೆ -1887-1926

ವುಡ್ರೋವಿಲ್ಸನ್‌ರವರ ಆಡಳಿತದ ಅಧ್ಯಯನ ಎಂಬ ಸಾಮಾನ್ಯ ಲೇಖನ ರಾಜ್ಯಶಾಸ್ತ್ರದ ಚಾತುರ್ಮಾಸದ ಜರ್ನಲ್‌ನಲ್ಲಿ ಮುದ್ರಿತವಾದುದ್ದು (1887) ಸಾರ್ವಜನಿಕ ಆಡಳಿತದ ಕ್ರಮಬದ್ಧ ಅಧ್ಯಯನ ಪ್ರಾರಂಭವಾಯಿತು. ವಿಲ್ಸನ್‌ರವರ ಹೆಸರು ಇದರ ಜೊತೆಯಲ್ಲಿ ಮುದ್ರಿತವಾದುದ್ದು ಹಾಗೂ ಇದರಿಂದಾಗಿ ವುಡ್ರೋವಿಲ್ಸನ್‌ರವರನ್ನು ಸಾರ್ವಜನಿಕ ಆಡಳಿತದ ಪಿತಾಮಹ ಎಂಬ ಬಿರುದು ಪಡೆದುಕೊಂಡದ್ದು ಗಮನಾರ್ಹ ಸಂಗತಿಯಾಯಿತು. ವುಡ್ರೋವಿಲ್ಸನ್‌ರು, ರಾಜಕೀಯ-ಆಡಳಿತದ ದ್ವಂದತೆ ರಚನೆಯಿಂದಾಗಿ ಅದರ ಪ್ರಥಮ ಹಾಗೂ ಮೂಲ ಕರ್ತೃ ಕೂಡ ಆದರು. ವಿಲ್ಸನ್‌ರವರು ಆಡಳಿತವನ್ನು ವಿಜ್ಞಾನ ಎಂದು ಬಲವಾಗಿ ನಂಬಿದ್ದರು. ಇನ್ನೂರ ಇಪ್ಪತ್ತು ವರ್ಷಗಳಿಂದೀಚೆಗೆ ಬೆಳೆದು ಬಂದ ರಾಜಕೀಯ ವಿಜ್ಞಾನದ ಒಂದು ಅವಿಭಾಜ್ಯ ಭಾಗವೇ ಆಡಳಿತ ವಿಜ್ಞಾನ. ಈ ಆಡಳಿತ ವಿಜ್ಞಾನ ನಮ್ಮ ದೇಶದಲ್ಲಿ ಹುಟ್ಟಿ ಬಂದುದ್ದು ಹಾಗೂ ನಮ್ಮ ಪೀಳಿಗೆಯಲ್ಲೆ ಜನ್ಮ ತಳೆದುದ್ದಾಗಿದೆ. ಹಿಂದೆ ಇಲ್ಲದಿದ್ದನ್ನು ಈಗ ಪಡೆದುಕೊಂಡಿದ್ದೇವೆ. ಅದೆ ಆಡಳಿತ ವಿಜ್ಞಾನ ಅಮೆರಿಕಾದ ಆಡಳಿತ ವ್ಯವಸ್ಥೆಯಲ್ಲಿ ಆಡಳಿತಕ್ಕೆ ಸೂಕ್ತವಾದ ವೈಜ್ಞಾನಿಕ ಸ್ಥಾನ ಮಾನ ನೀಡದಿರುವುದರ ಬಗ್ಗೆ ವುಡ್ರೋವಿಲ್ಸನ್ ಸಾಕಷ್ಟು ಟೀಕೆ ಮಾಡಿದ್ದಾರೆ. ಆಡಳಿತವೆಂಬ ವ್ಯಾಪಾರಿ ವ್ಯವಸ್ಥೆಯನ್ನು ವ್ಯಾಪಾರೇತರ ವ್ಯವಸ್ಥೆಯನ್ನಾಗಿಸಲು, ಆಡಳಿತದಲ್ಲಿ ಕಾರ್ಯ ತತ್ಪರತೆ ತರಲು ಆಡಳಿತ ವಿಜ್ಞಾನವನ್ನು ಸಾಕಷ್ಟು ಚುರುಕು ಗೊಳಿಸುವುದು ಅಗತ್ಯವಾಗಿದೆ. ಇದರಿಂದ ಸರ್ಕಾರದ ಆಡಳಿತ ವ್ಯವಸ್ಥೆಯನ್ನು ಸುಭದ್ರ ಗೊಳಿಸಬಹುದು. ವಿಲ್ಸನ್‌ರವರ ಪ್ರಕಾರ ಆಡಳಿತ ರಾಜಕೀಯ ಧ್ಯೇಯ ಧೋರಣೆಗಳನ್ನು ಹಾಗೂ ನಿರ್ಣಯಗಳನ್ನು ಕಾರ್ಯಾಚರಣೆಗೆ ತರುವುದು ಅಥವಾ ಕಾರ್ಯಗತ ಮಾಡುವುದು ಎಂದು ಬಲವಾಗಿ ನಂಬಿದ್ದಾರೆ. ರಾಜಕೀಯ ವ್ಯವಸ್ಥೆಯ ಚೌಕಟ್ಟಿನಿಂದ ಹೊರಗಿರುವುದೇ ಆಡಳಿತ ಎಂದು ವಿಲ್ಸನ್ ಬಲವಾಗಿ ನಂಬಿರುವುದು ತಿಳಿದು ಬರುತ್ತದೆ. ಅವರ ಪ್ರಕಾರ ಆಡಳಿತಕ್ಕೆ ಸಂಬಂಧಿಸಿದ ಪ್ರಶ್ನೆಗಳು ರಾಜಕೀಯದ ಪ್ರಶ್ನೆಗಳಲ್ಲ. ಹೀಗಾಗಿ ರಾಜಕೀಯ ಆಡಳಿತದ ಕಾರ್ಯಚಟುವಟಿಕೆಗಳನ್ನು ನಿರ್ಧರಿಸುತ್ತದೆ. ಈ ರೀತಿಯಾಗಿ ಆಡಳಿತದ ಕಾರ್ಯ, ಕಛೇರಿಯ ಕಾರ್ಯ ವ್ಯರ್ಥವಾಗದಂತೆ ರಾಜಕೀಯ

ನಿಗಾವಹಿಸುತ್ತದೆ. ಆಡಳಿತ ಕಾರ್ಯ ವ್ಯವಹಾರಿಕ ಅಥವಾ ವ್ಯಾಪಾರಿ ವ್ಯವಹಾರಗಳಿಗೆ ಸಂಬಂಧಿಸಿದ್ದಾಗಿದೆ. ಆ ಕಾರಣದಿಂದಾಗಿ ಕಾರ್ಯಚರಣೆಯನ್ನು ತನ್ನ ಅಧೀನ ಪಡಿಸಿಕೊಳ್ಳಬಾರದು. ರಾಜಕೀಯವು ರಾಜಕೀಯ ನಾಯಕರ ಕ್ಷೇತ್ರವಾದರೆ ಆಡಳಿತ ತಾಂತ್ರಿಕ ಕೌಶಲ್ಯ, ಕುಶಲಾಗ್ರತೆ ಹೊಂದಿರುವ ಅಧಿಕಾರಿಗಳ ಕ್ಷೇತ್ರವಾಗಿದೆ. ಮತ್ತೊಬ್ಬ ಬರಹಗಾರರ ಹಾಗೂ ಪ್ರಾಧ್ಯಾಪಕರಾಗಿದ್ದ ಫ್ರಾಂಕ್‌ಗೂಡ್ನೊ ತಮ್ಮ ಲೇಖನದಲ್ಲಿ ವುಡ್ರೋವಿಲ್ಸನ್‌ರವರ ವಾದವನ್ನು ಎತ್ತಿ ಹಿಡಿದಿದ್ದಾರೆ. ಅವರ ಪ್ರಕಾರ ಸರ್ಕಾರದ ಎರಡೂ ಕಾರ್ಯಗಳನ್ನೂ ಪ್ರತ್ಯೇಕಿಸಿರುತ್ತಾರೆ. ರಾಜಕೀಯದ ಕಾರ್ಯ ನೀತಿಯ ತಯಾರಿ ಅಥವಾ ಜನತೆಯ ಇಚ್ಛೆಯನ್ನು ಪ್ರತಿ ನಿಧಿಸುವುದು ಮಾತ್ರವಾಗಿದೆ. ಆದರೆ ಆಡಳಿತ ನೀತಿಯನ್ನು ಕಾರ್ಯಾಗತ ಮಾಡುವುದಾಗಿದೆ. ಆತ್ಮ ಪೂರಕವಾಗಿ ಅವರು ಹೇಳುವುದೇನೆಂದರೆ ಸಾಂಪ್ರದಾಯಿಕವಾಗಿ ಎರಡು ಕಾರ್ಯಗಳನ್ನು ಬೇರೆ ಮಾಡುವುದು ಎಂದರೆ ಸಾರ್ವಜನಿಕ ಇಚ್ಛೆಯನ್ನು ಮತ್ತೊಂದು ಅಂಗಕ್ಕೆ ವಹಿಸುವುದು. ಇದರ ಜೊತೆಗೆ ಸಾಂಸ್ಥಿಕವಾಗಿ ಈ ಎರಡು ಅಧಿಕಾರವನ್ನು ಕಾರ್ಯಾಂಗಕ್ಕೆ ವಹಿಸಬೇಕು ಎಂದು ವಾದಿಸುತ್ತಾರೆ. ಆಡಳಿತ ತೆರಿಗೆ ವಸೂಲಿ ನಿಯಂತ್ರಣ ಮುಂತಾದ ಕಾರ್ಯಗಳಲ್ಲಿ ಮಾತ್ರ ತೊಡಗುವುದರಿಂದ ಎಷ್ಟರ ಮಟ್ಟಿಗೆ ವಿಜ್ಞಾನ ಎಂಬುದು ಸಮಾಜಸ ಎಂಬುದನ್ನು ಪತ್ತೆ ಹಚ್ಚಬೇಕಾಗುತ್ತದೆ. ಹತ್ತೊಂಬತ್ತನೇ ಶತಮಾನದ ಪ್ರಾರಂಭದಲ್ಲೇ ಅಮೇರಿಕಾದಲ್ಲಿನ ವಿಶ್ವವಿದ್ಯಾನಿಲಯಗಳು ಸರ್ಕಾರದ ಆಡಳಿತ ಸುಧಾರಣೆಗೆ ಸಾಕಷ್ಟು ಕ್ರಮ ಕೈಗೊಂಡಿದ್ದದು ಶ್ಲಾಘನೀಯ ವಿಷಯವಾಗಿದೆ. ವಿದ್ವಾಂಸರು ಸಾರ್ವಜನಿಕ ಆಡಳಿತದ ಬಗ್ಗೆ ಸಾಕಷ್ಟು ಗಮನ ಹರಿಸಿದುದರ ಬಗ್ಗೆ ಉಲ್ಲೇಖ ಇದೆ. 1914ರಲ್ಲಿ ಅಮೇರಿಕಾದಲ್ಲಿ ಹುಟ್ಟಿಕೊಂಡಿದ್ದ ಅಮೇರಿಕಾದ ರಾಜ್ಯಶಾಸ್ತ್ರ ಸಂಘದವರು ರಾಜ್ಯಶಾಸ್ತ್ರವನ್ನು ಭೋದಿಸುವುದರ ಬಗ್ಗೆ ಒಂದು ಸವಿವರ ವರದಿಯನ್ನು ಪ್ರಕಟಿಸುವುದರ ಜೊತೆಗೆ ಅದರ ಸಂಪೂರ್ಣ ಉದ್ದೇಶವನ್ನೂ ತಿಳಿಸಲಾಗಿತ್ತು. ಇದೇ ರೀತಿ ಸಾರ್ವಜನಿಕ ಆಡಳಿತದ ಬೋಧನೆ ವಿಶ್ವವಿದ್ಯಾನಿಲಯಗಳಲ್ಲಿ ಕ್ರಮೇಣ ವ್ಯಾಪಿಸತೊಡಗಿತು. 1926 ರಲ್ಲಿ ಲಿಯೊ ನಾರ್ಡ್ ಡಿ ವೈಟ್‌ರವರು ಇನ್ಟ್ರುಡಕ್ಷನ್ ಟು ದಿ ಸ್ಟಡಿ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಎಂಬ ಗ್ರಂಥವನ್ನು ಪ್ರಪ್ರಥಮವಾಗಿ ಬರೆದರು. ಇದು ಅಮೇರಿಕಾದ ವಿಶ್ವವಿದ್ಯಾನಿಲಯದಲ್ಲಿ ಅಂಗೀಕರಿಸದ್ದಲ್ಲದೆ ಆಡಳಿತ ಶಾಸ್ತ್ರದ ಬಗ್ಗೆ ಏಕೈಕ ಪುಸ್ತಕ ಎಂಬ ಹೆಗ್ಗಳಿಕೆಯಾ ದೊರೆಯಿತು. ಹೊರಬಂದ ಈ ಪುಸ್ತಕದಲ್ಲಿ ನಮೂದಾಗಿದ್ದ ಪ್ರಮುಖ ಗುರಿ

1) ರಾಜಕೀಯ ಮತ್ತು ಆಡಳಿತ ಸಮಾಜ ದೂರದಲ್ಲಿರಬೇಕು.

2) ಸಾರ್ವಜನಿಕ ಆಡಳಿತ ಮೌಲ್ಯಧಾರಿತ ವಿಜ್ಞಾನವಾಗಬೇಕು.

3) ಧಕ್ಷತೆ ಮತ್ತು ಮಿತವ್ಯಯ ಆಡಳಿತದ ಮಂತ್ರವಾಗಿರಬೇಕು.

## 2.3 ಸಾರ್ವಜನಿಕ ಆಡಳಿತದ ತತ್ವಗಳು (1927-1937) ಬೆಳವಣಿಗೆ

ಎರಡನೆಯ ಹಂತದ ಬೆಳವಣಿಗೆಯಲ್ಲಿ ರಾಜಕೀಯ-ಆಡಳಿತದ ದ್ವಂದತೆ ಹಾಗೂ ಆಡಳಿತ ಮೌಲ್ಯಾಧಾರಿತ ವೈಜ್ಞಾನಿಕ ನಿರ್ವಹಣೆ ಬಗ್ಗೆ ಗಮನ ಕೇಂದ್ರಿ ಕೃತವಾಯಿತು. ಈ ಹಂತದ ಬೆಳವಣಿಗೆಯಲ್ಲಿ ವಿದ್ವಾಂಸರು ಹಾಗೂ ಬರಹಗಾರರು-ಆಡಳಿತ ಶಾಸ್ತ್ರದಲ್ಲಿ ಅನೇಕ ತತ್ವಗಳನ್ನು ಪ್ರತಿಪಾದಿಸಿದ್ದಾರೆ. ವಿದ್ವಾಂಸರೂ ಈ ತತ್ವಗಳನ್ನು ಆದಷ್ಟು ಮಟ್ಟಿಗೆ ಕಾರ್ಯಾಚರಣೆಗೆ ತರಲು ಕಂಕಣ ಬದ್ದರಾಗಬೇಕು. ಈ ಹಂತದ ಬೆಳವಣಿಗೆ ಎಫ್. ಡಬ್ಲು ವಿಲ್ಲೋಬಿಯವರ ಪ್ರಿನ್ಸಿಪಲ್ಸ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಹೊರ ತಂದಿತು. ಇದರ ಜೊತೆಗೆ ಆಡಳಿತ ಶಾಸ್ತ್ರದ ತತ್ವದ ಬಗೆ ಸಾಕಷ್ಟು ಪುಸ್ತಕಗಳು ಹೊರ ಬಂದ್ದದು ಒಂದು ವೈಶಿಷ್ಟ. ವಿಲ್ಲೊಭಿಯವರ ಪ್ರಕಾರ ಆಡಳಿತದ ತತ್ವಗಳಿಗೆ ಒತ್ತು ನೀಡಿ ಬರೆದಿರುವ ಲೇಖನದಲ್ಲಿ-ಆಡಳಿತದಲ್ಲಿ ಅನೇಕ ವೈಜ್ಞಾನಿಕ ತತ್ವಗಳಿವೆ, ಅದನ್ನು ಕರಾರುವಾಕ್ಕಾಗಿ ಪತ್ತೆ ಹಚ್ಚಬೇಕು - ಆಡಳಿತಾಧಿಕಾರಿಗಳು ಕೂಡ ಈ ತತ್ವಗಳನ್ನು ಹೇಗೆ ದೈನಂದಿನ ಆಡಳಿತದಲ್ಲಿ ಅಳವಡಿಸಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳಬೇಕು. ಈ ತತ್ವಗಳಲ್ಲಿ ಕೆಲವು ಮೂಲಭೂತ - ತತ್ವಗಳು ಇನ್ನೂ ಕೆಲವನ್ನೂ ಸಾಮಾನ್ಯವಾಗಿ ನಿಜ ಜೀವನದ ಆಡಳಿತದಲ್ಲಿ ಆಳವಡಿಸಿಕೊಳ್ಳಬಹುದಾದ ಹಾಗೂ ವೈಜ್ಞಾನಿಕ ಸಂಬಂಧಿತ ತತ್ವಗಳು ಇವೆ. ಆದರೆ

ಆಡಳಿತಾಧಕಾರಿಗಳು ಈ ತತ್ವಗಳನ್ನು ಅರ್ಥೈಸುವಲ್ಲಿ ಹಾಗೂ ಕಾರ್ಯಗತ ಮಾಡವುದನ್ನು ತಿಳಿದುಕೊಳ್ಳಬೇಕಾಗಿದೆ. ಇದೇ ಕಾಲದಲ್ಲಿ ಇದಕ್ಕೆ ಸಂಬಂಧಿಸಿದಂತೆ ಬರೆಹಗಾರರು, ಪ್ರಾಧ್ಯಾಪಕರು ಅನೇಕ ಗ್ರಂಥಗಳನ್ನು ಹೊರತಂದದ್ದು ಮೆಚ್ಚುಗೆಯ ವಿಷಯವೇ ಸರಿ. ಮೇರಿ ಪಾರ್ಕರ್ ಫಾಲೆಟ್‌ರವರ "ಕ್ರಿಯೆಟೀವ್ ಎಕ್ಸ್‌ಪೀರಿಯನ್ಸ್", ಹೆನ್ರಿಫಯಾಲ್‌ರವರ "ಇಂಡಸ್ಟ್ರಿಯಲ್ ಅಂಡ್ ಜನರಲ್ ಮೇನೇಜ್‌ಮೆಂಟ್", ಮೂನೆ ಮತ್ತು ರೈಯಿಲೆರವರ 'ಪ್ರಿನ್ಸಿಪಲ್ಸ್ ಆಫ್ ಆರ್ಗನೈಜೇಶನ್' ಇತ್ಯಾದಿ ಹೊರಬಂದುದರಿಂದ ಆಡಳಿತ ಶಾಸ್ತ್ರ ಒಂದು ವಿಜ್ಞಾನ ಎಂಬ ಕೂಗು ಪ್ರಾರಂಭವಾಯಿತು. ವಿಶೇಷವಾಗಿ 1937ರಲ್ಲಿ ಲೂಥರ್ ಗಲಿಕ್ ಮತ್ತು ಲಿಂಡ್ಯಾಲ್ ಉರ್ವಿಕ್‌ರವರು ಬರೆದ ಲೇಖನ "ಸೈನ್ಸ್ ಆಫ್ ಅಮಿನಿಸ್ಟ್ರೇಷನ್" ಹೊರಬಂದ ಕಾರಣದಿಂದಾಗಿ ಈ ವರ್ಷ (1937) ಆಡಳಿತ ಶಾಸ್ತ್ರ ಉತ್ತುಂಗಕ್ಕೆ ಏರಿದ ದಿವಸ ಎಂದು ಪರಿಗಣಿಸಲ್ಪಟ್ಟಿದೆ. ಲೂಥರ್ ಗಲಿಕ್ ಮತ್ತು ಲಿಂಡ್ಯಾಲ್ ಉರ್ವಿಕ್‌ರವರು ಉಪಯೋಗಿಸಿದ್ದ ಸೈನ್ಸ್ ಎಂಬ ಪದ ಬಹಳವಾದ ಪ್ರಾಮುಖ್ಯತೆಯನ್ನು ಗಳಿಸಿತು ಎಂದರೆ ಅತಿಶಯೋಕ್ತಿಯಾಗಲಾರದು. ಈ ಗುಂಪಿನ ಬರೆಹಗಾರರು ಸಂಘಟನೆಯ ಅಧಿಕಾರ ಶ್ರೇಣಿಗೆ ಸಾಕಷ್ಟು ಪುರಸ್ಕಾರ ನೀಡಿದ್ದಾರೆ. ಅನೇಕ ಸಂದರ್ಭಗಳಲ್ಲಿ ಇದನ್ನು ನಾವು ಆಡಳಿತ ನಿರ್ವಹಣೆ ಎಂದೂ ಕರೆಯುತ್ತೇವೆ ಹಾಗೂ ಸಮಕಾಲೀನ ವಾದಿಗಳ ಸಿದ್ಧಾಂತ ವೆಂತಲೂ ಕರೆಯುತ್ತೇವೆ. ಈ ವಾದವನ್ನು ಸಮರ್ಥಿಸುವ ಬರೆಹಗಾರರ ಗುಂಪನ್ನೇ ವೈಜ್ಞಾನಿಕ ನಿರ್ವಹಣೆ ಪ್ರತಿಪಾದಕರು ಎಂದು ಕರೆಯುತ್ತೇವೆ. ಅವರುಗಳಾರೆಂದರೆ ಎಫ್. ಡಬ್ಲ್ಯು. ಟೇಲರ್, ಫ್ರಾಂಕ್ ಮತ್ತು ಲಲಿಯನ್ ಗಿಲ್‌ಬ್ರಿತ್. ಈ ರೀತಿಯಾಗಿ ತತ್ವಗಳು ತತ್ವಗಳಾಗಿಯಾ, ಆಡಳಿತ ಆಡಳಿತವಾಗಿ ಉಳಿದು ಕೊಂಡರೂ ಸಹ, ಆಡಳಿತ ತತ್ವಗಳು ಅಲ್ಲಿನ ಸಂಸ್ಕೃತಿ, ವಾತಾವರಣ ಹಾಗೂ ಸಂಸ್ಥಿಕ ರೂಪರೇಖೆಗಳು ಏನೇ ಇದ್ದರೂ ಸಹ ಅದಕ್ಕೆ ಅನುಗುಣವಾಗಿ ಹೊಂದಕೊಂಡು ಕಾರ್ಯನಿರ್ವಹಿಸುವುದು. ಮಾನವ ಸಂಘಟನೆಯನ್ನು ಅಭ್ಯಸಿಸಲು ಈ ತತ್ವಗಳು ಒಂದು ರೀತಿ ಅನುಕೂಲಕರವಾಗಿದ್ದಾಗಿಯೂ ಸಹ, ಯಾವುದೇ ತರಹದ ಮಾನವ ಸಂಘಗಳನ್ನೂ ಅದರ ಕಾರ್ಯಚಟುವಟಿಕೆಗಳನ್ನು ಅಭ್ಯಾಸ ಮಾಡಬಹುದು. ಈ ತತ್ವಗಳನ್ನು ತಾಂತ್ರಿಕತೆಗೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ ಸಿದ್ಧಾಂತಗಳಿಗೂ ಸಹ ಹೋಲಿಕೆ ಮಾಡಿ ಅಭ್ಯಾಸ ಮಾಡಬಹುದು. ಇದನ್ನೆ ನಾವು "ವಾಸ್ತವಾಂಶದಿಂದ ಸಾರ್ವತ್ರಿಕತೆವರೆಗೆ" ಎಂದು ಹೇಳುವುದು. ಆಡಳಿತ ಒಂದು ವಿಜ್ಞಾನ ಅದರ ತತ್ವಗಳು ವಿಶ್ವವ್ಯಾಪಿಯಾಗಿ ಎಲ್ಲಿಬೇಕಾದರೂ ಅಳವಡಿಸಬಹುದು. ಲೂಥರ್ ಗಲಿಕ್‌ನ Posdcorb ಎಂಬ ಆಡಳಿತ ತತ್ವಗಳನ್ನು ಎಲ್ಲಿಬೇಕಾದರು ಅಳವಡಿಸಬಹುದು. ಹಾಗೂ ಸಂಘಟನೆಯ ಎಲ್ಲಾ ಭಾಗಗಳಿಗೂ ಅನ್ವಯವಾಗುವಂತಹುದ್ದಾಗಿದೆ. ಸಾರ್ವಜನಿಕ ಆಡಳಿತ Public Adminisration ಎಂಬ ಪದದಲ್ಲಿ (public) ಸಾರ್ವಜನಿಕ ಎಂಬ ಪದವನ್ನು ಇತ್ತೀಚಿನ ದಿನಗಳಲ್ಲಿ ಕೈಬಿಡಲಾಗಿದ್ದು (efficiency) ಧಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಇದು ಒಂದು ಹೊಸ ಶಿಕ್ಷಣ ಕ್ರಮಕ್ಕೆ ನಾಂದಿ ಹಾಕುತ್ತದೆ ಅಂದರೆ ತಪ್ಪಾಗಲಾರದು. ಆ ಹೊಸ ಶಿಕ್ಷಣ ಕ್ರಮವೇ ನಿರ್ವಹಣೆ. ಇದರಿಂದಾಗಿ ಮೌಲ್ಯ ಎಂಬ ಪದವನ್ನು ಬದಿಗೊತ್ತಿ ಹೊಸ ಶಿಕ್ಷಣ ಕ್ರಮವಾದ ವೈಜ್ಞಾನಿಕ ಆಡಳಿತ ಅಸ್ಥಿತ್ವಕ್ಕೆ ಬರಲಾರಂಭಿಸಿತು. ರಾಜಕೀಯವನ್ನು ರಾಜಕಾರಣಿಗಳು ಅಭ್ಯಾಸಸಿವುದು ಸೂಕ್ತವಾದುದಲ್ಲವೆಂದು ಕೈಬಿಡಲಾಯಿತು. ಆಡಳಿತದ ವ್ಯವಹಾರವನ್ನು 'ಧಕ್ಷತೆ'ಯ ಹೆಸರಿನಲ್ಲಿ ವೈಜ್ಞಾನಿಕ ನಿರ್ವಹಣೆ ನಿಯಂತ್ರಿಸಲು ಪ್ರಾರಂಭಿಸಿತು.

## 2.4 ಸಾರ್ವಜನಿಕ ಆಡಳಿತದ ತತ್ವಗಳ ಬಗ್ಗೆ ಸವಾಲು 1938-1947

ಸುಮಾರು 1927ರಿಂದ 1937 ರವರಗೆ ವಿಲ್ಲೋಬಿಯವರು ಪ್ರತಿಪಾದಿಸಿದ್ದ ಆಡಳಿತದ ಮೇಲಿನ ತತ್ವಗಳು ಲೂಥರ್ ಗಲಿಕ್ ಮತ್ತು ಲಿಂಡ್ಯಾಲ್ ಉರ್ವಿಕ್ ರವರುಗಳ ಲೇಖನ ಮಹತ್ವ ಪೂರ್ಣವಾದುವುಗಳೆಂದು, ಯಾರೂ ಕೂಡ ಅದರ ಮೇಲೆ ಸವಾಲು ಅಥವಾ ಪ್ರಶ್ನಿಸಿದೆ ಇದ್ದ ಉತ್ತುಂಗದ ಕಾಲವಾಗಿದ್ದಿತು. ಸರಿ ಸುಮಾರು ಹತ್ತು ವರುಷಗಳವರೆಗೆ ಯಾರೂ ಭಿನ್ನಾಭಿಪ್ರಾಯ ವ್ಯಕ್ತಪಡಿಸಿರಲಿಲ್ಲ.

1939 ರಿಂದ 1947 ರಿಂದೀಚೆಗೆ ಆಡಳಿತದ ತತ್ವಗಳ ಮೇಲೆ ಸವಾಲುಗಳ ಸುರಿಮಳೆ ಪ್ರಾರಂಭವಾಯಿತು. ಎರಡು ವಿಷಯಗಳನ್ನು

ಕುರಿತಂತೆ ಸವಾಲನ್ನು ವಿದ್ವಾಂಸರು ಹಾಗೂ ಬರಹಗಾರರು ಎದುರಿಸಬೇಕಾಯಿತು.

1) ಒಂದನೇ ಸವಾಲು ರಾಜಕೀಯ ಮತ್ತು ಆಡಳಿತವನ್ನು ನಿಜವಾಗಲೂ ಬೇರ್ಪಡಿಸಬೇಕೆ?

2) ಎರಡನೆ ಸವಾಲು ಅನೇಕ ವಿದ್ವಾಂಸರು ರಚಿಸಿರುವ ಆಡಳಿತ ಶಾಸ್ತ್ರದ ತತ್ವಗಳನ್ನು ಕುರಿತಂತೆ

ತತ್ವಗಳನ್ನು ಕುರಿತಂತೆ ಟೀಕಾಕಾರರು ಅದರಲ್ಲಿನ ದ್ವಂದಾರ್ಥ, ಅನಿಶ್ಚಿತತೆ ಮತ್ತು ವೈಜ್ಞಾನಿಕ ಮಹತ್ವವೇ ಇಲ್ಲದ ಹಾಗೂ ಸಂಘಟನೆಯ ವಿಶ್ಲೇಷಣೆ ಕುರಿತಂತೆ ಯಾಂತ್ರಿಕ ವಿಧಾನಕ್ಕೆ ಒತ್ತು ನೀಡಿರುವ ಬಗ್ಗೆ ಸಾಕಷ್ಟು ಟೀಕಿಸಿದ್ದಾರೆ. ಈ ಆಡಳಿತ ತತ್ವಗಳು ಸ್ವಭಾವಿಕತೆಗೆ ತಕ್ಕಂತೆ ತರ್ಕದೋಷವನ್ನೊಳಗೊಂಡ ಗಾದಿಯ ಮಾತಿನಂತಿದೆ ಎಂಬುದು ಟೀಕಾಕಾರರ ವಾದವಾಗಿದೆ.

ಇದರ ಜೊತೆಗೆ ವೈಜ್ಞಾನಿಕ ನಿರ್ವಹಣ ಸಿದ್ಧಾಂತವನ್ನು ಕೈಗಾರಿಕಾ ಹಾಗೂ ಅನೇಕ ಕಾರ್ಖಾನೆಗಳಲ್ಲಿ ಅಳವಡಿಸಿಕೊಂಡಿದ್ದು ಕೆಲದಿನಗಳ ನಂತರ ಅದೂ ಸಹ ತನ್ನ ಪ್ರಾಮುಖ್ಯತೆಯನ್ನು ಕಳೆದು ಕೊಂಡಿದೆ. ಪ್ರಮುಖ ಕಾರಣ ಸಾಮಾಜಿಕ ಬೇಡಿಕೆ (ನೌಕರರ) ಹಾಗೂ ಒತ್ತಡಕ್ಕೆ ಸೂಕ್ತ ಸ್ಥಾನ ಸಿಗದ ಕಾರಣ ವೈಜ್ಞಾನಿಕ ಸಿದ್ಧಾಂತ ತನ್ನ ಮಹತ್ವವನ್ನೇ ಕಳೆದುಕೊಂಡಿದೆ. ಇದನ್ನು ಕುರಿತಂತೆ ಕೆಲಸಗಾರರಿಗೆ (ಕಾರ್ಮಿಕರಿಗೆ) ಮರೆಯಲಾಗದ ಹಾಗೂ ಮಹತ್ವಪೂರ್ಣ ಕೊಡುಗೆ ನೀಡಿದವರು ಈಲ್ಟನ್ ಮಯೋ ಹಾಗೂ ಆತನ ಸಂಗಡಿಗರು. ಈತ ಅಮೆರಿಕಾದ ವೆಸ್ಟನ್ ಎಲೆಕ್ಟ್ರಿಕ್ ಕಂಪನಿಯಲ್ಲಿ ಹಾತೂರ್ನ್ ಪ್ರಯೋಗವನ್ನು ಕೆಲಸಗಾರರ ಮೇಲೆ ನಡೆಸಿ ಉತ್ಪಾದನೆ ಹೆಚ್ಚಿಸಲು ವೈಜ್ಞಾನಿಕ ನಿರ್ವಹಣಾ ಸಿದ್ಧಾಂತ ತನ್ನ ಮಹತ್ವ ಕಳೆದುಕೊಂಡಿರುವುದನ್ನು ಎತ್ತಿ ಹಿಡಿದ. ಕೆಲಸಗಾರರ ಗುಂಪಿಗೆ ಮಹತ್ವ ಎರಡನೆಯದಾಗಿ ಅನೌಪಚಾರಿಕ ಕೆಲಸಗಾರರ ಗುಂಪಿಗೆ ಉತ್ತೇಜನ ಮತ್ತು ಅವರ ಮಾನಸಿಕ ವ್ಯಾಕುಲತೆಯ ಬಗ್ಗೆ ಸೂಕ್ತ ಪರಿಹಾರವನ್ನು ಸೂಚಿಸಿ ಹೆಚ್ಚಿನ ಉತ್ಪಾದನೆ ತೆಗೆಯಲು ಸುಲುಭವಾದ ಮಾರ್ಗ ಮೇಲೆ ತಿಳಿಸಿರುವಂತೆ ತೋರಿಸಿದ.

ಈ ರೀತಿಯಾಗಿ ಹಾತೊರ್ನ್ ಪ್ರಯೋಗ ಆಡಳಿತ ಶಾಸ್ತ್ರದಲ್ಲಿ ಒಂದು ಜನಾಂದೋಲನವನ್ನೆ ಹುಟ್ಟು ಹಾಕಿತು ಎಂದರೆ ತಪ್ಪಾಗಲಾರದು. ಈ ರೀತಿಯಾಗಿ ಸಂಘಟನೆಯಲ್ಲಿನ ಕೆಲಸಗಾರರ ಗುಂಪು (ಅನೌಪಚಾರಿಕ) ಮಾನಸಿಕ ಅಸ್ವಸ್ಥತೆಗೆ ಪರಿಹಾರ, ನಾಯಕತ್ವ, ಆಂತರಿಕ ಜನಗಳ ಅದೇ ರೀತಿ ಸಮಸ್ಯೆ ಪರಿಹರಿಸಲು ಸಂಘಟನಾ ಗುಂಪುಗಳ ನಿರ್ದೇಶನ ಎಲ್ಲವೂ ಕೂಡ ವೈಜ್ಞಾನಿಕ ನಿರ್ವಹಣೆಗೆ ಒಂದು ಸವಾಲಾಗಿ ಪರಿಣಮಿಸಿತು.

**ಈ ರೀತಿ ತತ್ವಗಳನ್ನು ಕುರಿತಂತೆ ಸವಾಲು ಹಾಕಿರುವ ವಿದ್ವಾಂಸರು ಈ ಕೆಳಕಂಡವರು.**

1) ಚೆಸ್ಟರ್. ಐ. ಬರ್ನಾರ್ಡ್ = ದಿ ಫಂಕ್ಷನ್ ಆಫ್ ದಿ ಎಕ್ಸಿಕ್ಯೂಟೀವ್ 1938

2) ಎಫ್. ಮಾಸ್ಟಿಯನ್ ಮಾರ್ಕ್ಸ್ =(Ed) ಎಲಿಮೆಂಟ್ಸ್ ಆಫ್ ಪಬ್ಲಿಕ್ ಆಡ್ಮಿನಿಸ್ಟ್ರೇಷನ್ 1946

3) ಹರ್ಬಟ್. ಎ. ಸೈಮನ್ = ದಿ ಪ್ರಾವರ್ಬ್ಸ್ ಆಫ್ ಆಡ್ಮಿನಿಸ್ಟ್ರೇಷನ್ 1946

4) ಹರ್ಬಟ್. ಎ. ಸೈಮನ್ = ಅಡ್ಮಿನಿಸ್ಟ್ರೇಷನ್ ಬಿಹೇವಿಯರ್ 1947

5) ರಾಬರ್ಟ್ ದಾಲ್ = ದಿ ಸೈನ್ಸ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್-ತ್ರಿಪ್ರಾಬ್ಲಮ್ಸ್ 1947

6) ಡ್ವಿಯಿಟ್ ವಲ್ಡೊ = ದಿ ಅಡ್ಮಿನಿಸ್ಟ್ರೇಟಿವ್ ಸ್ಟೇಟ್ - 1948

1) ಚೆಸ್ಟರ್ ಬರ್ನಾರ್ಡ್ ತಮ್ಮ ಬರಹದಲ್ಲಿ (ದಿ ಫಂಕ್ಷನ್ ಆಫ್ ದಿ ಎಕ್ಸಿಕ್ಯೂಟೀವ್) ಈ ರೀತಿಯಾಗಿ ತಮ್ಮ ವಾದ ಸರಣಿಯನ್ನು ಇಡುತ್ತಾರೆ. ಅವರ ಪ್ರಕಾರ

   1) ರಾಜಕೀಯ-ಆಡಳಿತವನ್ನು ಬೇರ್ಪಡಿಸಲಾಗದು.

2) ಸಾರ್ವಜನಿಕ ಆಡಳಿತ ತತ್ವಗಳಲ್ಲಿ ತರ್ಕಬದ್ಧವಾದ ಧೃಢತೆ ಇಲ್ಲ

3) ಸಂಘಟನೆ ವಿಶ್ಲೇಷಣೆಯಲ್ಲಿ ಕೆಲಸಗಾರರ ಮಾನಸಿಕ ಸ್ಥಿತಿಗತಿ ಹಾಗೂ ಅವರ ನಡಾವಳಿಯ ಬಗ್ಗೆ ಗೊಂದಲಮಯ ವಾತಾವರಣವಿರುವುದನ್ನು ಕಾಣಬಹುದು.

2) ಎರಡನೆಯದಾಗಿ ಎಫ್. ಎಂ. ಮಾರ್ಕ್ಸ್‌ರವರ ಎಲಿಮೆಂಟ್ಸ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಈ ರೀತಿ ಅವರು ಅಭಿಪ್ರಾಯ ಪಡುತ್ತಾರೆ.

1) ರಾಜಕೀಯ ಸ್ವಭಾವದ ಸಾರ್ವಜನಿಕ ಆಡಳಿತ

2) ಆಡಳಿತಾಧಿಕಾರಿಗಳ ರಾಜಕೀಯ ಪಾತ್ರ -ಅಧಿಕಾರ ಶಾಹಿ ಅಸ್ಥಿತ್ವ ಇದರ ಗೂಢಾರ್ಥ ಏನೆಂದರೆ ರಾಜಕೀಯ-ಆಡಳಿತದ ಪ್ರತ್ಯೇಕತೆ

3) ಹರ್ಬಟ್ ಎಸ್ಸೈಮನ್ ರವರು ಬರೆದ ಲೇಖನ "ದಿ ಪ್ರಾವರ್ಬ್ಸ್ ಆಫ್ ಆಡ್ಮಿನಿಸ್ಟ್ರೇಷನ್" 1946ನಲ್ಲಿ "ಅಡ್ಮಿನಿಸ್ಟ್ರೇಟಿವ್ ಬಿಹೆವಿಯರ್" ಎಂಬ ಪುಸ್ತಕದಲ್ಲಿ ತಮ್ಮ ಲೇಖನವನ್ನು ಅಭಿವೃದ್ಧಿ ಪಡಿಸುತ್ತಾ 1947ರಲ್ಲಿ ಈ ಕೆಳಕಂಡಂತೆ ತಮ್ಮ ವಾದವನ್ನು ವ್ಯಕ್ತ ಪಡಿಸುತ್ತಾರೆ. ಹಳೆಯ ಸಾರ್ವಜನಿಕ ಆಡಳಿತದ ಬಗ್ಗೆ ಸಾಕಷ್ಟು ಟೀಕೆಯನ್ನು ಸೈಮನ್‌ರವರು ಮಾಡಿರುತ್ತಾರೆ. ವೈಜ್ಞಾನಿಕ ವಿಶ್ಲೇಷಣೆಯಿಲ್ಲದ ಆಡಳಿತದ ಬಗ್ಗೆ ವೈಜ್ಞಾನಿಕ ವಿಶ್ಲೇಷಣೆ ಇರಬೇಕೆಂದು ವಾದ ಮಾಡುತ್ತಾರೆ. ಆಡಳಿತದ ಬಗ್ಗೆ ಸಮಕಾಲೀನ ವಾದಿಗಳ ತತ್ವಗಳನ್ನು ಅವೈಜ್ಞಾನಿಕ ಹಾಗೂ ಅವು ಗಾದೆಯ ಮಾತುಗಳೂ ಅಲ್ಲ ಎಂದು ಅಲ್ಲಗಳೆದಿದ್ದಾರೆ ಮತ್ತು ರಾಜಕೀಯ-ಆಡಳಿತ ಕುರಿತಂತೆ ಇರುವ ದ್ವಂದಾತ್ಮಕ ವಾದವನ್ನು ತಿರಸ್ಕರಿಸಿದ್ದಾರೆ. ಈ ಮಧ್ಯೆ ಸೈಮನ್‌ರವರು ತಾರ್ಕೀಕವಾಗಿ ವಾಸ್ತವಾಂಶ ಹೊರತರಲು ಧೋರಣೆ ಬಗ್ಗೆ ಅಭ್ಯಾಸ ಮಾಡಲು ಸಲಹೆ ನೀಡುತ್ತಾರೆ. ತಾವೇ ಬರೆದ ಅಡ್ಮಿನಿಸ್ಟ್ರೇಟಿವ್ ಬಿಹೇವಿಯರ್ ಪುಸ್ತಕದಲ್ಲೂ ಸಹ ಆಡಳಿತದಲ್ಲಿ ವೈಜ್ಞಾನಿಕತೆಯ ಬಗ್ಗೆ ತಿಳಿಸಿರುತ್ತಾರೆ. ಯಾವ ಸಿದ್ಧಾಂತವನ್ನು ರೂಪಿಸಿದರೂ ಕೂಡ ನಿರ್ಣಯ ಸಿದ್ಧಾಂತವನ್ನು ಪರಿಗಣಿಸಲೇಬೇಕಾಗುತ್ತದೆ. ಕಾರಣ ಏನೆಂದರೆ ನಿರ್ಣಯ ಆಡಳಿತದ ಹೃದಯ ಭಾಗವಿದ್ದಂತೆ. ಆಡಳಿತ ಸಿದ್ಧಾಂತ ಜನತೆಯ ಆಯ್ಕೆಯಿಂದ ಹಾಗೂ ಅವರ ತಾರ್ಕಿಕ ಮಾನಸಿಕ ಸ್ಥಿತಿಗಳಿಗೆ ಅನುಗುಣವಾಗಿ ಹುಟ್ಟಿ ಬಂದಿರುವುದು ಸಹಜ. ಸೈಮನ್ ಸಾರ್ವಜನಿಕ ಆಡಳಿತ ಕುರಿತಂತೆ ತಮ್ಮದೆ ಆದ ಹಾಗೂ ಪರ್ಯಾಯ ವಾಖ್ಯೆಯನ್ನು ನೀಡಿರುತ್ತಾರೆ. ಇದರಿಂದಾಗಿ ಸಾರ್ವಜನಿಕ ಆಡಳಿತ ವ್ಯಾಪ್ತಿ ಸಾಕಷ್ಟು ವಿಸ್ತಾರವಾಯಿತಲ್ಲದೆ ಮನಃ ಶಾಸ್ತ್ರ, ಸಮಾಜ ಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳಿಗೆ ಸಂಬಂಧ ಪಟ್ಟ ಎಲ್ಲಾ ವಿಷಯಗಳನ್ನು ಒಳಗೊಂಡಿದೆ. ಆಡಳಿತ ಶಿಕ್ಷಣವನ್ನು ಅಭಿವೃದ್ಧಿ ಪಡಿಸುವಲ್ಲಿ ಪರಸ್ಪರ ಸಂಬಂಧವುಳ್ಳ ಧೋರಣೆ ಹಾಗೂ ಸಮಾಜಿಕ ಮನಃಶಾಸ್ತ್ರದ ಬಗ್ಗೆ ಹೇಳಿಕೆಯನ್ನು ನೀಡುತ್ತಾರೆ. ಅದೇನೆಂದರೆ ಸಮಾಜಡಿಕ ಮನಃಶಾಸ್ತ್ರದ ಭದ್ರ ಬುನಾದಿಯ ಮೇಲೆ ಪರಿಶುದ್ಧ ವೈಜ್ಞಾನಿಕ ಆಡಳಿತವನ್ನು ಅಭಿವೃದ್ಧಿ ಪಡಿಸಬೇಕು. ಮತ್ತೊಂದು ಹೇಳಿಕೆ ಏನೆಂದರೆ ಮೌಲ್ಯಧಾರಿತ ಸಾರ್ವಜನಿಕ ಧೋರಣೆ ಹಾಗೂ ಅದಕ್ಕೆ ಸಸಂಬಂಧಿಸಿದಂತೆ ಆಡಳಿತದ ಬೆಳವಣಿಗೆಯನ್ನು ಅಭಿವೃದ್ಧಿ ಪಡಿಸುವುದು. ಸೂಕ್ತ ಪ್ರಮಾಣ ಆಧಾರಿತ ಹಾಗೂ ಪರೀಕ್ಷಿಸಲು ಯೋಗ್ಯವಾದ ಎರಡು ಮಾದರಿಗಳ ಆಧಾರದ ಮೇಲೆ ಸಾರ್ವಜನಿಕ ಆಡಳಿತವನ್ನು ಅಭಿವೃದ್ಧಿ ಪಡಿಸಲು ಸೈಮನ್ ರವರು ಇಚ್ಚಿಸುತ್ತಾರೆ.

ಇದೇ ಕಾಲದಲ್ಲಿ ಮತ್ತೊಂದು ಮಹತ್ವ ಪೂರ್ಣ ಬೆಳವಣಿಗೆ (1947) ರಾಬರ್ಟ್‌ದಾಲ್‌ರವರು ಪ್ರಕಟಿಸಿದ "ದಿ ಸೈನ್ಸ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್" ತ್ರಿಪ್ರಾಬ್ಲೆಮ್ಸ್. ವೈಜ್ಞಾನಿಕ ಸಾರ್ವಜನಿಕ ಆಡಳಿತದ ಬೆಳವಣಿಗೆಯಲ್ಲಿ ಮೂರು ಸಮಸ್ಯೆಗಳನ್ನು ಇಡುತ್ತಾರೆ. ಅವುಗಳಾವುವೆಂದರೆ

1) ವೈಜ್ಞಾನಿಕ ರೀತಿ ಇಂದಲೆ ಧಕ್ಷತೆಯನ್ನು ಹೆಚ್ಚಿಸಬಹುದು ಎಂಬ ವಾದವನ್ನು ನೇರವಾಗಿ ಒಪ್ಪುತ್ತಿಲ್ಲ. ಅದರ ಬಗ್ಗೆ ಸಾಕಷ್ಟು ಸ್ಪಷ್ಟತೆಗಳು ಬೇಕಾಗಿದೆ ಎಂದು ವಾದಿಸುತ್ತಾರೆ.

2) ಎರಡನೆಯದು ವೈಜ್ಞಾನಿಕ ಆಡಳಿತ ಎಂದು ಸಾರ್ವಜನಿಕ ಆಡಳಿತವನ್ನು ಕರೆಯಬೇಗಿದ್ದಲ್ಲಿ ಇನ್ನೂ ಅನೇಕ ವಿಷಯಗಳೂ ಸೇರಿದಂತೆ ಮಾನವನ ನಡಾವಳಿ ಬಗ್ಗೆಯೂ ಕೂಡ ಪ್ರಾಮುಖ್ಯತೆಯನ್ನೂ ನೀಡಬೇಕಾಗುತ್ತದೆ. ದಾಲ್‌ರವರು ಸಂಘಟನೆಯ ಯಾಂತ್ರಿಕ ಸಿದ್ಧಾಂತದ ಬಗ್ಗೆಯೂ ಸಹ ಸಾಕಷ್ಟು ಟೀಕೆ ಮಾಡಿದ್ದಾರೆ ಹಾಗೂ ಮಾನವೀಯತ ಸಿದ್ಧಾಂತದ ಬಗ್ಗೆ ಸಾಕಷ್ಟು ಒತ್ತು ನೀಡಬೇಕೆಂದು ವಾದಿಸುತ್ತಾರೆ.

3) ಮೂರನೆಯ ಸಮಸ್ಯೆ ಆಡಳಿತ ತತ್ವಗಳಿಗೆ ಸಂಬಂಧಿಸಿದಂತೆ ವಾದವನ್ನು ರಾಬರ್ಟ್‌ದಾಲ್‌ರವರು ಮಂಡಿಸುತ್ತಾರೆ. ತತ್ವಗಳನ್ನು ಕುರಿತಾಗಿ ಅಮೆರಿಕಾದಲ್ಲೂ ಕೂಡ ಇದರ ಅಧ್ಯಯನ ಸಂಕುಚಿತ ಹಾಗೂ ಪ್ರಾಂತೀಯತೆ ಸ್ವಭಾವ ಉಳ್ಳದ್ದಾಗಿದೆ. ತತ್ವಗಳಿಗೆ ಸಂಬಂಧಿಸಿದಂತೆ ಐತಿಹಾಸಿಕ ಮತ್ತು ರಾಷ್ಟ್ರೀಯತೆ ಆಧಾರದ ಮೇಲೆ ನೀಡಿದ್ಯಾಗೂ ಕೂಡ ಉದಾಹರಣೆ ಬಹಳ ಮಿತಿ ಉಳ್ಳದ್ದಾಗಿದೆ. ರಾಬರ್ಟ್‌ದಾಲ್‌ರವರ ಪ್ರಕಾರ ಹೇಳುವುದಾದರೆ ಎಲ್ಲಿಯವರೆಗೆ ಸಾರ್ವಜನಿಕ ಆಡಳಿತ ತುಲನಾತ್ಮಕವಾಗಿರುವುದಿಲ್ಲವೊ ಅಲ್ಲಿಯವರೆವಿಗೆ ಸಾರ್ವಜನಿಕ ಆಡಳಿತ ವಿಜ್ಞಾನ ಎಂದು ಹೇಳಲಾಗದು ಎಂದು ವಾದಿಸುತ್ತಾರೆ. ಯಾವ ಶೈಕ್ಷಣಿಕ ವಿಷಯ ಸಾಮಾನ್ಯವಾಗಿ ಎಲ್ಲರಿಗೂ ಅನ್ವಯಿಸಲ್ಪಡುವ ತನ್ನದೆ ಆದ ಸ್ವತಂತ್ರ ನಿಯಮ ಅಥವಾ ತತ್ವಗಳನ್ನು ಹೊಂದಿರುವುದಿಲ್ಲವೋ ಅಂತಹ ಶೈಕ್ಷಣಿಕ ವಿಷಯವನ್ನು ವಿಜ್ಞಾನ ಎಂದು ಕೆರಯಲಾಗದು.

ರಾಬರ್ಟ್‌ದಾಲ್‌ರವರು ವಿಭಿನ್ನ ಸಂಸ್ಕೃತಿಗಳ ಹೋಲಿಕೆ ಅಧ್ಯಯನ ಮತ್ತು ಆಡಳಿತದ ರಚನೆ ಹಾಗೂ ನಡಾವಳಿ, ಪರಿಸರದೊಂದಿಗೆ ಆಡಳಿತದ ಹೋಲಿಕೆ ಅಧ್ಯಯನ ನಡೆಯಬೇಕೆಂದು ವಾದಿಸುತ್ತಾರೆ. ಆಡಳಿತ ವ್ಯವಸ್ಥೆ ಬೆಳದಂತೆಲ್ಲಾ ಅದು ಪರಿಸರ, ಸಂಸ್ಕೃತಿ, ಸಾಮಾಜಿಕ, ರಾಜಕೀಯ ಮತ್ತು ಮಾನಸಿಕ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆಡಳಿತ ತತ್ವಗಳ ಹುಟ್ಟುವಳಿ, ಆಡಳಿತದಲ್ಲಿ ಅವುಗಳ ಸಕ್ರಿಯ ಪಾತ್ರವನ್ನು ಹಾಗೂ ಪರಸ್ಪರ ಆಂತರಿಕ ಸಂಬಂಧವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಯಾದ್ದರಿಂದ ಈ ಸಮಸ್ಯೆಯ ಉದ್ಭವಕ್ಕೆ ಕಾರಣವಾಗಿದೆ.

ಡ್ವೆಯಿಟ್ ವಾಲ್ಡೊರವರು ಕೂಡ ತಮ್ಮ ಪುಸ್ತಕದಲ್ಲಿ ಆಡಳಿತದ ಮಾರ್ಪಾಟಾಗದ ತತ್ವಗಳು, ತದ್ವಿರುದ್ಧ ಹೇಳಿಕೆಗಳು ಹಾಗೂ ವಿಧಾನಗಳು, ಪರಿಗಣಿಸಲಾಗದ ನಿಯಮಾವಳಿ, ಮೌಲ್ಯದಲ್ಲಿ ಸಂಕುಚಿತ ತನ ಹಾಗೂ ಇತಿಮಿತಿಯಾದ ಆಡಳಿತ ಧಕ್ಷತೆ ಬಗ್ಗೆ ಸಾಕಷ್ಟು ಟೀಕಿಸಿದ್ದಾರೆ.

ಮೇಲ್ಕಂಡ ಎಲ್ಲಾ ಸಂಶ್ಯಗಳಿಂದಾಗಿ ಸಾರ್ವಜನಿಕ ಆಡಳಿತದ ಶಿಸ್ತು ಮತ್ತು ನೈತಿಕತೆ ಸಾಕಷ್ಟು ಧಕ್ಕೆಯಾಯಿತೆಂದರೆ ತಪ್ಪಾಗಲಾರದು. ಈ ರೀತಿ ಸಂಶಯದ ಕಾರ್ಮೋಡ ಬರಹಗಾರರಲ್ಲಿ ವಿದ್ವಾಂಸರಲ್ಲಿ ಸಾರ್ವಜನಿಕ ಆಡಳಿತ ತತ್ವಗಳ ಬಗ್ಗೆ ಕವಿದತಾಗಿದೆ. ಈ ಸಂಶಯದ ನೆರಳು ಬರೆಹಗಾರರು ವಿದ್ವಾಂಸರಲ್ಲಿ ಆವರಿಸಿಕೊಂಡಿರುವ ಕಾರಣದಿಂದಾಗಿ ಇದರ ಸ್ಥಾನಮಾನ ಕುರಿತಂತೆ ಒಂದು ಮಾದರಿ ಬಿಕ್ಕಟ್ಟು ಉಂಟಾಯಿತು.

## 2.5 ಬಿಕ್ಕಟ್ಟಿನ ಸ್ಥಿತಿಯಲ್ಲಿ ಆಡಳಿತದ ದೃಷ್ಟಿಕೋನ 1948-1970

ರಾಜಕೀಯ-ಆಡಳಿತದ ದ್ವಂದತ್ವ ಹಾಗೂ ಸಾರ್ವಜನಿಕ ಆಡಳಿತದ ತತ್ವಗಳನ್ನೂ ಸಂಪೂರ್ಣವಾಗಿ ತಿರಸ್ಕರಿಸಲ್ಪಟ್ಟ ಕಾರಣದಿಂದಾಗಿ ಆಡಳಿತ ತನ್ನ ನಿಜವಾದ ಸ್ಥಾನ ಏನು ಎಂಬ ಇಕ್ಕಟ್ಟಿನ ಸ್ಥಿತಿ ಉಂಟಾಯಿತು. ಈ ಇಕ್ಕಟ್ಟಿನ ಅಥವಾ ಬಿಕ್ಕಟ್ಟಿನ ಸ್ಥಿತಿಯನ್ನು ಎದುರಿಸಲು ತಮ್ಮ ಮೂಲ ಸ್ಥಾನವನ್ನು ಪತ್ತೆ ಹಚ್ಚಿದರು. ಅದೇ "ತಾಯಿ ವಿಜ್ಞಾನ" ಎಂದು ಹೆಸರು ಪಡೆದಿದ್ದ ರಾಜ್ಯಶಾಸ್ತ್ರದ ಚೌಕಟ್ಟಿಗೆ ಮತ್ತೆ ಸೇರಿಕೊಳ್ಳಲು ಇಚ್ಛೆ ವ್ಯಕ್ತಪಡಿಸಿದರು. ಆದರೆ ಈ ಬರಹಗಾರರಿಗೆ ವಿದ್ವಾಂಸರಿಗೆ ಅಂತಹ ಸುಖಾಗಮನ ಸಿಗಲಿಲ್ಲ.

ಅನೇಕ ರಾಜ್ಯ ಶಾಸ್ತ್ರಜ್ಞರ ವಾದ ಏನೆಂದರೆ ಪಾಠ ಮಾಡುವ ಮುಖ್ಯ ಉದ್ದೇಶ ಏನೆಂದರೆ ವಿಷಯವನ್ನು ಬುದ್ಧಿವಂತಿಕೆಯಿಂದ ತಿಳಿಸುವ ಉದ್ದೇಶದಿಂದ ಕಾರ್ಯಾಂಗ ಹಾಗೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನು ಬೋದಿಸಲಾಗುತ್ತಿತ್ತು. ಆದರೆ 1914 ರಿಂದೀಚೆಗೆ ಈ ವ್ಯವಸ್ಥೆ ಸಂಪೂರ್ಣ ಬದಲಾಗಿ ಸರ್ಕಾರದ ವಿವಿಧ ಸ್ಥಾನಗಳಿಗೆ ವಿಶೇಷ ತಜ್ಞರನ್ನು ಸ್ಥಾನ ಭರ್ತಿಮಾಡಲು ಪ್ರಾರಂಭವಾಯಿತು. ಈ ಮಧ್ಯೆ ಜಾನ್‌ಗಾಸ್ ರವರು ತಾವು ಬರೆದಿದ್ದ ಲೇಖನ "ಟ್ರೆಂಡ್ಸ್ ಇನ್ ದಿ ತಿಯರಿ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್" (1950) ಇದನ್ನು ಅಭಿವೃದ್ಧಿ ಪಡಿಸಿ ಅದನ್ನು "ಎಥಿಯರಿ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಮೀನ್ಸ್ ಇನ್ ಅವರ್ ಟೈಮ್ಸ್ ಎಥಿಯರಿ ಆಫ್ ಪಾಲಿಟಿಕ್ಸ್ ಆಲ್ಸೊ" ಎಂದು ಪ್ರಸ್ತುತ ಪಡಿಸಿದರು. (ಅವರ ಪ್ರಕಾರ ಸಾರ್ವಜನಿಕ ಆಡಳಿತದ ಸಿದ್ಧಾಂತ ಎಂದರೆ ಅದು ರಾಜ್ಯಶಾಸ್ತ್ರ ಸಿದ್ಧಾಂತವೆಂದೇ ಅರ್ಥ) 1952 ರಲ್ಲಿ ಮಾರ್ಟಿನ್ ರವರು ಒಂದು ಲೇಖನ ಬರೆದು ಸಾರ್ವಜನಿಕ ಆಡಳಿತದ ಮೇಲೆ ರಾಜ್ಯಶಾಸ್ತ್ರದ (ನಿಯಂತ್ರಣ) ಅಧಿಕಾರ ಸ್ಥಾಪನೆ ಮುಂದವರಿಯಲು ತಿಳಿಸಿದ್ದಾರೆ.

ಸಾರ್ವಜನಿಕ ಆಡಳಿತ ಸ್ವಾಭಾವಿಕವಾಗಿ ಒಂದು ಬದಲಿ ವ್ಯವಸ್ಥೆಗೆ ಸಜ್ಜಾಗಿದ್ದು ಆ ಬದಲೀ ವ್ಯವಸ್ಥೆಯೇ ಆಡಳಿತ ವಿಜ್ಞಾನದ ಹೆಸರಿನಲ್ಲಿ ಹೊರಬಂದಿದೆ. ಇಲ್ಲಿಯೂ ಕೂಡ ಸಾರ್ವಜನಿಕ ಆಡಳಿತ ತನ್ನ ಸ್ವಂತ ಸ್ಥಾನ ಹಾಗೂ ಗುರುತು ಗಳಿಸಿಕೊಳ್ಳುವಲ್ಲಿ ನಿಶ್ಚಲವಾಗಿದ್ದು ಇದಕ್ಕಿಂತ ದೊಡ್ಡ ಶೈಕ್ಷಣಿಕ ಕ್ರಮದ ಜೊತೆ ಸೇರಲು ಅವಕಾಶ ಪಡೆಯಬೇಕಿದೆ. ಹೀಗಾಗಿ ಸಾರ್ವಜನಿಕ ಆಡಳಿತದ ವೈಯುಕ್ತಿಕ ಚಿಹ್ನೆ ಪಡೆಯಲು ಹಾಗೂ ಅದೊಂದು ಸ್ವತಂತ್ರ ಶಿಕ್ಷಣ ಕ್ರಮವಾಗಿಸಲು ಹವಣಿಸುತ್ತಿದ್ದ ಅನೇಕ ಬರೆಹಗಾರರಲ್ಲಿ ಹಾಗೂ ವಿದ್ವಾಂಸರಲ್ಲಿ ಜೇಮ್ಸ್ ಜಿ ಮಾರ್ಚ್ ಮತ್ತು ಸೈಮನ್ ರವರು ಆಡಳಿತದ ಚಾತುರ್ಮಾಸಿಕದಲ್ಲಿ ಒಂದು ಲೇಖನ ಪ್ರಕಟಿಸಿದರು "ಅದರ ಮಹತ್ವ ಏನೆಂದರೆ ಆಡಳಿತ, ಆಡಳಿತವೆ ಅದು ತನ್ನದೇ ಆದ ಪ್ರತ್ಯೇಕ ಸ್ಥಾನ ಪಡೆಯ ತನಗಿಂತ ದೊಡ್ಡದಾದ ಶೈಕ್ಷಣಿಕ ಕ್ರಮವನ್ನು ಸೇರಿಕೊಳ್ಳಬೇಕಿದೆ" ಇದರ ಬಗ್ಗೆ ವಾದ ವಿವಾದ ಪ್ರಾರಂಭವಾಯಿತು. ಹೇಳುವುದಾದರೆ 1950ರಲ್ಲಿ ಅನೇಕ ಸಮಾಜಿಕ ವಿಷಯಗಳ ಹಾಗೂ ಕಲ್ಪನಾ ವಿಷಯಗಳ ಬಗ್ಗೆಯೂ ಕೂಡ ಗಹನವಾದ ಚರ್ಚೆ ನಡೆದಿತು. ಈ ಎಲ್ಲಾ ವಿಷಯಗಳನ್ನು ಬದಿಗೊತ್ತಿ 1940ರಿಂದ ಆಡಳಿತಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ ಬಗ್ಗೆಯೂ ಲೇಖನ ಬರೆಯಲು ತೀರ್ಮಾನಿಸಲಾಯಿತು. ಅದರಂತೆ ಆಡಳಿತಕ್ಕೆ ಸಂಬಂಧಿಸಿದಂತೆ ಆಡಳಿತದಲ್ಲಿ ನಡಾವಳಿ ಸಿದ್ಧಾಂತ, ತೀರ್ಮಾನ ಕೈಗೊಳ್ಳುವ ಸಿದ್ಧಾಂತ, ತುಲನಾತ್ಮಕ ಆಡಳಿತ, ವ್ಯವಸ್ಥಾ ಸಿದ್ಧಾಂತ, ಪರಿಸರ ಸಿದ್ಧಾಂತ ಮತ್ತು ಮಾಕ್ಸ್‌ವೇಬರನ ಅಧಿಕಾರ ಶಾಹಿ ಸಿದ್ಧಾಂತ ಇತ್ಯಾದಿಗಳ ಮೇಲೆ ಲೇಖನ ಬರೆಯಲು ಪ್ರಾರಂಭವಾಯಿತು.

ಫ್ರೆಡ್ ವಿಲಿಯಮ್ ರಿಗ್ಸ್ ರವರ ಸೂಕ್ಷ್ಮ ವ್ಯವಸ್ಥಾ ಸಿದ್ಧಾಂತ, ಪರಿಸರ ಸಿದ್ಧಾಂತ ರಚನಾತ್ಮಕ ಮತ್ತು ಕಾರ್ಯಾತ್ಮಕ ಸಿದ್ಧಾಂತಗಳು ಸಾರ್ವಜನಿಕ ಆಡಳಿತದ ವಿವಿಧ ಆಯಾಮಗಳ ಮೇಲೆ ಸಂಶೋಧನೆ, ಶೈಕ್ಷಣಿಕ ಅಭ್ಯಾಸ ಪ್ರಾರಂಭವಾಯಿತಲ್ಲದೆ. ಆಡಳಿತ ವಿಭಿನ್ನ ಸಂಸ್ಕೃತಿಗಳ ಬಗೆಗೂ ಸಂಶೋಧನೆ ಪ್ರಾರಂಭವಾಯಿತು. 1948-1970ರ ಈ ಕಾಲದ ಮತ್ತೊಂದು ಪ್ರಮುಖ ಲಕ್ಷಣ ಏನೆಂದರೆ ರಾಜಕೀಯ ಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತಗಳ ನಡುವಿನ ಸಂಬಂಧವನ್ನು ಪುನರ್ ಪ್ರತಿಷ್ಠಾಪಿಸಲಾಯಿತು. ಈ ಎಲ್ಲಾ ಒತ್ತಡಗಳ ಜೊತೆಗೆ ಆಡಳಿತಾತ್ಮಕ ಸಿದ್ಧಾಂತದ ಜೊತೆಗೆ 1960 ರಿಂದೀಚೆಗೆ ಹೊರ ಬಂದಂತಹ ನವ್ಯ ಮಾನವೀಯತಾ ಸಿದ್ಧಾಂತ ಸಾಕಷ್ಟು ಖ್ಯಾತಿಗಳಿಸಿತು. ಈ ಸಿದ್ಧಾಂತದ ಖ್ಯಾತಿಗೆ ಕಾರಣರಾದವರು ಕ್ರಿಸ್ಪ್ ಅರ್ಗ್ರಿಸ್, ರೆನ್ಸಿಸ್ ಲಿಕರ್ಟ್, ಡೊಗ್ಲಾಸ್ ಮೆಕ್‌ಗ್ರೇಗರ್ ಮತ್ತು ವಾರ್ನ್ ಬೆನ್ನಿಸ್‌ರವರುಗಳು. ಮಾನವನ ಸ್ವಭಾವ ಕುರಿತಂತೆ ಸಾಂಪ್ರದಾಯಿಕ ತಿಳಿವಳಿಕೆಯಾದಂತಹ "ಸಂಘಟನೆ ಒಂದು ಜೈವಿಕ ಸಂಸ್ಥೆ ಅಲ್ಲಿನ ಸದಸ್ಯರುಗಳು ತಾವೇ ತಮ್ಮ ವ್ಯಕ್ತಿತ್ವವನ್ನು ಸುಲುಭವಾಗಿ ಬೆಳೆಸಿಕೊಳ್ಳಬಹುದು." ಇಂತಹ ಕಲ್ಪನೆಯನ್ನು ಬಿಡಬೇಕೆಂದು ಬರೆಹಗಾರರು (ಮೇಲ್ಕಂಡ) ನಿವೇದಿಸಿಕೊಳ್ಳುತ್ತಾರೆ. ರಾಜಕೀಯ ಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ-ಎರಡನೆ ಮಹಾ ಯುದ್ಧದ ನಂತರದ ನಡುವಳಿಕೆ ಸಿದ್ಧಾಂತದ ಕಾಲಕ್ಕೆ ಬರಲು ಪ್ರಾರಂಭಿಸಿತು. ಸಾರ್ವಜನಿಕ ಆಡಳಿತದ ಅಭಿವೃದ್ಧಿಗಾಗಿ ಪ್ರಾಂತೀಯತೆಯಿಂದ ದೂರವಿರುವ, ತಾತ್ವಿಕ, ಮೌಲಾಧಾರಿತ ಹಾಗೂ ಅಂತರ ಶಾಸ್ತ್ರೀಯ ಸಿದ್ಧಾಂತದ ಅಭಿವೃದ್ಧಿಗೆ ಎಚ್ಚರಿಕೆ ನೀಡಲಾಯಿತು. ಆಡಳಿತದ ಅಭಿವೃದ್ಧಿ, ಆಡಳಿತಾತ್ಮಕ ಸಿದ್ಧಾಂತದ ಅಭಿವೃದ್ಧಿಗೋಸ್ಕರ ಎರಡು ಮಹತ್ತರ ಬದಲಾವಣೆಯನ್ನು 1960ರಲ್ಲಿ ತರಲಾಯಿತು.

ಎಡ್ವರ್ಡ್ ವೈಡ್ನರ್ ರವರ ಅಭಿವೃದ್ಧಿ ಆಡಳಿತ, ಎಫ್. ಡಬ್ಲ್ಯು. ರಿಗ್ಸ್‌ರವರ ಆಡಳಿತದ ಅಭಿವೃದ್ಧಿ ಮತ್ತು ನವ್ಯ ಸಾರ್ವಜನಿಕ ಆಡಳಿತ (ಡ್ವಯಿಟ್ ವಾಲ್ಡೊ) ರವರುಗಳು ತಾವು ಪ್ರತಿಪಾದಿಸಿದ್ದ ಸಿದ್ಧಾಂತಗಳಿಗೆ ಒಂದು ನಿರ್ದಿಷ್ಟ ರೂಪ ಕೊಡಲಾರಂಭಿಸಿದರು. ಮೌಲ್ಯ ಹಾಗೂ ವಿಷಯಗಳ ಪ್ರತ್ಯೇಕತೆಗೆ ನವ್ಯ ಸಾರ್ವಜನಿಕ ಆಡಳಿತದ ಪ್ರತಿಪಾದಕರು ಸಾಕಷ್ಟು ಬದಲಾವಣೆ ಮಾಡುವುದು ಹಾಗೂ ಮುಂದಿನ ಬದಲಾವಣೆಗೆ ಸೂಕ್ತ ಬುನಾದಿ ಹಾಕುವುದರ ಜೊತೆಗೆ ಡೇವಿಡ್ ಈಸ್ಟನ್ ಹಾಗೂ ಮತ್ತಿತರರಿಗೆ ಮುಂದಿನ ಬೆಳವಣಿಗೆಗೆ ಮಾರ್ಗ ಸೂಚಿ ತೋರಿಸಲಾಯಿತು.

ನಿಮ್ಮ ಪ್ರಗತಿ ಪರಿಶೀಲನೆ

**ಸೂಚನೆ :** 1) ಖಾಲಿ ಇರುವ ಜಾಗವನ್ನು ನಿಮ್ಮ ಉತ್ತರಕೋಸ್ಕರ ಉಪಯೋಗಿಸಿ

2) ನಿಮ್ಮ ಉತ್ತರವನ್ನು ಈ ಘಟಕದ ಅಂತ್ಯದಲ್ಲಿ ನೀಡಿರುವ ಮಾದರಿ ಉತ್ತರದೊಡನೆ ಪರಿಶೀಲಿಸಿ.

1) ಆಡಳಿತದ ಬೆಳವಣಿಗೆಯಲ್ಲಿ ರಾಜಕೀಯ-ಆಡಳಿತದ ದ್ವಂದಾತ್ಮಕವಾದ (1887-1926)ರ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

2) "ಸಾರ್ವಜನಿಕ ಆಡಳಿತದ ತತ್ವಗಳ ಬಗ್ಗೆ ಸವಾಲು -1938-1947" ಇದರ ಬಗ್ಗೆ ಚರ್ಚಿಸಿ.

..........................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 2.6 ಸಾರಾಂಶ

ರಾಜ್ಯಶಾಸ್ತ್ರ ಅಥವಾ ಸಾರ್ವಜನಿಕ ಕಾನೂನು ಅವಿಭಾಜ್ಯ ಅಂಗವಾಗಿ ಅಭಿವೃದ್ಧಿ ಪಡಿಸಿದ ವಸ್ತು ವಿಷಯವೇ ಸಾರ್ವಜನಿಕ ಆಡಳಿತ. ಸಾರ್ವಜನಿಕ ಆಡಳಿತ ಸುಮಾರು ಹುಟ್ಟಿ 113 ವರುಷಗಳು ಕಳೆದರೂ ಸಹ ಅದರ ಬಗ್ಗೆ ಹುಟ್ಟಿಕೊಂಡಿರುವ ಗೊಂದಲ ಇನ್ನೂ ಕಡಿಮೆಯಾಗಿಲ್ಲ. ಈ ರೀತಿ ಇದರ ಹುಟ್ಟುವಳಿಯ ಸ್ವತಂತ್ರದ ಬಗ್ಗೆ ಅನಿಶ್ಚಿತತೆ, ವೈಮನಸ್ಸು ಇದ್ಯಾಗ್ಯೂ ಕೂಡ ಸಾರ್ವಜನಿಕ ಆಡಳಿತ ಕ್ರಮೇಣ ಅಂತರ ಶಾಸ್ತ್ರೀಯ ಸ್ವಭಾವವನ್ನು ಉಳಿಸಿಕೊಂಡು ಬೆಳೆಯುತ್ತಿದೆ. ಹೆಚ್ಚು ಕಡಿಮೆ ಇದು ನೀತಿ ವಿಜ್ಞಾನದ ಕಡೆ ವಾಲುತ್ತಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ವ್ಯವಸ್ಥಾ ವಿಧಾನ ಮತ್ತು ನಡಾವಳಿ ವಿಧಾನ ಮತ್ತು ಹೋಲಿಕೆ ಅಧ್ಯಯನ ಹಾಗೂ ವಿಭಿನ್ನ ರೀತಿ ಸಮಾಜಿಕ ವ್ಯವಸ್ಥೆ ಹಾಗೂ ಪರಿಸರದೊಂದಿಗೆ ಅದರ ಅಧ್ಯಯನ ನಡೆಯುತ್ತಿದೆ. ಸಾರ್ವಜನಿಕ ಆಡಳಿತ

ಕುರಿತಂತೆ ಮತ್ತೊಂದು ಪ್ರಮುಖವಾದ ವಿಷಯ ರಾಜ್ಯಶಾಸ್ತ್ರದ ನಿಕಟವಾದ ಸಂಬಂಧದೊಂದಿಗೆ ಅದರ ಅಭ್ಯಾಸ ನಡೆಯುತ್ತಿದೆ.

## 2.7 ಕಠಿಣ ಪದಗಳು

ಹುಟ್ಟುವಳಿ = ಜನ್ಮಾವಳಿ

ನಿಖರ = ಖಾತ್ರಿಯಾದ

ನೈಜ ಚಿತ್ರಣ = ನಿಜವಾದ ಚಿತ್ರ

## 2.8 ಉಪಯುಕ್ತ ಗ್ರಂಥಗಳು

Public Administration = Avasthi

Arora R. K. Prospeetive is public Administration Theory

## 2.9 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

ಪ್ರಶ್ನೆ 1ಕ್ಕೆ ವಿಭಾಗ 2.2 ನೋಡಿ

ಪ್ರಶ್ನೆ 2ಕ್ಕೆ ವಿಭಾಗ 2.4 ನೋಡಿ

# ಘಟಕ- 3 ಆಡಳಿತ ಸಿದ್ಧಾಂತದ ಉಗಮ ತೌಲನಿಕ ಸಾರ್ವಜನಿಕ ಆಡಳಿತ

ರಚನೆ.


3.0 ಉದ್ದೇಶಗಳು

3.1 ಪರಿಚಯ

3.2 ತೌಲನಿಕ, ಸಾರ್ವಜನಿಕ ಆಡಳಿತ ಪ್ರಾಮುಖ್ಯತೆ

3.3 ತೌಲನಿಕ ಸಾರ್ವಜನಿಕ ಆಡಳಿತ

3.4 ಸಾರಾಂಶ

3.5 ಕಠಿಣ ಪದಗಳು

3.6 ಉಪಯುಕ್ತ ಗ್ರಂಥಗಳು

3.7 ನಿಮ್ಮ ಪ್ರಗತಿ ಪರೀಶೀಲನೆ ಉತ್ತರ

## 3.0 ಉದ್ದೇಶಗಳು

ಈ ಘಟಕದಲ್ಲಿ ತೌನಿಲಕ ಸಾರ್ವಜನಿಕ ಆಡಳಿತ ಪ್ರಾಮುಖ್ಯತೆಯನ್ನು ವಿವರಿಸಿಸಲಾಗಿದೆ. ಈ ಘಟಕವನ್ನು ಅಭ್ಯಾಸ ಮಾಡಿದಾಗ ನಿಮಗೆ ತಿಳಿದು ಬರುವುದೇನೆಂದರೆ

- ತೌಲನಿಕ ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆ
- ತೌಲನಿಕ ಅಧ್ಯಯನದ ವಿವಿಧ ಆಯಾಮಗಳು
- ತೌಲನಿಕ ಅಧ್ಯಯನ ಪರೀಕ್ಷಿಸಲು ಇರುವ ವಿವಿಧ ಸಾಧನಗಳು

## 3.1 ಪರಿಚಯ

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಆಡಳಿತ ವಿಭಿನ್ನ ಸಂಸ್ಕೃತಿಕ ಭೌಗೋಳಿಕ ವಿಷಯವನ್ನೊಳಗೊಂಡಿದೆ. ವಿಭಿನ್ನಕಾಲಕ್ಕೆ ಸಂಬಂಧಿಸಿದ ಪರಿಸರ, ರಾಜಕೀಯ, ಸಾಮಾಜಿಕ ವ್ಯವಸ್ಥೆಗಳನ್ನು ಸಹ ಈ ಆಡಳಿತ ಒಳಗೊಂಡಿರುವುದು ಒಂದು ವಿಶೇಷವಾಗಿದೆ. ಇದನ್ನೇ ನಾವು ಸಾರ್ವಜನಿಕ ಆಡಳಿತದ ತುಲನಾತ್ಮಕ ಅಧ್ಯಯನ ಎಂದು ಕರೆಯುತ್ತೇವೆ. ಸಾರ್ವಜನಿಕ ಆಡಳಿತದ ಕೆಲವು ಚಿಂತಕರು. ಬರಹಗಾರರು ಇದೊಂದು ವೈವಿಧ್ಯಮಯ ಉಪಶಿಕ್ಷಣ ವ್ಯವಸ್ಥೆ ಎಂದು ಕರೆಯುತ್ತಾರೆ. ಆದುದರಿಂದ ಸಾರ್ವಜನಿಕ ಆಡಳಿತ ವಿದ್ಯಾರ್ಥಿಗಳು ಸಾರ್ವಜನಿಕ ಆಡಳಿತ ಹೊಸ ದಿಕ್ಕಿನೆಡೆ ಮುನ್ನುಗುತ್ತಿರುವುದನ್ನು ಸೂಕ್ತವಾಗಿ ಗಮನಿಸಬೇಕಾಗಿದೆ.

## 3.2 ತೌಲನಿಕ ಸಾರ್ವಜನಿಕ ಆಡಳಿತ ಪ್ರಾಮುಖ್ಯತೆ.

ಸಾಮಾಜಿಕ ವಿಜ್ಞಾನದ ಸಿದ್ಧಾಂತ, ವಿಧಾನಗಳ ಪರಸ್ಪರ ಹೋಲಿಕೆ ತನ್ನದೇ ಆದಂತಹ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಸಮಾಜಿಕ ವಿಜ್ಞಾನದಲ್ಲಿ ಹೋಲಿಕೆ ಎಂಬುದು ವಿವಿಧ ವಿಷಯಗಳನ್ನು ಅರಿತುಕೊಳ್ಳಲು ಇರುವಂತಹ ಒಂದು ತಂತ್ರ ಹಾಗೂ ಯಾವುದಾದರೊಂದು ವಿಷಯದ ಬಗ್ಗೆ ಸೂಕ್ತ ವಿಶ್ಲೇಷಣೆ ಮತ್ತು ವೈಜ್ಞಾನಿಕ ಚಿಂತನೆಯನ್ನು ಸುಲುಭವಾಗಿ ಮಾಡಬಹುದಾಗಿದೆ. ವೈಜ್ಞಾನಿಕ ವಿಧ ಅಥವಾ ತಂತ್ರ ಎಂಬ ಪದವನ್ನು ಸಮಾಜಿಕ ವಿಜ್ಞಾನದಲ್ಲಿ ಆಗಿಂದಾಗ್ಯೆ ಬಳಸಲಾಗುತ್ತಿದೆ. ಸಂಶೋಧನೆಗೆ ಆರಿಸಿ ಕೊಂಡಿರುವ ವಿಷಯದ ಬಗ್ಗೆ ಕರಾರುವಾಕ್ಕಾಗಿ ಹಾಗೂ ವೈಜ್ಞಾನಿಕವಾಗಿ ಅಧ್ಯಯನವನ್ನು ಸುಲುಭವಾಗಿ ಮಾಡಬಹುದು. ಈ ಮಾದರಿ ಹೋಲಿಕೆ ಅಧ್ಯಯನವನ್ನು ಸಾಮನ್ಯವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಸಾರ್ವಜನಿಕ ಆಡಳಿತದ ಹೋಲಿಕೆ ಅಧ್ಯಯನ ಅದು ಬೆಳೆಯುತ್ತಿರುವ ವೈವಿಧ್ಯಮಯ ಬೆಳವಣಿಗೆಯನ್ನು ಸುಲುಭವಾಗಿ ಅಧ್ಯಯನ ಮಾಡಬಹುದು. ಆಡಳಿತದ ಹೋಲಿಕೆ ಅಧ್ಯಯನ ಸಾರ್ವಜನಿಕ ನೀತಿ ಹಾಗೂ ಆಡಳಿತದಲ್ಲಿ ವಿವಿಧ ಸಿದ್ಧಾಂತವನ್ನು ರೂಪಿಸಲು ಸಹಕಾರಿಯಾಗುತ್ತದೆ. ಆಧುನಿಕ ಸರ್ಕಾರಗಳ ವಿವಿಧ ರೀತಿ ರಿವಾಜುಗಳ ಸಂಪೂರ್ಣ ಅಧ್ಯಯನ ಹಾಗೂ ವಿವಿದ ಅಂಗಗಳ ಹೋಲಿಕೆ ಅಧ್ಯಯನ ಸಾಧ್ಯವಾಗುತ್ತದೆ. ಒಂದು ಉತ್ತಮವಾದ ಆಡಳಿತದ ರಚನೆ ಮತ್ತು ಉತ್ತಮ ಆಡಳಿತ ರಚನೆಗೆಬೇಕಾದ ಕಾರ್ಯಕ್ರಮಗಳನ್ನು ಹೋಲಿಕೆ ಅಧ್ಯಯನದಿಂದ ಸುಲುಭವಾಗಿ ರೂಪಿಸಿಕೊಳ್ಳಬಹುದು. ಒಂದು ಆದರ್ಶ ಸರ್ಕಾರ ರಚಿಸುವಲ್ಲಿ ಇತರ ಸರ್ಕಾರಗಳ ವಿಭಿನ್ನ ವ್ಯವಸ್ಥೆ ವಿಶ್ಲೇಷಣಾತ್ಮಕ ಮತ್ತು ವಿವರಣಾತ್ಮಕ ಸುದ್ದಿ ಸಂಗ್ರಹಿಸಿ ಅದೇ ಮಾದರಿ ವ್ಯವಸ್ಥೆ ಹೊಂದಲು ಮಾರ್ಗೋಪಾಯಗಳನ್ನು ಕಂಡುಹಿಡಿದು ಅದರಂತೆ ಅನುಕರಿಸಬಹುದು. ಈ ರೀತಿಯಾಗಿ ಕ್ಲುಪ್ತ ಪ್ರಮಾಣದಲ್ಲಿ ಅಭ್ಯಾಸ ಮಾಡುವ ತುಲನಾತ್ಮಕ ಆಡಳಿತ ವ್ಯವಸ್ಥೆಯಾಗಿರುತ್ತದೆ. ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ವಿವರಣೆಗಳನ್ನು ರೇಖಾ ಚಿತ್ರದ ಮೂಲಕವು ತೋರಿಸಬಹುದು. ಸಾರ್ವಜನಿಕ ಆಡಳಿತದ ಹೋಲಿಕೆ ಅಧ್ಯಯನ ಒಂದು ಸಿದ್ಧಾಂತದ ಮೇಲೆ ಒತ್ತಿ ಹೇಳಿದರೂ ಸಹ ಆ ಸಿದ್ಧಾಂತ ಬದ್ರ ಬುನಾದಿಯ ಮೇಲೆ ನಿಲ್ಲಲು ಸುಭದ್ರ ಆಧಾರ ಸ್ತಂಭಗಳು ಬೇಕು. ಸುಭದ್ರ ಬುನಾದಿ ಅಥವಾ ಆಧಾರ ಸ್ತಂಭಗಳು ಬೇಕಿದ್ದಲ್ಲಿ ಮುಖ್ಯವಾಗಿ ಪರಿಸರದ ಅವಲಂಬನೆ

ಅತ್ಯಗತ್ಯವಾಗಿ ಬೇಕೇ ಬೇಕು ಕಾರಣ ಆಡಳಿತಕ್ಕೂ ಪರಿಸರಕ್ಕೂ ಯಾವಾಗಲೂ ಕ್ರಿಯೆ ಪ್ರತಿಕ್ರಿಯೆ ನಡೆಯುತ್ತಲೆ ಇರುತ್ತದೆ.

ಆಡಳಿತದ ಹೋಲಿಕೆ ಅಧ್ಯಯನದಲ್ಲಿ " ಆಧಾರ ಕಲ್ಪನೆ, ಸಾಮಾನ್ಯೀಕರಣ ಹಾಗೂ ಸಿದ್ಧಾಂತದ ನಿರೂಪಣೆಗೆ ಅವಕಾಶವಿರುವುದರಿಂದ ಸಾರ್ವಜನಿಕ ಆಡಳಿತವನ್ನು ವೈಜ್ಞಾನಿಕವಾಗಿ ಅಭ್ಯಾಸ ಮಾಡಬಹುದು. ಸಾರ್ವಜನಿಕ ಆಡಳಿತ ಹೋಲಿಕೆ ಅಧ್ಯಯನ ದಿಂದ ಒಂದು ಆಡಳಿತ ವ್ಯವಸ್ಥೆಯನ್ನು ಹಾಗೂ ಅದರ ನಡವಳಿಕೆಯನ್ನು ಇತರ ದೇಶಗಳ ವ್ಯವಸ್ಥೆ ಕಾರ್ಯ ಕ್ರಮ ರೀತಿ, ರಿವಾಜುಗಳ ಹೋಲಿಕೆಯೊಡನೆ ಅಧ್ಯಯನ ಮಾಡಿದಾಗ ಇತರ ದೇಶಗಳಲ್ಲಿನ ವಿಭಿನ್ನ ಸಂಸ್ಕ್ರತಿ, ವ್ಯವಸ್ಥೆ, ಸರ್ಕಾರದ ಕಾರ್ಯಕ್ರಮದ ಬಗ್ಗೆ ಸೂಕ್ತ ಅರಿವು ಉಂಟಾಗುತ್ತದೆ. ಇದರ ಜೊತೆಗೆ ಹೋಲಿಕೆ ಅಧ್ಯಯನ ವಿಭಿನ್ನ ರಾಷ್ಟ್ರೀಯ ಮತ್ತು ವಿಭಿನ್ನ ಸಾಂಸಕೃತಿಕ ಅಧ್ಯಯನಾದ ವಿವರಣೆ ಹಾಗೂ ಸಂಬಂದ ಪಟ್ಟ ವಿಷಯಗಳ ಬಗ್ಗೆ ಸಂಪೂರ್ಣ ವಿಷಯವನ್ನು ತಿಳಿಸುತ್ತದೆ. ನಶಿಸಿಹೋಗುತ್ತಿರುವ ಸಾರ್ವಜನಿಕ ಆಡಳಿತದ ಸಿದ್ಧಾಂತ ರೂಪಿಸುವ ಸಾಮರ್ಥ್ಯವನ್ನು ಹೋಲಿಕೆ ಅಧ್ಯಯನ ವೃದ್ಧಿಸಿತ್ತದೆ. ಹೋಲಿಕೆ ಅಧ್ಯಯನ ಸಾರ್ವಜನಿಕ ಆಡಳಿತದ ಅಧ್ಯಯನ ವಿಧಾನ ಹಾಗೂ ಸಂಘಟನೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಸಮಸ್ಯೆಗಳ ಬಗ್ಗೆ ದೀರ್ಘ ವಿವರ ಹಾಗೂ ಈ ಸಮಸ್ಯೆಗಳಿಗೆ ಸಂಪೂರ್ಣ ಪರಿಹಾರವನ್ನು ದೊರಕಿಸಿ ಕೊಡುತ್ತದೆ. ಹೋಲಿಕೆ ಅಧ್ಯಯನ ಆಡಳಿತದಲ್ಲಿ ಕಂಡುಬರುವ ವಿಭಿನ್ನ ರೀತಿಯ ಲಕ್ಷಣಗಳೂ ಅಸ್ಥಿತ್ವದಲ್ಲಿರುವ ಅನೇಕ ವಿಷಯಗಳನು ವಿಭಜಿಸಿ ಆಡಳಿತಕ್ಕೆ ಸಂಬಂಧ ಪಟ್ಟ ವಿಷಯಗಳ ವ್ಯವಸ್ಥೆ ಬಗ್ಗೆ ಎಷ್ಟು ಸಾಧ್ಯವೋ ಅಷ್ಟು ವಿಷಯವನ್ನು ಒದಗಿಸುತ್ತದೆ. ಇದರಲ್ಲಿ ಬಹುಮುಖ್ಯವಾದುದು ಸಾರ್ವಜನಿಕ ನೀತಿ- ಹೋಲಿಕೆ ಅಧ್ಯಯನದಿಂದ ಹುಟ್ಟಿ ಬಂದಂದ್ದು. ಸಾರ್ವಜನಿಕ ಆಡಳಿತದ ತುಲನಾತ್ಮಕ ಅಧ್ಯಯನದ ಈ ಕೆಳಕಂಡ ಎರಡು ಮುಖ್ಯ ಪ್ರಾಮುಖ್ಯತೆಗಳನ್ನು ವಾಲ್ಡೋರವರು ತಿಳಿಸಿರುತ್ತಾರೆ.

(1) ವಿಶ್ವದಲ್ಲಿ ಎಲ್ಲಿ ಬೇಕಿದ್ದರು, ಪತ್ತೆ ಹಚ್ಚುವುದು, ವಿವರಿಸುವುದು, ವ್ಯತ್ಯಾಸ ತಿಳಿಸುವುದರ ಜೊತೆಗೆ ಯಾವ ವಿಷಯದ ಬಗ್ಗೆ ಹೋಲಿಕೆ ಅಧ್ಯಯನವಾಗಬೇಕು ಎಂಬುದು.

(2) ಪ್ರತ್ಯೇಕಿಸಲ್ಪಟ್ಟ ವಿಷಯಗಳ ಅಭಿವೃದ್ಧಿ ಹಾಗೂ ಅದನ್ನು ವಿಶ್ಲೇಷಿಸುವದು (ನಿರ್ದಿಷ್ಟ ವಿಷಯಗಳನ್ನು ಪ್ರತ್ಯೇಕಿಸಿದ ನಂತರ)

ಜ್ಞಾನರ್ಜನೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಾರ್ವಜನಿಕ ಆಡಳಿತ ಅಧ್ಯಯನ ಮಾಡುವುದು. ವಿವಿಧ ಕಡೆ ಆಡಳಿತ ವ್ಯವಸ್ಥೆ ರೂಪಗೊಂಡಿರುವುದು ಮತ್ತು ಅಲ್ಲಿನ ನ್ಯೂನತೆಗಳನ್ನು ಪತ್ತೆ ಹಚ್ಚಿ ಅದನ್ನು ಸರಿಪಡಿಸುವುದು ಕಲಿಯಲು ಇಚ್ಛಿಸುವ ವ್ಯಕ್ತಿಗಳನ್ನವಲಂಬಿಸಿರುತ್ತದೆ. ಹೋಲಿಕೆ ಅಧ್ಯಯನ ಸಾರ್ವಜನಿಕ ಆಡಳಿತದ ವ್ಯಾಪ್ತಿ ಹೆಚ್ಚಿಸುವುದು , ಅಭಿವೃದ್ಧಿ ಪಡಿಸುವುದು ಉಪಯುಕ್ತಗೊಳಿಸುವುದು ಹಾಗೂ ಅಂತರ ರಾಷ್ಟ್ರೀಯ ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಡುವುದು. ಈ ಎಲ್ಲಾ ಕಾರಣಗಳಿಂದಾಗಿ ರಾಜಕೀಯ ಮತ್ತು ಆಡಳಿತವನ್ನು ಹತ್ತಿರ ತರುವ

## 3.3 ತೌಲನಿಕ ಸಾರ್ವಜನಿಕ ಆಡಳಿತ

1963ರಲ್ಲಿ ಆಡಳಿತದ ತುಲನಾತ್ಮಕ ಅಧ್ಯಯನ ಸಂಘವನ್ನು ಸಾರ್ವಜನಿಕ ಆಡಳಿತದ ಮೇಲೆ ಕಳಕಳಿಇದ್ದಂತಹ ಅಮೇರಿಕನ್ನರು ಸ್ಥಾಪಿಸಿದರು. ಈ ಸಮಿತಿ ಫ್ರೆಡ್ ವಿಲಿಯಮ್ಸ್‌ರಿಗ್ಸ್ ರವರ ನಾಯಕತ್ವದಲ್ಲಿ ಅಸ್ಥಿತ್ವಕ್ಕೆ ಬಹಳ ಹಿಂದೆಯೇ ಬಂದಿತ್ತು. ಈ ಸಮಿತಿ ಮೂರು ಪ್ರಮುಖ ಧ್ಯೇಯಗಳನ್ನು ಒಳಗೊಂಡಿತ್ತು. (1) ಸಂಶೋಧನೆಗೆ ಉತ್ತೇಜನ (2) ಬೋಧನೆಗೆ ಉತ್ತೇಜನ (3) ಅಭಿವೃದ್ಧಿ ಮತ್ತು ಆಡಳಿತ ರಂಗದಲ್ಲಿ ಉತ್ತಮವಾದ ಸಾರ್ವಜನಿಕ ನೀತಿಯನ್ನು ರೂಪಿಸುವುದು. ಹೋಲಿಕೆ ಆಡಳಿತ ಅಧ್ಯಯನ ಸಮಿತಿ ಪ್ರಕಾರ ತುಲನಾತ್ಮಕ ಸಾರ್ವಜನಿಕ ಆಡಳಿತ ಎಂದರೆ ಸಾರ್ವಜನಿಕ ಆಡಳಿತ ಸಿದ್ಧಾಂತ ವಿಭಿನ್ನ ಸಂಸ್ಕೃತಿ ಹಾಗೂ ರಾಷ್ಟ್ರೀಯತೆ ಉಳ್ಳದ್ದಾಗಿದ್ದು ಮತ್ತು ಅದಕ್ಕೆ ಸಂಬಂಧ ಪಟ್ಟಂತಹ ಅಂಕಿಅಂಶಗಳ ಬಗ್ಗೆ ಪರಿಶೀಲನೆ ಮತ್ತು ಅಧ್ಯಯನ ನಡೆಸುವುದು.

ಕಾಲ್ಡ್‌ವೆಲ್‌ರವ ಪ್ರಕಾರ ತುಲನಾತ್ಮಕ ಆಡಳಿತದ ಆಂದೋಲನದ ಮುಖ್ಯ ಉದ್ದೇಶ"ಆಡಳಿತದ ನಡಾವಳಿಗೆ ಸಂಬಂಧ ಪಟ್ಟ ವಿಷಯವನ್ನು ವಿಶ್ವವ್ಯಾಪಿ ಹರಡುವುದು"ಅಥವಾ "ಸಾರ್ವಜನಿಕ ಆಡಳಿತ ಶಿಕ್ಷಣ ವಿಷಯವನ್ನು ಸರ್ವವ್ಯಾಪಿ ಕೊಡುಗೆಯಾಗಿ ಪ್ರಸರಿಸುವುದು"

ತೌಲನಿಕ ಸಾರ್ವಜನಿಕ ಆಡಳಿತಕ್ಕೂ ಸಂಪ್ರದಾಯವಾದಿ ಆಡಳಿತಕ್ಕೂ ಎರಡು ಪ್ರಮುಖ ವ್ಯತ್ಯಾಸಗಳಿವೆ. ಮೊದಲನೆಯದು ಸಾರ್ವಜನಿಕ ಆಡಳಿತ ಸಾಮಾನ್ಯವಾಗಿ ತನ್ನ ಸಂಸ್ಕೃತಿಯೇ ಬಹಳ ಉತ್ತಮವಾದುದೆಂದು ಭಾವಿಸಿಕೊಂಡಿರುವಂತಹುದು (ethnocenric) ಆದರೆ ತೌಲನಿಕ ಸಾರ್ವಜನಿಕ ಆಡಳಿತ ವಿಭಿನ್ನ ಸಂಸ್ಕೃತಿ ಉಳ್ಳ ಹಾಗೂ ಅದರ ಬಗ್ಗೆಯೇ ಸಾಕಷ್ಟು ಒತ್ತು ನೀಡುವ ಸ್ವಭಾವ ಉಳ್ಳದು. ಸಾರ್ವಜನಿಕ ಆಡಳಿತ ತನ್ನ ತತ್ವಗಳನ್ನು ಕಡೆಗಣಿಸುವುದಕ್ಕೆ ಮುಂಚಿತವಾಗಿ, ಸಂಸ್ಕೃತಿಗೆ ಸಂಬಂಧ ಪಟ್ಟವಿಷಯಗಳು ಆಡಳಿತದ ಮೇಲೆ ಯಾವ ವಿದವಾದ ಪರಿಣಾಮವನ್ನು ಬೀರಲಾರದು ಎಂದು ಪರಿಗಣಿಸಲಾಗುತ್ತು. ಕಾರಣ ತತ್ವಗಳು ಎಲ್ಲಿ ಯಾವ ವಿಷಯಕ್ಕೆಬೇಕಾದರು ಅಳವಡಿಸಬಹುದು ತತ್ವಗಳು ತತ್ವಗಳೇ ಎಂಬ ಭಾವನೆ ಇತ್ತು. ಆದರೆ ರಾಬರ್ಟ್‌ದಾಲ್, ವಾಲ್ಡೋ ಹಾಗೂ ಇನ್ನಿತರರು ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳು ಸಾರ್ವಜನಿಕ ಆಡಳಿತದ ಮೇಲೆ ತನ್ನದೆ ಆದ ಪರಿಣಾಮವನ್ನು ಬೀರುವುದರಿಂದ, ಒಂದು ಕಡೆ ಇರುವ ಸಾರ್ವಜನಿಕ ಆಡಳಿತ ರೀತಿ, ನೀತಿ ಹಾಗೂ ರಿವಾಜು ವಿಶ್ವದ ಮತ್ತೊಂದು ಕಡೆ ಅಸ್ತಿತ್ವದಲ್ಲಿರುವ ಸಾರ್ವಜನಿಕ ಆಡಳಿತದಲ್ಲಿ ಕಾಣಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಎರಡನೆಯ ವ್ಯತ್ಯಾಸ ತೌಲನಿಕ ಆಡಳಿತ ಮತ್ತು ಸಾರ್ವಜನಿಕ ಆಡಳಿತಕ್ಕೂ ಇರುವುದು ಸಾರ್ವಜನಿಕ ಆಡಳಿತ ನಡೆಸುವವರು ತಾವು ಅಳವಡಿಸಿಕೊಂಡಂತೆ ಇದ್ದರೆ ತೌಲನಿಕ ಆಡಳಿತ, ಜ್ಞಾನಭಿವೃದ್ಧಿ ಅಥವಾ ಜ್ಞಾನಕೋಸ್ಕರ ಜ್ಞಾನ ಹರಡುವ ಉದ್ದೇಶ ಹೊಂದಿದೆ. ಎರಡನೆಯದಾಗಿ ಜ್ಞಾನಭಿವೃದ್ಧಿಗೋಸ್ಕರ ಹೊಸ ಹೊಸ ಸಿದ್ಧಾಂತ ರಚನೆಗೆ ಮುಂದಾಗಿರುತ್ತದೆ ತೌಲನಿಕ ಆಡಳಿತ. ಆಡಳಿತಾಧಿಕಾರಿಗಳು ಆಡಳಿತಕ್ಕೆನುಗುಣವಾಗಿ ಆಡಳಿತದ ವ್ಯವಸ್ಥೆ ಬದಲಿಸಿಕೊಂಡರೆ ತೌಲನಿಕ ಆಡಳಿತ ವಿದ್ವಾಂಸರ ಒತ್ತಾಸೆಯನ್ನು ಪಡೆದಿರುವಂತಹ ವಿಷಯವಾಗಿದೆ.

ಸಾರ್ವಜನಿಕ ಆಡಳಿತದಲ್ಲಿ ಪ್ರಪ್ರಥಮವಾಗಿ ಹೋಲಿಕೆ ಅಧ್ಯಯನವನ್ನು ಪ್ರತಿಪಾದಿಸಿದಂತಹ ವ್ಯಕ್ತಿ ವುಡ್ರೋ ವಿಲ್ಸನ್. ಈತ ಹೋಲಿಕೆ ಅಥವಾ ತೌಲನಿಕ ಅಧ್ಯಯನದ ಆಧಾರದ ಮೇಲೆ ಅಮೇರಿಕಾ ಸರ್ಕಾರದ ವ್ಯವಸ್ಥೆಯೊಡನೆ ಇಂಗ್ಲೆಂಡಿನ ಕ್ಯಾಬಿನೆಟ್ ವ್ಯವಸ್ಥೆಯನ್ನು ತೌಲನಿಕವಾಗಿ ಅಧ್ಯಯನ ನಡೆಸಿದ ಜೊತೆಗೆ ಅಮೇರಿಕಾ ಸರ್ಕಾರಿ ಅನೇಕ ರಂಗಗಳಲ್ಲಿ ಐಕ್ಯತೆ ಪ್ರದರ್ಶಿಸಿ ಸುಭದ್ರ ಆಡಳಿತ ನಡೆಸುವಲ್ಲಿ ಸಾಮರ್ಥ್ಯವನ್ನು ಕಳೆದು ಕೊಂಡಿದೆ ಎಂಬುದನ್ನು ಎತ್ತಿತೋರಿಸಿದ. 19ನೇ ಶತಮಾನದಲ್ಲಿ ಸಣ್ಣಪ್ರಮಾಣದಲ್ಲಿ ಪ್ರಾರಂಭವಾದ ತೌಲನಿಕ ಅಧ್ಯಯನ ಕ್ರಮೇಣ ಸರ್ಕಾರದ ವಿವಿದ ಅಂಗಗಳಲ್ಲಿ ನ್ಯೂನತೆಯನ್ನ ಸರಿಪಡಿಸಲು ನಾಂದಿಹಾಕಿತು. ಮುನಿಸಿಪಾಲಿಟಿ ಸುಧಾರಣೆ, ನಾಗರೀಕ ಸೇವಾ ಸುಧಾರಣೆ ಅಂತಿಮವಾಗಿ ಸರ್ಕಾರದ ಬದಲಾವಣೆ ಹಾಗೂ ಇನ್ನೂ ಮಹತ್ತರ ಬದಲಾವಣೆಗೆ ಕಾರಣವಾಯಿತು. ದ್ವಿತಿಯ ಮಹಾಯುದ್ಧದ ನಂತರ ತೌಲನಿಕ ಅಧ್ಯಯನದ ಸಾಹಿತ್ಯವೇ ಬದಲಾಯಿತು. ತೌಲನಿಕ ಅಧ್ಯಯನದ ಪ್ರೇರಂಕಾರಂಶದ ಹಾಗೂ ಮಹತ್ತರವಾದ ಬದಲಾವಣೆಗೆ ಎರಡು ಕಾರಣಗಳಿವೆ. (1) ನೀತಿಗೆ ಸಂಬಂಧ ಪಟ್ಟಬದಲಾವಣೆ (2) ಬೌದ್ಧಿಕತೆಗೆ ಸಂಬಂಧಿಸಿದ ಬದಲಾವಣೆ. ನೀತಿಗೆ ಸಂಬಂಧಿಸಿದ ಬದಲಾವಣೆ ಎಂದರೆ ಮೂಲತಃ ನೀತಿಗೆ ಸಂಬಂಧಿಸಿದ ಬದಲಾವಣೆ. ಈ ನೀತಿಗೆ ಸಂಬಂಧಿಸಿದಂತೆ ಆದ ಬದಲಾವಣೆ ಜನತೆಯಲ್ಲಿ ಆಸಕ್ತಿಯನ್ನು ಕೆರಳಿಸುವಂತಹ ಹಾಗೂ ಅಭಿವೃದ್ಧಿ ಪಡಿಸಲು ಸಾರ್ವಜನಿಕ ಆಡಳಿತದ ತೌಲನಿಕ ಅಧ್ಯಯನ ಅನಿವಾರ್ಯವಾಯಿತು. ಈ ರೀತಿಯಾಗಿ ಅನೇಕ ವಿಷಯಗಳು ಪ್ರಾಕೃತಿಕವಾಗಿ ಹಾಗೂ ಸೂಕ್ತ ಬೇಡಿಕೆ ಇದ್ದಲ್ಲಿ ಧಕ್ಷ ರೀತಿಯಿಂದ ನೀತಿ ರಚನೆ ಹಾಗೂ ಅದರ ಕಾರ್ಯಗತ ಮಾಡುವಲ್ಲಿ ಪ್ರಾಮುಖ್ಯತೆವಹಿಸಿತು. ಎರಡನೆಯದು ದ್ವಿತೀಯ ಮಹಾಯುದ್ಧದ ನಂತರ ತೌಲನಿಕ ಅಧ್ಯಯನದ ಮಹತ್ವ ಹೆಚ್ಚಾಯಿತಲ್ಲದೆ ಅದರ ಮೇಲಿನ ಆಸಕ್ತಿಯೂ ಕೂಡ ಜಾಸ್ತಿಯಾಯಿತು. ಯೂರೋಪಿನಲ್ಲಿ ಹಣಕಾಸಿನ ವಸೂಲಿಗೆ ಹುಟ್ಟಿಕೊಂಡ ಮಾರ್ಷಲ್‌ಯೋಜನೆ ನಂತರ ನಾಲ್ಕು ಅಂಶಗಳ ಕಾರ್ಯಕ್ರಮ ಕುರಿತಂತೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆರ್ಥಿಕ ಮತ್ತು ರಾಜಕೀಯ ಬೇಡಿಕೆಗಳ ಪೂರೈಕೆ ಕುರಿತಂತೆ ಹೊರ ರಾಷ್ಟ್ರಗಳ ಜೊತೆ ಸಂಬಂಧ ವೃದ್ಧಿಸುವುದು ಈ ರೀತಿಯಾದ ಬೇಡಿಕೆ ಪೂರೈಸಬೇಕಿದ್ದಲ್ಲಿ ತಾಂತ್ರಿಕ ಸೇವೆಗಳ ರಫ್ತು ವರದಿ ತಯಾರಿಕೆ

ಹಾಗೂ ವರದಿ ಮಾಡುವಿಕೆ ಇತ್ಯಾದಿ ಅಮೇರಿಕಾದ ಅನೇಕ ವಿದ್ವಾಂಸರು ಯು. ಎನ್. ಓ ವನ್ನು ತಮ್ಮ ತಾಂತ್ರಿಕ ಪರಿಣಿತಿಯ ಆಧಾರದ ಮೇಲೆ ಉದ್ಯೋಗಕ್ಕೆ ಸೇರಿಕೊಂಡರು. ಅಮೇರಿಕಾದ ಈ ಅಧಿಕಾರಿಗಳು ತಮ್ಮ ತಾಂತ್ರಿಕ ಸೇವೆಯನ್ನು ನೀಡಲು ಯು. ಎನ್. ಓ ವನ್ನು ಸೇರಿದರು. ಮಧ್ಯದಲ್ಲಿ ಅಂತರ ರಾಷ್ಟ್ರೀಯ ಆಡಳಿತ ಸುಧಾರಣೆ ಅಸ್ಥಿತ್ವದಲ್ಲಿತು. ಈ ದೊಡ್ಡ ಪ್ರಚಾರದಿಂದಾಗಿ ಅಮೇರಿಕಾ ಸರ್ಕಾರ ವಿಶ್ವದ ಇತರ ಬುದ್ಧಿವಂತ ಅಧಿಕಾರಿಗಳ ಸಂಘದಿಂದ ಅನುದಾನ ಪಡೆಯಲಾರಂಭಿಸಿತು. ಈ ಎಲ್ಲಾ ಅನುಧಾನಗಳಿಂದ ಅಮೇರಿಕಾದಲ್ಲಿ ಅನೇಕ ವಿದ್ವಾಂಸರು, ವಿದ್ಯಾವಂತರು ಈ ತಾಂತ್ರಿಕ ಸಹಾಯದ ಸದುಉಪಯೋಗ ಪಡೆದು ಸಮಾಜಿಕ - ರಾಜಕೀಯ ಹಾಗೂ ಆಡಳಿತದ ಬಗ್ಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಬಗ್ಗೆ ಅಧ್ಯಯನ ಮಾಡಲು ಪ್ರಾರಂಭಿಸಿದರು. ಈ ರೀತಿ ಅಮೇರಿಕಾದ ವಿದ್ಯಾರ್ಥಿಗಳ ಸಹಯೋಗದಿಂದಾಗಿ ಹಾಗೂ ಅವರ ಮುಂದಾಳತ್ವದಲ್ಲಿ ಆಡಳಿತದ ತೌಲನಿಕ ಅಧ್ಯಯನ ಪ್ರಾರಂಭವಾಯಿತು. ಎರಡನೆಯ ಮಹಾಯುದ್ಧದ ನಂತರ ತೌಲನಿಕ ರಾಜಕೀಯ ಶಾಸ್ತ್ರದ ಅಧ್ಯಯನ ಪ್ರಾರಂಭವಾಯಿತು ಈ ರೀತಿಯಾಗಿ ತೌಲನಿಕ ರಾಜ್ಯಶಾಸ್ತ್ರ ಹಾಗೂ ತೌಲನಿಕ ಸಾರ್ವಜನಿಕ ಆಡಳಿತಕ್ಕೆ ಸಂಬಂಧ ಪಟ್ಟಂತೆ ಅನೇಕ ಸಾಮಾನ್ಯ ವಿಷಯಗಳ ಬಗ್ಗೆ ಅಧ್ಯಯನ ಸಂಶೋಧನೆ ಪ್ರಾರಂಭವಾಯಿತು. ಹಳೆಯ ಮಾದರಿ ಹಾಗೂ ವಿಧಾನಗಳನ್ನು ರಾಜ್ಯಶಾಸ್ತ್ರ ಹಾಗೂ ಸಾರ್ವಜನಿಕ ಆಡಳಿತ ತಿರಸ್ಕರಿಸಿತಲ್ಲದೆ. ಹೊಸ ಕಲ್ಪನೆ ಹಾಗೂ ಅಂತರ ಶಾಸ್ತ್ರೀಯ ವಿಧಾನದಲ್ಲಿ ಸಂಶೋಧನೆ ಪ್ರಾರಂಭ ಮಾಡಿದರು.ಈ ಮಾದರಿ ಸಂಶೋಧನೆ ಕೇವಲ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಾತ್ರ ಪ್ರಾರಂಭವಾಯಿತು ಇಂತಹ ರಾಷ್ಟ್ರಗಳಲ್ಲಿ ಹೊಸ ಹೊಸ ವಿಷಯದ ಬಗ್ಗೆ ಸಂಶೋಧನೆಗೆ ಹೆಚ್ಚಿನ ಒತ್ತು ನೀಡಲಾಯಿತು. ರಾಜಕೀಯ ಶಾಸ್ತ್ರಜ್ಞರುಗಳಾದ ಆಲ್ಮಂಡ್, ಬಿಂಡರ್, ಕೋಲ್‌ಮನ್, ಲಾಪಲೊಂಬೋರ ಮತ್ತು ವೈಡ್ನರ್‌ರವರುಗಳು ಸಾರ್ವಜನಿಕ ಆಡಳಿತ ರಾಜಕೀಯ ವ್ಯವಸ್ಥೆಯ ಒಂದು ಉಪವಿಭಾಗ ಎಂದು ಪರಿಗಣಿಸಲಾಯಿತು. ಆಡಳಿತದಲ್ಲಿ ಕಂಡುಬರುವ ರಾಜಕೀಯ ಅಂಶಗಳನು ಒಂದು ಗೂಡಿಸುವುದರ ಜೊತೆಗೆ ಅದಕ್ಕೆ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಲಾಪಲಂಬೋರ ರವರ ಬ್ಯೂರೋಕ್ರಸಿ ಅಂಡ್ ಪೊಲಿಟಿಕಲ್ ಡೆವಲಪ್‌ಮೆಂಟ್ ಎಂಬ ಪುಸ್ತಕದಲ್ಲಿ ಕಾಣಬಹುದು. ರಾಜಕೀಯ-ಆಡಳಿತದ ದ್ವಂದಾತ್ಮಕವಾದ ಮುಗಿದ ಅಧ್ಯಾಯ (ಮುಗಿದು ಹೋದ ಕಾಲ) ಈಗ ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿವಿಧ ವಿಷಯಗಳ ಬಗ್ಗೆ ಹಾಗೂ ಒಂದೇ ವಿಷಯದ ವಿವಿಧ ಮಜುಲುಗಳ ಮೇಲೆ ಸಂಶೋಧನೆ ನಡೆಸುತ್ತಿವೆ.

**ನಿಮ್ಮ ಪ್ರಗತಿ ಪರಿಶೀಲನೆ**

**ಸೂಚನೆ :** 1) ಖಾಲಿ ಇರುವ ಜಾಗವನ್ನು ನಿಮ್ಮ ಉತ್ತರಕೋಸ್ಕರ ಉಪಯೋಗಿಸಿ

2) ನಿಮ್ಮ ಉತ್ತರವನ್ನು ಈ ಘಟಕದ ಅಂತ್ಯದಲ್ಲಿ ನೀಡಿರುವ ಮಾದರಿ ಉತ್ತರದೊಡನೆ ಪರಿಶೀಲಿಸಿ

1) ತೌಲನಿಕ ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆ ತಿಳಿಸಿ.

..........................................................................................................................

..........................................................................................................................

..........................................................................................................................

..........................................................................................................................

2) ತೌಲನಿಕ ಸಾರ್ವಜನಿಕ ಆಡಳಿತದ ಮೂಲವನ್ನು ವಿವರಿಸಿ.

..........................................................................................................................

.................................................................................................................................

.................................................................................................................................

.................................................................................................................................

## 3.4 ಸಾರಾಂಶ

ಫೆರಲ್ ಹೆಡೆ ಮತ್ತು ಚಾರ್ಲ್ಸ್ ಗುಡ್‌ಸೆಲ್ ರವರುಗಳು ತೌಲನಿಕ ಆಡಳಿತದ ಬಗ್ಗೆ ಪುನರ್ ವಿಮರ್ಶಿಸಲು ಚಳುವಳಿ ಪ್ರಾರಂಭಿಸಿದರು ಚಾರ್ಲ್ಸ್ ಗುಡ್‌ಸೆಲ್ ರವರು ನವ್ಯ ತೌಲನಿಕ ಸಾರ್ವಜನಿಕ ಆಡಳಿತವನ್ನು ಪರಿಚಯಿಸಿದ ಕಾರಣದಿಂದಾಗಿ ಅದರ ಅಧ್ಯಯನದ ವ್ಯಾಪ್ತಿ ಮತ್ತಷ್ಟು ಪ್ರಸರಿಸಲು ಕಾರಣವಾಯಿತು. ಈ ಕಾರಣದಿಂದಾಗಿ ತೌಲನಿಕ ಸಾರ್ವಜನಿಕ ಆಡಳಿತ ಉನ್ನತರಾಷ್ಟ್ರಗಳ, ಅಧೀನ ರಾಷ್ಟ್ರಗಳ ಮಟ್ಟದಲ್ಲಿ ವಿಭಿನ್ನ ರಾಷ್ಟ್ರೀಯ ಆಡಳಿತ ವ್ಯವಸ್ಥೆ ಬಗ್ಗೆ ಅಧ್ಯಯನ ಪ್ರಾರಂಭವಾಯಿತು ಸಾರ್ವಜನಿಕ ಆಡಳಿತದ ಬಗ್ಗೆ ತೌಲನಿಕ ಅಧ್ಯಯನ ನಡೆಯಬೇಕಿದ್ದಲ್ಲಿ ಅದು ವ್ಯವಸ್ಥಿತವಾಗಿ ನಾಜೂಕ್ಕಾಗಿ ವಿದ್ವಾಂಸರ ಸಂಪೂರ್ಣ ಒಪ್ಪಿಗೆಯೊಂದಿಗೆ ನಡೆಯಬೇಕು ಅಬೆರ್‌ಬಾಚ್ ಮತ್ತು ರಾಕ್‌ಮಾನ್‌ರವರುಗಳು ತೌಲನಿಕ ಆಡಳಿತ ವ್ಯವಸ್ಥೆಯ ಕಾರ್ಯ ತುಂಬಾ ತ್ರಾಸದಾಯಕ ಕೆಲಸವಾಗಿರುತ್ತದೆ ಎಂದಿದ್ದಾರೆ. ಮತ್ತೊಬ್ಬ ಬರಹಗಾರ ಹಾಗೂ ಆಡಳಿತಜ್ಞರ ಪ್ರಕಾರ ಸಂಶೋಧಕರು ಬರಹಗಾರರು ವೈಜ್ಞಾನಿಕ ತೌಲನಿಕ ಸಾರ್ವಜನಿಕ ಆಡಳಿತ ಹೊರತರುವಲ್ಲಿ ನಿಶ್ಫಲರಾಗಿದದ್ದಾರೆ. ಹಾಗೂ ತೌಲನಿಕ ಆಡಳಿತ ಅಧ್ಯಯನದ ಪ್ರಾರಂಭವಾಗಿ ಅನೇಕ ವರ್ಷಗಳು ಕಳೆದಿದ್ದರೂ ಸಹ ವೈಜ್ಞಾನಿಕ ತೌಲನಿಕ ಆಡಳಿತ ಎಂದು ಕರೆಸಿಕೊಳ್ಳುವಲ್ಲಿ ನಿಶ್ಚಲರಾಗಿದ್ದಾರೆ.

## 3.5 ಕಠಿಣ ಪದಗಳು

ಪ್ರಸರ = ಪ್ರಸಾರ

ತೌಲನಿಕ = ಹೋಲಿಕೆ

ನೀತಿ = ದೋರಣೆ

## 3.6 ಉಪಯುಕ್ತ ಗ್ರಂಥಗಳು

1) Robert Dahl = The science of public Administration
2) Ferrel Heady = Paper in comparative Administration
3) Ramesh K. Arora comparative public Administration

## 3.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

ಪ್ರಶ್ನೆ 1ಕ್ಕೆ ವಿಭಾಗ 3.2 ನೋಡಿ

ಪ್ರಶ್ನೆ 2ಕ್ಕೆ ವಿಭಾಗ 3.3 ರ 2 ನೇ ಪ್ಯಾರ ನೋಡಿ.

## ಘಟಕ- 4 ನೂತನ ಸಾರ್ವಜನಿಕ ಆಡಳಿತ.

ರಚನೆ.

4.0 ಉದ್ದೇಶಗಳು

4.1 ಪರಿಚಯ

4.2 ಅರ್ಥ ಮತ್ತು ಲಕ್ಷಣಗಳು - ಬೆಳವಣಿಗೆ

4.3 ಜಾನ್‌ಹನಿ ವರದಿ-1967

4.4 ಫಿಲಡೆಲ್ಫಿಯ ಸಮ್ಮೇಳನ - 1967

4.5 ಮಿನ್ನೊಬ್ರೂಕ್ ಸಮ್ಮೇಳನ - 1968

4.6 ನೂತನ ಸಾರ್ವಜನಿಕ ಆಡಳಿತದ ಗುರಿಗಳು

4.7 ಸಾರಾಂಶ

4.8 ಕಠಿಣ ಪದಗಳು

4.9 ಉಪಯುಕ್ತ ಪುಸ್ತಕಗಳು

4.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

## 4.0 ಉದ್ದೇಶಗಳು

ಈ ಘಟಕ ನೂತನ ಸಾರ್ವಜನಿಕ ಆಡಳಿತದ ಬಗ್ಗೆ ವಿವರ ನೀಡುತ್ತದೆ ಹಾಗೂ ಈ ಘಟಕ ನೂತನ ಸಾರ್ವಜನಿಕ ಆಡಳಿತದ ಅರ್ಥ, ಪ್ರಾಮುಖ್ಯತೆ ಬಗ್ಗೆ ವಿವರ ನೀಡುವುದಲ್ಲದೆ ಇದರ ಹುಟ್ಟುವಳಿಗೆ ಕಾರಣವಾದ ಅನೇಕ ಸಮಿತಿಗಳ ವರದಿಯ ಮುಖ್ಯಾಂಶಗಳನ್ನು ಸಹ ವಿವರಿಸಲಾಗಿದೆ.ಈ ಘಟಕವನ್ನು ಅಭ್ಯಾಸ ಮಾಡಿದಾಗ ನಿಮಗೆ ತಿಳಿದು ಬರುವುದೇನೆಂದರೆ

- ನೂತನ ಸಾರ್ವಜನಿಕ ಆಡಳಿತದ ಮೂಲ
- ನವ್ಯ ಸಾರ್ವಜನಿಕ ಆಡಳಿತದ ಬೆಳವಣಿಗೆಗೆ ಮೂಲ ಕಾರಣಗಳು
- ಅಧಿವೇಶನದ ನಿರ್ಣಯಗಳು
- ನೂತನ ಸಾರ್ವಜನಿಕ ಆಡಳಿತ ಗುರಿ.

## 4.1 ಪರಿಚಯ

ನೂತನ ಸಾರ್ವಜನಿಕ ಆಡಳಿತ ಅನೇಕ ಹೊಸ ಹೊಸ ವಿಷಯಗಳನ್ನು ಹಾಗೂ ಮುಖ್ಯಾಂಶಗಳನ್ನು ಸಾರ್ವಜನಿಕ ಆಡಳಿತವೆಂಬ ಶಿಕ್ಷಣ ಕ್ರಮಕ್ಕೆ ಸೇರಿಸಿರುತ್ತದೆ. ಅದು ಹೊಸತೇನು ಅಲ್ಲ. ಆದರೆ ಈ ಎಲ್ಲಾ ಮೇಲ್ಕಂಡ ಕಾರಣಗಳಿಂದ ಹೊಸದೆಂದು ಕರೆಯಲು ಯಾವ ವಿಷಯವೂ ಇಲ್ಲದಿದ್ದ ಕಾರಣದಿಂದಾಗಿ ಸಾರ್ವಜನಿಕ ಆಡಳಿತವನ್ನೆ" ನೂತನ ಸಾರ್ವಜನಿಕ ಆಡಳಿತ " ಎಂದು ಕರೆಯುತ್ತಿದ್ದೇವೆ. ಆದರೆ ಕೆಲವು ಸಾರ್ವಜನಿಕ ಆಡಳಿತದ ಬರಹಗಾರರು ಪ್ರಾಧ್ಯಾಪಕರು (ಸಾರ್ವಜನಿಕ ಆಡಳಿತದ) ಮೂಲ ಕಲ್ಪನೆಗೆ ಸಮಂಜಸತೆ ಮೌಲ್ಯ, ಸಾಮಾಜಿಕ ಸಮಾನತೆ ಹಾಗೂ ಸಾಮಾಜಿಕ ಪರಿವರ್ತನೆ ಎಂಬ ಪದಗಳನ್ನು ಸೇರಿಸಲಾಯಿತು. ಹಳೆಯ ಸಾರ್ವಜನಿಕ ಆಡಳಿತ ಈ ಪದಗಳ ಸೇರುವಿಕೆಯಿಂದ ಸಾಕಷ್ಟು ಪ್ರಾಮುಖ್ಯತೆ ಸಿಕ್ಕಿತು. ಈ ಕಾರಣದಿಂದಾಗಿ ಸಂಪ್ರದಾಯಿಕ ಆಡಳಿತ ನೂತನ ಸಾರ್ವಜನಿಕ ಆಡಳಿತವಾಗಿ ಪರಿವರ್ತಿತಕೊಂಡಿತು.

## 4.2 ಅರ್ಥ ಮತ್ತು ಲಕ್ಷಣಗಳು

ನೂತನ ಸಾರ್ವಜನಿಕ ಆಡಳಿತ, ಸಾರ್ವಜನಿಕ ಆಡಳಿತಕ್ಕೆ ಹೊಸದಾಗಿ, ತಾತ್ವಿಕವಾಗಿ ಅನೇಕ ಹೊಸ ಆಯಾಮಗಳನ್ನು ಸೇರಿಸಿರುವ ಕಾರಣದಿಂದಾಗಿ ಅದನ್ನು ನೂತನ ಸಾರ್ವಜನಿಕ ಆಡಳಿತ ಎಂದು ಕರೆಯಲಾಗುತ್ತಿದೆ. ಸಂಪ್ರದಾಯಿಕ ಆಡಳಿತದ ತತ್ವಗಳಾದ ಧಕ್ಷತೆ ಮತ್ತು ಮಿತವ್ಯಯ ಆಡಳಿತದ ಕಾರ್ಯಚಟುವಟಿಕೆ ಹಾಗೂ ಧ್ಯೇಯಗಳಿಗೆ ಅಸಮರ್ಪಕ ವಾಗಿದ್ದಿತು. ಆಡಳಿತ ಕಾರ್ಯಗಳಿಗೆ ಧಕ್ಷತೆಯೊಂದೆ ದಾರಿಯಲ್ಲ. ಆಡಳಿತಾತ್ಮಕ ಕಾರ್ಯ ಚಟುವಟಿಕೆಗಳಿಗೆ ಮಾನವ ಒಂದು ಮಾದರಿ ಕೇಂದ್ರ ಬಿಂದುವಾಗಿದ್ದಾನೆ. ವ್ಯಕ್ತಿಯ ಧಕ್ಷತೆಯನ್ನು ಯಾಂತ್ರಿಕವಾಗಿ ಅಳೆಯಲು ಅಸಾಧ್ಯವಾಗಿರುತ್ತದೆ. ಅದುದರಿಂದ ಆಡಳಿತ ಮಾನವತಾ ವಾದವನ್ನು ಎತ್ತಿಹಿಡಿಯಬೇಕು ಹಾಗೂ ಅದರ ಗುರಿ ಮೌಲ್ಯಯುತವಾಗಿರಬೇಕು ವ್ಯಕ್ತಿ ಸಮಾಜವನ್ನು ಉತ್ತಮ ವಾಗಿರಿಸಿಕೊಳ್ಳಲು ಸೂಕ್ತ ಸಂಶೋಧನೆಯನ್ನು ನಡೆಸುತ್ತಿರಬೇಕು. ನೂತನ ಸಾರ್ವಜನಿಕ ಆಡಳಿತ ಯುವಕರನ್ನು ಉತ್ತೇಜಿಸುವ ಒಂದು ಆಂದೋಲನ. ಈ ಯುವಕರನ್ನೊಳಗೊಂಡ ಆಂದೋಲನ ಸಂಪ್ರದಾಯ ವಾದಿ ಆಡಳಿತದ ಅನೇಕ ತತ್ವಗಳನ್ನು ಪ್ರಶ್ನಿಸುವುದರ ಜೊತೆಗೆ, ಸಂಶೋಧನೆಯಲ್ಲಿ ಮೌಲ್ಯ ತಟಸ್ಥತೆ ಅದರ ಆಚಾರಣೆಗೆ ಆದಷ್ಟು ಅಡೆತಡೆಗಳನ್ನು ಪ್ರಶ್ನಿಸಲಾಯಿತು. ಇದರಿಂದ ಸಾಕಷ್ಟು ಪ್ರಚೋದನೆಗೆ ಒಳಗಾದ ಯುವ ಜನತೆ ಧಕ್ಷತೆಗೆ ಬದಲಾಗಿ ಜನತೆಗೆ ಅತ್ಯಗತ್ಯವಾಗಿರುವ ಸೇವೆ ಸಲ್ಲಿಸುವಲ್ಲಿ ಸಾಮಾಜಿಕ ಸಮಾನತೆಯನ್ನು ಸೂಕ್ಷ್ಮವಾಗಿ ಬದಲಾಯಿಸಲು ತೀರ್ಮಾನಿಸಲಾಯಿತು.

**ಬೆಳವಣಿಗೆ**

1967ರಲ್ಲಿ ಅನೇಕ ಯುವ ಪ್ರತಿಭಾವಂತ ಬರಹಗಾರರನ್ನೊಳಗೊಂಡ ಸಮ್ಮೇಳನ ಅಮೇರಿಕಾದ ಮಿನ್ನೊಬ್ರೂಕ್‌ನಲ್ಲಿ ನಡೆಯಿತು. ಈ ಸಮ್ಮೇಳನದ ಫಲವೇ ನೂತನ ಸಾರ್ವಜನಿಕ ಆಡಳಿತದ ಜನನ ಈ ಸಮ್ಮೇಳನ ಯುವ ಪ್ರತಿಭೆಯನ್ನೊಳಗೊಂಡಿತ್ತು. ಅದರಲ್ಲಿ ಪ್ರಮುಖರಾದವರು ಡ್ವಿಯೆಟ್ ವಾಲ್ಡೋ, ಫ್ರಾಂಕ್ ಮಾರಿನಿ, ಜಾರ್ಜ್ ಫ್ರೆಡರಿಕ್‌ಸನ್, ಜೋಸೆಫ್ ಯುವೇಜಸ್,ಚಾರ್ಲ್ಸ್ ಲಿಂಡ್ ಬಾಮ್ ಹಾಗೂ ಇತರರು. ಈ ಸಮ್ಮೇಳನದಿಂದಾಗಿ ಪ್ರಮುಖವಾಗಿ ಎರಡು ಪುಸ್ತಕಗಳನ್ನು ಹೊರ ತರಲಾಯಿತು. ಇದರ ಕೀರ್ತಿ ಡ್ವಯಿಟ್ ವಾಲ್ಡೋರವರಿಗೆ ಸಲ್ಲಬೇಕು. ಮಿನ್ನೊಬ್ರೂಕ್ ಪ್ರಾಸ್ಪೆಕ್ಟೀವ್ ಎಂಬ ಪುಸ್ತಕವನ್ನು ಫ್ರಾಂಕ್ ಮಾರಿನಿಯವರು ಪರಿಷ್ಕರಿಸಿದರೆ ಎರಡನೆಯ ಪುಸ್ತಕವಾದ ಪಬ್ಲಿಕ್ ಅಡ್ಮಿನಿಸ್ಟ್ರೇಶನ್ ಟೈಮ್ ಅಂಡ್ ಟರ್ಬುಲೆನ್ಸ್ ಎಂಬುದನ್ನ ಡ್ವಯಿಟ್ ವಾಲ್ಡೋರವರು ಪರಿಷ್ಕರಿಸಿದವರು.

**ನೂತನ ಸಾರ್ವಜನಿಕ ಆಡಳಿತದ ಹುಟ್ಟುವಳಿಯಿಂದಾಗಿ ಕೈಗೊಂಡ ಪ್ರಮುಖ ಘಟನೆಗಳು**

1) ಸಾರ್ವಜನಿಕ ಸೇವಾ ಸಿಬ್ಬಂದಿ(1967) ಗೆ ಉನ್ನತ ವಿದ್ಯಾಭ್ಯಾಸ ನೀಡಲು ಜಾನ್ ಹನಿ ವರದಿ.

2) ಸಾರ್ವಜನಿಕ ಆಡಳಿತದ ಸಿದ್ಧಾಂತ ಮತ್ತು ಕಾರ್ಯಚರಣೆ 1967 ಕುರಿತಂತೆ ಫಿಲಡೆಲ್ಫಿಯ ಸಮ್ಮೇಳನ.

3) 1968ರ ಮಿನ್ನೊಬ್ರುಕ್ ಸಮ್ಮೇಳನ

4) ನೂತನ ಸಾರ್ವಜನಿಕ ಆಡಳಿತದ ಕಡೆಗೆ ಎಂಬ ಗ್ರಂಥ ಪ್ರಕಟಣೆ.

5) ಬಂಡಾಯ ಸಮಯದಲ್ಲಿ ಸಾರ್ವಜನಿಕ ಆಡಳಿತ ಎಂಬ ಪುಸ್ತಕದ ಪ್ರಕಟಣೆ - ಪರಿಷ್ಕರಣೆ - ಡ್ವಿಯಟ್ ವಾಲ್ಡೋರವರಿಂದ.

## 4.3 ಜಾನ್ ಹನಿವರದಿ - 1967

ಜಾನ್ ಹನಿ ಯವರು ಅಮೇರಿಕಾದ ಎಲ್ಲಾ ವಿಶ್ವವಿದ್ಯಾಯಗಳಲ್ಲೂ ಸಾರ್ವಜನಿಕ ಆಡಳಿತ ಶಿಕ್ಷಣ ನೀಡಲು ಅದರ ಮೌಲೀಕರಣ ಮಾಡಿದರು. 1967ರಲ್ಲಿ ಇದರ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದರು ಹಾಗೂ ಆ ವರದಿಯಲ್ಲಿ ಒಂದು ಶಿಕ್ಷಣವಾಗಿ ಆಡಳಿತ ಶಾಸ್ತ್ರ ಭೋದಿಸಲು ಇದ್ದ ತೊಡಕುಗಳನ್ನು ಪಟ್ಟಿಮಾಡಿದ್ದರು.

**ಈ ರೀತಿ ತೀವ್ರ ತರನಾದ ಕ್ರಮ ಕೈಗೊಳ್ಳಲು ವರದಿಯಲ್ಲಿ ತಿಳಿಸಲಾಗಿತ್ತು**

1) ಶಿಕ್ಷಣ ಶಾಸ್ತ್ರವನ್ನಾಗಿ ಅಭಿವೃದ್ಧಿ ಪಡಿಸಲು ಇದ್ದ ಅಸಮರ್ಪಕ ಹಣಕಾಸಿನ ಅನುಧಾನ.

2) ಈ ಶಿಕ್ಷಣ ವಿಷಯದ ಬಗ್ಗೆ ಹಾಗೂ ಅದರ ಸ್ಥಾನ ಮಾನದ ಬಗ್ಗೆ ಖಾತ್ರಿಯಿಲ್ಲದೆ ಗೊಂದಲಮಯ ಸನ್ನಿವೇಶ ಸೃಷ್ಟಿ.

3) ಸಾಂಸ್ಥಿಕ ದೋಷಗಳು (ಸಾರ್ವಜನಿಕ ಆಡಳಿತ ಇಲಾಖೆಗಳ ಕಡಿತ).

4) ಆಡಳಿತಾಧಿಕಾರಿಗಳಿಗೂ- ಆಡಳಿತ ಶಾಸ್ತ್ರದ ವಿದ್ವಾಂಸರಿಗೂ ಇದ್ದ ಸಂವೇಧನಾ ಕೊರತೆ

**ಹನಿವರದಿಯ ಸಲಹೆಗಳು**

1) ಇದನ್ನೆಲ್ಲಾ ನಿಯಂತ್ರಿಸಲು ನ್ಯಾಷನಲ್ ಕಮಿಷನ್ ರಚನೆ ನಾಯಕತ್ವದ ಜೊತೆಗೆ ನೀಗಿಸಲು ವಿದ್ಯಾವಂತ ಮಾನವ ಶಕ್ತಿಗೆ ಬೇಡಿಕೆ.

2) ಉದ್ಯೋಗ ಪಡೆಯಲು ಪದವಿ ವಿದ್ಯಾಭ್ಯಾಸ ಮಾಡುವವವರಿಗೆ ಸ್ನಾತಕೋತ್ತರ ಪದವಿ ದರರಿಗೆ ಸಂಶೋಧಕರಿಗೆ ವರ್ಷಕ್ಕೆ 2500 ಡಾಲರ್ ಹಣದ ನೆರವು

3) ಸಾರ್ವಜನಿಕ ಸೇವೆಗೆ ತಯಾರು ಮಾಡಲು ಸ್ನಾತಕ ಪದವೀಧರರಿಗೆ ಪ್ರಾಯೋಜಿಕ ತರಬೇತಿಯನ್ನು ಕೇಂದ್ರ ರಾಜ್ಯ ಹಾಗೂ ಸ್ಥಳೀಯ ಮಟ್ಟದಲ್ಲಿ ನೀಡುವುದು.

4) ಸಾರ್ವಜನಿಕ ವಿದ್ಯಮಾನಗಳು ಮತ್ತು ಸಾರ್ವಜನಿಕ ಆಡಳಿತ ಭೋದಿಸುವ ಅಧ್ಯಾಪಕ ವರ್ಗಕ್ಕೆ ವಿಶೇಷ ಸಂಬಳ ಮತ್ತು ಭತ್ಯೆ ನೀಡುವುದು.

5) ಸರ್ಕಾರದ ಹಾಗೂ ದೈನಂದಿನ ವಿದ್ಯಾಮಾನಗಳ ಬಗ್ಗೆ ನಡೆಯುವಂತಹ ಕಾರ್ಯಗಳು ಪ್ರಾಕೃತಿಕವಾಗಿ ಅಧಿಕಾರಿಯಾಗಿ ಸರ್ಕಾರದ ಕಾರ್ಯದ ಬಗ್ಗೆ ಏನೆಲ್ಲಾ ತಿಳಿದು ಕೊಂಡಿದ್ದಾನೆ ಅದರ ಬಗ್ಗೆ ಅಧ್ಯಾಪಕರಿಗೆ ತರಬೇತಿ ನೀಡಿ ತರಗತಿಯಲ್ಲಿ ಭೋದನೆ ಮಾಡುವಾಗ ಸರ್ಕಾರದಲ್ಲಿ ಅಧಿಕಾರಿಗಳಾಗುವವರಿಗೆ ತಿಳಿಸಿಕೊಡುವುದು ಪ್ರಾಯೋಗಿಕವಾಗಿ ಅಭಿವೃದ್ಧಿ ಪಡಿಸಲು ಅಧಿಕಾರಿಗಳಿಗೆ ವಿದ್ಯಾರ್ಥಿ ದೆಸೆಯಲ್ಲೇ ಸರ್ಕಾರದ ಆಡಳಿತ ವಹಿವಾಟು ತಿಳಿಸಲು ಪಠ್ಯಸೂಚಿಯಲ್ಲಿ ವಿಷಯವನ್ನು ಆಳವಡಿಸಬೇಕು. ಸರ್ಕಾರ ಮತ್ತು ಸರ್ಕಾರದ ವಹಿವಾಟಿನ ಬಗ್ಗೆ ಸಂಶೋಧನೆ ನಡೆಸಲು ವಿಶ್ವವಿದ್ಯಾಲಯಗಳಿಗೆ ಪ್ರೋತ್ಸಾಹಿಸುವುದು. ಸಾರ್ವಜನಿಕ ಆಡಳಿತವನ್ನು ಭೋದಿಸಲು ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರ ಮಟ್ಟದಲ್ಲಿ ವ್ಯವಸ್ಥೆ ಕಲ್ಪಿಸಲಾಗುವುದು.

6) ಸರ್ಕಾರದ ವಿದ್ಯಮಾನಗಳ ಬಗ್ಗೆ ಯೋಜನೆಗಳು, ಸಿಬ್ಬಂದಿ ಬೆಳವಣಿಗೆ ಹಾಗೂ ಅವರಿಗೆ ದಿನ ನಿತ್ಯದ ವಿದ್ಯಾಮಾನಗಳ ಬಗ್ಗೆ ತಿಳುವಳಿಕೆ ನೀಡುವುದು. ವಿಶೇಷವಾಗಿ ಈ ರೀತಿ ತಿಳುವಳಿಕೆಯನ್ನು ಸಾರ್ವಜನಿಕ ಆಡಳಿತ ಮತ್ತು ಸರ್ಕಾರದ ವಿವಿಧ ವ್ಯವಹಾರಗಳನ್ನು ಬೋಧಿಸುವ ಸಾರ್ವಜನಿಕ ಆಡಳಿತ ಬೋಧಿಸುವವವರಿಗೆ ನೀಡಲು ವ್ಯವಸ್ಥೆ ಕಲ್ಪಿಸುವುದು. ಇದನ್ನು ನಿಯಂತ್ರಿಸಲು ಒಂದು ಸಲಹಾ ಮಂಡಳಿಯನು ರಚಿಸಿಲಾಗುವುದು.

7) ಸಾರ್ವಜನಿಕ ಸೇವೆ ಸಲ್ಲಿಸುತ್ತಿರುವ ವಿವಿಧ ಸಂಸ್ಥೆಗಳು ಸಮಯಕ್ಕೆ ತಕ್ಕಂತೆ ಹಾಗೂ ಅವಶ್ಯಕತೆಗೆ ಬೇಕಾದ ರೀತಿ ಅಧಿಕಾರಿಗಳಿಗೆ ತರಬೇತಿ ನೀಡುವುದು ಹಾಗೂ ತರಬೇತಿ ನೀಡುವಲ್ಲಿಇರುವ ಲೋಪದೋಶ ಸರಿಪಡಿಸುವುದು.

8) ಎರಡನೆಯ ಬಹುಮುಖ್ಯ ಹಾಗೂ ಇದಕ್ಕೆ ಸಂಬಂಧಿಸಿದ ವಿಷಯ ಎಂದರೆ ಉದ್ಯೋಗಸ್ಥರಿಗೆ, ಉದ್ಯೋಗಿಗಳಿಗೆ ಹಾಗೂ ಇನ್ನಿತರ ಸರ್ಕಾರದ ಸೇವೆಯಲ್ಲಿರುವವರಿಗೆ ಸಂಶೋಧನೆ, ಹಾಗೂ ಇದಕ್ಕೆ ಬೇಕಾದ ಸವಲತ್ತುಗಳನ್ನು ದೊರಕಿಸಿ ಕೊಡುವುದು ಸರ್ಕಾರದ ಕಾರ್ಯವಾಗಿರುತ್ತದೆ.

## 4.4 ಸಾರ್ವಜನಿಕ ಆಡಳಿತದ ಸಿದ್ಧಾಂತ ಮತ್ತು ಕಾರ್ಯಾಚರಣೆಗೆ ಸಂಬಂಧಿಸಿದ ಫಿಲಡಲ್ಫಿಯ ಸಮ್ಮೇಳನ - 1967

ಸಾರ್ವಜನಿಕ ಆಡಳಿತದ ಸಿದ್ಧಾಂತ ಮತ್ತು ಕಾರ್ಯಾಚರಣೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು " ಅಮೇರಿಕನ್ ಅಕಾಡೆಮಿ ಆಫ್ ಪೊಲಿಟಿಕಲ್ ಅಂಡ್ ಸೋಷಿಯಲ್ ಸೈನ್ಸ್‌ರವರು ಸಮಾವೇಶ ಒಂದನ್ನು ಸಂಘಟಿಸಿದ್ದರು. ಈ ಸಮ್ಮೇಳನದ ಅಧ್ಯಕ್ಷರಾಗಿ ಜೇಮ್ಸ್. ಸಿ. ಚಾರ್ಲ್ಸ್ ವರ್ತ್ ರವರು ಕಾರ್ಯ ನಿರ್ವಹಿಸಿದ್ದರು. ಅಧಿವೇಶನದಲ್ಲಿ ಭಾಗವಹಿಸಿದ್ದ ಸದಸ್ಯರುಗಳು ಸಾರ್ವಜನಿಕ ಆಡಳಿತದ ವ್ಯಾಪ್ತಿ ಗುರಿ ಹಾಗೂ ವಿಧಿ ವಿಧಾನಗಳನ್ನು ಚರ್ಚಿಸುವುದರ ಜೊತೆಗೆ ಸರ್ಕಾರದ ಒಂದು ಸಾಧನವಾಗಿ ಸಾರ್ವಜನಿಕ ಆಡಳಿತ ತನ್ನ ತಾತ್ವಿಕ ತಳಹದಿ ಮೇಲೆ ಎಷ್ಟು ಪ್ರಾಮುಖ್ಯತೆ ಗಳಿಸಿದೆ ಎಂಬುದರ ಬಗ್ಗೆ ಕುಲಂಕುಷ ಚರ್ಚೆಯಾಯಿತು.

ಸಮ್ಮೇಳನದಲ್ಲಿ ಭಾಗವಹಿಸಿದ ಸದಸ್ಯರು ಸಾರ್ವಜನಿಕ ಆಡಳಿತದ ವ್ಯಾಪ್ತಿ, ಧ್ಯೇಯಗಳು, ವಿಧಿ ವಿಧಾನಗಳು, ಸಿದ್ಧಾಂತ ಹಾಗೂ ಕಾರ್ಯಾಚರಣೆ ಬಗ್ಗೆ ಕುಲಂಕುಷವಾಗಿ ಚರ್ಚಿಸಿದರು. ಕೆಲವರ ಪ್ರಕಾರ ಸಾರ್ವಜನಿಕ ಆಡಳಿತ ಒಂದು ಒಳ್ಳೆಯ ಶಿಕ್ಷಣ ಕ್ರಮ ಇನ್ನೂ ಕೆಲವರ ಪ್ರಕಾರ ಸಾರ್ವಜನಿಕ ಆಡಳಿತ ಒಂದು ಮಾದರಿ ಸಾರ್ವಜನಿಕ ಹಿತಾಶಕ್ತಿ. ಇನ್ನೂ ಕೆಲವರ ಪ್ರಕಾರ ಸಾರ್ವಜನಿಕ ಆಡಳಿತ ಹಾಗೂ ಸರ್ಕಾರಿ ಆಡಳಿತ ಎರಡೂ ಒಂದೆ ಎಂಬ ಭಾವನೆ ಮೂಡಿಬಂತು. ಈ ರೀತಿಯಾಗಿ ಈ ಸಮಾವೇಶದಲ್ಲಿ ಎಲ್ಲರು ಒಪ್ಪುವಂತಹ ವಾಖ್ಯೆ ಹೊರಬರಲಿಲ್ಲ. ಆದರೆ ಕೆಲವು ಸಾಮಾನ್ಯ ವಿಷಯದ ಬಗ್ಗೆ ಸಮಾವೇಶದಲ್ಲಿ ಒಮ್ಮತದ ಅಭಿಪ್ರಾಯ ಮೂಡಿಬಂದಿತು. ಸಮ್ಮೇಳನದಲ್ಲಿ ಮೂಡಿಬಂದ ಸಾಮಾನ್ಯ ಅಭಿಪ್ರಾಯ ಈ ಕೆಳಕಂಡಂತಿದೆ.

1) ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ವಿವರಿಸಿದಷ್ಟು ಸುಲುಭವಾಗಿ ಅದರ ಎಲ್ಲೆ ಗುರುತಿಸವುದು ಕಷ್ಟ ಸಾಧ್ಯವಾದ ಕೆಲಸ.

2) ಆಡಳಿತಾಧಿಕಾರಿಗಳು ನೀತಿ ನಿರೂಪಣೆಯಲ್ಲಿ ಭಾಗವಹಿಸುತ್ತಾರೆ. ಆದರೆ ಇಲ್ಲಿ ನೀತಿ ನಿರೂಪಣೆ ಮತ್ತು ಆಡಳಿತದ ಮಧ್ಯೆ ಇರುವಂತಹ ದ್ವಂದ್ವ ಕಲಹ ತಪ್ಪೆಂದು ನಿರ್ಣಯಿಸಲಾಗಿದೆ.

3) ಅಮೇರಿಕಾದಲ್ಲಿ ಸಾರ್ವಜನಿಕ ಆಡಳಿತ ಒಂದು ಶಿಕ್ಷಣ ಕ್ರಮ ಆದರೆ ಈ ಶಿಕ್ಷಣ ಕ್ರಮ ಅಥವಾ ವ್ಯವಸ್ಥೆ ಅಮೇರಿಕಾದಲ್ಲಿನ ಆಡಳಿತ ವ್ಯವಸ್ಥೆಯೊಂದಿಗೆ ನಿಯಂತ್ರಿತ ಸಂಬಂಧ ಇಟ್ಟುಕೊಂಡಿದೆ.

4) ಅಧಿಕಾರ ಶಾಹಿ ವರ್ಗವನ್ನು ಕಾರ್ಯಾತ್ಮಕವಾಗಿ ಹಾಗೂ ರಚನಾತ್ಮಕವಾಗಿ ಅಭ್ಯಾಸ ಮಾಡಬೇಕು.

5) ಸಾರ್ವಜನಿಕ ಆಡಳಿತ ಮತ್ತು ವ್ಯವಹಾರಿಕ ಆಡಳಿತ ಎರಡನ್ನು ಯಾವಾಗಲೂ ಒಂದೆ ಎಂದು ಪರಿಗೇಣಿಸಬಾರದು. ಕಾರಣ ಸಾರ್ವಜನಿಕ ಆಡಳಿತ ಕೆಲವು ಪ್ರಮುಖ್ಯವಲ್ಲದ ವಿಷಯಗಳಲ್ಲಿ ಮಾತ್ರ ವ್ಯವಹಾರಿಕ ಆಡಳಿತದೊಂದಿಗೆ ಸಾಮ್ಯತೆ ಕಾಣಬಹುದಾಗಿದೆ.

6) ಸಾರ್ವಜನಿಕ ಆಡಳಿತ ಒಂದು ವೃತ್ತಿ ಯಾವಾಗಲು ಅದು ವೃತ್ತಿ ಹಾಗೂ ಶಿಕ್ಷಣ ಕ್ರಮ ವಾಗಿ ರಾಜ್ಯ ಶಾಸ್ತ್ರದೊಂದಿಗೆ ಇದೆ.

7) ಪ್ರಮಾಣೀಕೃತ ಆಡಳಿತ ಸಿದ್ಧಾಂತ ಹಾಗೂ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಸಿದ್ಧಾಂತಗಳು ಸಾರ್ವಜನಿಕ ಆಡಳಿತದಲ್ಲಿ ಮಾತ್ರ ಅಸ್ತವ್ಯಸ್ತ ವಾಗಿರುತ್ತದೆ.

8) ಅಧಿಕಾರ ಶ್ರೇಣಿ ವ್ಯವಸ್ಥೆ ಪಿರಮಿಡ್ ಆಕೃತಿ ಸಂಘಟನೆಯ ಅಧಿಕಾರ ಯಾವಾಗಲೂ ಸರಿಯಾದ್ದುದ್ದಲ್ಲ. ಆಡಳಿತಾಧಿಕಾರಿಗಳು ತಮ್ಮ ಸಹೋದ್ಯೋಗಿಗಳನ್ನು ಸಮಾನರು ಎಂಬ ಕಲ್ಪನೆ ತರುವುದು.

9) ಇತ್ತೀಚಿಗೆ ಸಾರ್ವಜನಿಕ ಆಡಳಿತದಲ್ಲಿ "ನಿರ್ವಹಣಾ ಧಕ್ಷತೆ" ಎಂಬ ಪದವನ್ನು ಕೇಂದ್ರೀಕರಿಸಲಾಗಿದ್ದು ನೀತಿ ಹಾಗೂ ರಾಜಕೀಯ ರಕ್ಷಣೆಗೆ ಅವಕಾಶವಿಲ್ಲ. ಗಣಕಯಂತ್ರದ ಸುದ್ದಿ ಯಾವಾಗಲೂ ಸರಿಯಾದುದ್ದಲ್ಲ ಕಾರಣ ಅದು ಗಣಕೀಕೃತ ಯಂತ್ರದಿಂದ ಬಂದುದ್ದು.

10) ಆಡಳಿತಾಧಿಕಾರಿಗಳು ಇನ್ನು ಮುಂದೆ ಸಂಬಂಧ ಪಟ್ಟ ಶಾಲೆ ಇಂದಲೇ ತರಬೇತಿ ಪಡೆಯಬೇಕು. ಇನ್ನು ಮುಂದೆ ಶಾಲಾ ಕಾಲೇಜುಗಳಲ್ಲಿನ ಪಠ್ಯ ಸೂಚಿ ಮನಃ ಶಾಸ್ತ್ರ, ಹಣಕಾಸು ಆಡಳಿತ, ಸಮಾಜ ವಿಜ್ಞಾನ ಹಾಗೂ ಮಾನವಶಾಸ್ತ್ರಗಳನ್ನೊಳಗೊಂಡಿರಬೇಕು.

11) ಸಾರ್ವಜನಿಕ ಆಡಳಿತ ಸಮಾಜಿಕ ಸಮಸ್ಯೆಗಳ ಬಗ್ಗೆ ವ್ಯವಹರಿಸುವುದಿಲ್ಲ. ಸಾರ್ವಜನಿಕ ಆಡಳಿತದ ಸಿದ್ಧಾಂತ ಆಗತಾನೆ ಉದ್ಭವವಾಗುವಂತ ಸಮಸ್ಯೆಗಳಿಗೆ ಉದಾಹರಣೆಗೆ ಬೃಹತ್ ರಕ್ಷಣಾ ಪಡೆಗೆ ಸಂಬಂಧಿಸಿದ ಕೈಗಾರಿಕಾ ಸಮುಚ್ಛಯ, ದೊಂಬಿ, ಕಾರ್ಮಿಕರ ಸಂಘಗಳು, ಮುಷ್ಕರ, ಸಾರ್ವಜನಿಕ ಶಾಲೆಯ ಆಂತರಿಕ ಜಗಳ, ಕೊಳಗೇರಿ ವಿಜ್ಞಾನಕ್ಕೆ ಆಡೆತಡೆ ಮತ್ತು ಅಭಿವೃದ್ಧಿ ರಾಷ್ಟ್ರಗಳು- ಸಂಬಂಧಿಸಿರುವುದಿಲ್ಲ ಹಾಗೂ ಸ್ಪಂದಿಸುವುದೂ ಇಲ್ಲ.

12) ಸಮಕಾಲೀನ ಸಾಮಾಜ ವಿಜ್ಞಾನದ ರೀತಿ ಎಲ್ಲಾ ವಿಧಿ ವಿಧಾನಗಳನ್ನು ಸಾರ್ವಜನಿಕ ಆಡಳಿತ ಏಕ ಕಾಲಕ್ಕೆ ಅಳವಡಿಸಿಕೊಳ್ಳುವುದಿಲ್ಲ. ಆಡಳಿತದ ಒಂದು ಭಾಗ ಮಾತ್ರ ವೈಜ್ಞಾನಿಕ ವಿಧಿ ವಿಧಾನಗಳನ್ನು ಉಪಯೋಗಿಸಿಕೊಳ್ಳಬಲ್ಲವು ಉಳಿದುದ್ದು ಸಾರ್ವಜನಿಕ ಆಡಳಿತದ ಒಂದು ಭಾಗವಾಗಿ ಉಳಿದು ಕೊಂಡಿರುತ್ತದೆ. ಚಾರ್ಲ್ಸ್ ವರ್ತ್‌ನ ಮಾತಿನಲ್ಲಿ ಹೇಳುವುದಾದರೆ ಸಾರ್ವಜನಿಕ ಆಡಳಿತ ವೈಜ್ಞಾನಿಕವಾದುದ್ದು. ಇದನ್ನು ತಿಳಿದುಕೊಂಡು ಕೂಡ ನಾವು ಅದರ ವ್ಯಾಪ್ತಿಯನ್ನು ನಿಯಂತ್ರಿಸಿದರೆ ಹಾಗೂ ಹಾಗೇನಾದರು ಮಾಡಿದಲ್ಲಿ ಅದರ ಬಹುಮುಖ್ಯ ಹಾಗೂ ಮೌಲ್ಯಯುತ ಭಾಗಗಳನ್ನು ಉಪಯೋಗಿಸಿಕೊಳ್ಳದಂತಾಗುತ್ತದೆ.

## 4.5 ಮಿನ್ನೊಬ್ರೂಕ್ ಸಮ್ಮೇಳನ - 1968

ಈ ಸಮಾವೇಶ ಎರಡು ಪ್ರಮುಖ ವಿಷಯಗಳನ್ನು ಮುಂದಿಟ್ಟಿತು. ಮೊದಲನೆಯದು 1960ರ ದಶಕದಲ್ಲಿ ಸಾರ್ವಜನಿಕ ಆಡಳಿತ ಅನೇಕ ಸಮಾಜಿಕ ಸಮಸ್ಯೆಗಳನ್ನು ಎದುರಿಸಿದ ಪ್ರಕ್ಷುಬ್ಧ ಪರಿಸ್ಥಿತಿಯ ಕಾಲ. ಆದರೂ ಕೂಡ ಸಾರ್ವಜನಿಕ ಆಡಳಿತ ಏನೂ ತಿಳಿಯದ ಹಾಗೆ ಇದ್ದುದ್ದು ಹಾಗೂ ಅದನ್ನು ಬಗೆ ಹರಿಸಲು ಗಂಭೀರವಾದ ಕ್ರಮ ಕೈಗೊಳ್ಳುವ ಪರಿಸ್ಥಿತಿಯೂ ಇರಲಿಲ್ಲ. ಎರಡನೆಯದು ಈ ಸಮಾವೇಶ ಕೇವಲ 35 ವರ್ಷಗಳಿಗೆ ಮೇಲ್ಪಟ್ಟ 50 ವರ್ಷದೊಳಗಿನ ವಿದ್ವಾಂಸರನ್ನೊಳಗೊಂಡಿತ್ತು. ಮಿನ್ನೊಬ್ರೂಕ್ ಸಮಾವೇಶ ವಿದ್ವಾಂಸರೆಲ್ಲಾ ಒಟ್ಟಾಗಿ ಸೇರಿ ತಮ್ಮ ಅನಿಸಿಕೆಗಳ ಹಂಚಿಕೆಕೊಂಡತಹ ಸಮಾವೇಶವಾಗಿದ್ದಿತು. ಈ ಯುವ ಸಮಾವೇಶವೆ "ನೂತನ ಸಾರ್ವಜನಿಕ ಆಡಳಿತ " ಹುಟ್ಟುವಳಿಗೆ ಕಾರಣವಾಗಿತ್ತು ಸಮಾವೇಶದಲ್ಲಿ ಹುಟ್ಟಿಕೊಂಡ ಪ್ರಶ್ನೆ ಆಡಳಿತಾಧಿಕಾರಿಗಳ ಪಾತ್ರದ ಮೇಲೆ ಅದಕ್ಕೆ ಸಿಕ್ಕಿದ ಉತ್ತರ

1) ಆಡಳಿತಾಧಿಕಾರಿಗಳು( ಆಡಳಿತ) ಸಮಾಜದ ಪರಿವರ್ತನೆಗೆ ಮಾರ್ಗದರ್ಶನ ನೀಡಬೇಕು.
2) ಸಮಾಜದಲ್ಲಿ ಸಂಘಟನೆ, ಪರಿಸರ ಬದಲಾವಣೆಯಾದಂತೆ ತಾನೂ ಬದಲಾಗುತ್ತಿರಬೇಕು.
3) ನೂತನ ಸಾರ್ವಜನಿಕ ಆಡಳಿತ ಸಮಾಜಿಕ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ನೀಡಬೇಕು.
4) ಸಮಾಜದಲ್ಲಿ ಸಮಂಜಸತೆ, ನೀತಿ, ಮೌಲ್ಯ, ಬದಲಾವಣೆಗಳು ಹಾಗೂ ಇವುಗಳಲ್ಲಿನ ಲಾಭ ಪ್ರಜೆಗಳಿಗೆ ದೊರೆಯುವಂತಿರಬೇಕು ಹಾಗೂ ಸಮಾಜದಲ್ಲಿ ಸಮಾನತೆಯನ್ನು ಹುಟ್ಟುಹಾಕಬೇಕು. ದುರ್ಭಲರಿಗೆ ಸಮಾನತೆಯ ಫಲ ದೊರೆಯಬೇಕು.
5) ಸಾರ್ವಜನಿಕ ಆಡಳಿತ ನೊಂದ ಜನತೆಯ ದುರ್ಭಲರಲ್ಲಿ ಸಮಾನತೆ ತರಲು ಬದ್ಧಕಂಕಣರಾಗಿರಬೇಕು.
6) ಸಮಾಜದಲ್ಲಿ ದಿನ ನಿತ್ಯ ನಡೆಯುತ್ತಿರುವ ಆಗುಹೋಗುಗಳ ಬಗ್ಗೆ ಅರಿವಿರಬೇಕು.
7) ದಿನ ನಿತ್ಯ ಬದಲಾಗುತ್ತಿರುವ ಸಂಘಟನೆಯ ಪರಿಸರಕ್ಕೆ ಹೊಂದಿಕೊಳ್ಳುವಂತೆ ಆಡಳಿತದ ಹೊಂದಾಣಿಕೆ ಇರಬೇಕು.
8) ನೂತನ ಸಾರ್ವಜನಿಕ ಆಡಳಿತದ ಮೂಲ ಮಂತ್ರವಾದ ಸಮಂಜಸತೆ, ಮೌಲ್ಯಗಳು, ಸಾಮಾಜಿಕ ಸಮಾನತೆ ಮತ್ತು ಸಾಮಾಜಿಕ ಪರಿವರ್ತನೆಯ ಅನುಷ್ಠಾನಕ್ಕೆ ಸಾರ್ವಜನಿಕ ಆಡಳಿತ ಕಟ್ಟುಬದ್ಧವಾಗಿರಬೇಕು. ಹಾಗೂ 1988 ರಲ್ಲಿ 20 ವರ್ಷಗಳ ತರುವಾಯ ನಡೆ ಎರಡನೆಯ ಮಿನ್ನೊಬ್ರೂಕ್ 2 ನೇ ಸಮ್ಮೇಳನದಲ್ಲಿ ನೈತಿಕತೆ ನೂತನ ಸಾರ್ವಜನಿಕ ಆಡಳಿತ ಮೂಲ ಮಂತ್ರವಾಗಬೇಕೆಂದು ಒತ್ತಾಯಿಸಲಾಯಿತು.

ಹೇಳುವುದಾದರೆ ಮಿನ್ನೊಬ್ರೂಕ್ ಸಮ್ಮೇಳನದಲ್ಲಿ ಪ್ರಥಮ ಬಾರಿಗೆ ನೂತನ ಸಾರ್ವಜನಿಕ ಆಡಳಿತ ಎಂಬ "ಗ್ರಾಮರ್"ನ್ನು

ಹೊರತಂದಿತು. ಇದರ ಕೀರ್ತಿ ಈ ಸಮ್ಮೇಳನಕ್ಕೆ ಸೇರಬೇಕು. ಈ ಸಮ್ಮೇಳನದಲ್ಲೂ ಕೂಡ ಸಾರ್ವಜನಿಕ ಆಡಳಿತ ಶಿಕ್ಷಣದ ಬಗ್ಗೆ ಸಮ್ಮೇಳನ ಅತೃಪ್ತಿ ವ್ಯಕ್ತಪಡಿಸಿತು. ಹಾಗೂ ಪ್ರ ಪ್ರಥಮ ಬಾರಿಗೆ ಸಾರ್ವಜನಿಕ ಆಡಳಿತಕ್ಕೆ ಹೊಸ ರೂಪವನ್ನು ಕೊಡಲಾಯಿತು. ಕಾರಣ ಸಮಾಜದ ಸಮಸ್ಯೆಗಳನ್ನು ಬಗೆಹರಿಸುವ ಮತ್ತು ಸಮಾಜವನ್ನು ಸುಧಾರಿಸುವ ಜವಾಬ್ದಾರಿ ನೂತನ ಸಾರ್ವಜನಿಕ ಆಡಳಿತದ್ದಾಯಿತು.

## 4.6 ನೂತನ ಸಾರ್ವಜನಿಕ ಆಡಳಿತದ ಗುರಿಗಳು

**1) ಬದಲಾವಣೆ ಮತ್ತು ಆಡಳಿತದ ಜವಾಬ್ದಾರಿ**

ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ತಾಂತ್ರಿಕ ಪರಿಸರ ಶೀಘ್ರಗತಿಯಲ್ಲಿ ಬದಲಾಗುತ್ತಿದೆ. ಈ ಬದಲಾದ ಪರಿಸ್ಥಿತಿಗೆ ಹೊಂದುವಂತೆ "ಆಡಳಿತದ ಸಂಘಟನೆಯನು" ಕೂಡ ಸಮಂಜಸ ಹಾಗೂ ಧಕ್ಷ ರೀತಿಯಲ್ಲಿ ನಿರ್ಣಯ ಕೈಗೊಳ್ಳಲು ಅಭಿವದ್ಧಿ ಪಡಿಸಬೇಕು. ಸಂಘಟನೆಯಲ್ಲಿ ಉಂಟಾಗ ಬಹುದಾದ ಪರಿಸರದ ಬದಲಾವಣೆಗೆ ತಕ್ಕಂತೆ ಕಾರ್ಯ ನಿರ್ವಹಿಸಲು ಹಾಗೂ ಅದನ್ನು ಅಳವಡಿಸಿಕೊಳ್ಳಲು ಸಲಿಲಕೆ ಆಡಳಿತದ ಪ್ರತಿ ಇಲಾಖೆಯಲ್ಲೂ ಇರಬೇಕು.

**2) ವಿವೇಚನೆ ಮತ್ತು ಸಮಂಜಸತೆ.**

ನೂತನ ಸಾರ್ವಜನಿಕ ಆಡಳಿತದಲ್ಲಿ ವಿವೇಚನೆ ಸಾಕಷ್ಟು ಒತ್ತು ನೀಡಲಾಗಿದೆ. ಆಡಳಿತ ನಿರ್ಣಯ ಹಾಗೂ ಕ್ರಮ ಕೈಗೊಳ್ಳುವಲ್ಲಿ ಬಹುಮುಖ್ಯವಾಗಿ ವಿವೇಚನೆ ಆದಷ್ಟು ಪ್ರಮುಖ್ಯತೆ ನೀಡಲಾಗಿದೆ. ಆಡಳಿತಾಧಿಕಾರಿ ತಾನು ಮಾಡಬೇಕಾಗಿರುವ ಕೆಲಸದ ಬಗ್ಗೆ ಜನತೆಯನ್ನು ತಾನು ಮಾಡಬೇಕೆಂದಿರುವ ಕಾರ್ಯದ ಬಗ್ಗೆ ಮತ್ತು ತಾನು ಮಾಡಿದ ಕೆಲಸದ ಬಗ್ಗೆ ಹಾಗೂ ಯಾರು ಏನು ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಜನತೆಯ ಜತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

**3) ನಿರ್ವಹಣೆ ಹಾಗೂ ಕೆಲಸಗಾರರ ಸಂಬಂಧ**

ಆಡಳಿತದ ಸಂಘಟನೆಯಲ್ಲಿ ಮಾನವೀಯ ಸಂಬಂಧ (ಕೆಲಸಗಾರರು ಹಾಗೂ ಮೇಲ್ವಿಚಾರಕರು) ಸುಮಧುರವಾಗಿದ್ದಲ್ಲಿ ಕೆಲಸಗಾರರಲ್ಲಿ ನೈತಿಕತೆ ಧಕ್ಷತೆ ಹೆಚ್ಚುತ್ತದೆ. ಇದು ಇಷ್ಟಕ್ಕೆ ಕೊನೆಯಾಗಲಿಲ್ಲ. ಜನತೆಯ ಆಶೋತ್ತರವನ್ನು ತೃಪ್ತಿ ಪಡಿಸವುದು ಅವರ ಜತೆ ಸುಮಧುರ ಬಾಂಧವ್ಯ ಬೆಳೆಸುವುದು ಆಡಳಿತದ ಪ್ರಮುಖ ಧ್ಯೇಯವಾಗಿರಬೇಕು. ಇದು ನಿಜಕ್ಕೂ ಸಾಧನೆಯಾಗಬೇಕಿದ್ದಲ್ಲಿ ಆಡಳಿತಾಧಿಕಾರಿಗಳು ಅಧೀನ ಅಧಿಕಾರಿಗಳೊಂದಿಗೆ ಉತ್ತಮ ಸಂಬಂಧ ಹೊಂದಿರಬೇಕು ಹಾಗಿದ್ದಾಗ ಮಾತ್ರ ಅಧೀನ ಅಧಿಕಾರಿಗಳಲ್ಲಿ ನೈತಿಕತೆ, ಧಕ್ಷತೆ, ಕೆಲಸ ಮಾಡಲು ಉತ್ಸಾಹ ಹೆಚ್ಚುತ್ತದೆ.

**4) ರಚನೆ**

ಬದಲಾದ ಪರಿಸರಕ್ಕೆ ಹೊಂದುವಂತೆ ಸಂಘಟನೆಯ ರಚನೆ ನಿರ್ಮಾಣವಾಗಬೇಕು. ಧಕ್ಷ ಆಡಳಿತಕ್ಕೆ ಸುಭದ್ರ ರಚನೆ ಕೂಡ ಅತ್ಯಗತ್ಯವಾಗಿರುತ್ತದೆ. ಆಡಳಿತದ ಪರಿಸರಕ್ಕೆ ಹೊಂದಿಕೊಳ್ಳುವಂತೆ ಚಿಕ್ಕ ವಿಕೇಂದ್ರಿಕೃತ ನಮ್ಯತೆಯಿಂದಿರುವ ರಚನೆ ( ಅಧಿಕಾರ ಶ್ರೇಣಿ) ಇರುವಲ್ಲಿ ಹಿರಿಯ ಅಧಿಕಾರಿಗಳು ಅಧೀನ ಅಧಿಕಾರಿಗಳ ಮೇಲೆ ನಿಯಂತ್ರಣ ಸುಲುಭವಾಗಿರುತ್ತದೆ.

**5) ಸಾರ್ವಜನಿಕ ಆಡಳಿತ ಕುರಿತಂತೆ ನೀಡುವ ಶಿಕ್ಷಣ**

ಅನೇಕ ವಿಷಯಗಳನ್ನೊಳಗೊಂಡ ಅಧಿಕಾರಿಗಳಲ್ಲಿ ಜ್ಞಾನ ವಿಕಸನಗೊಳಿಸಲು ನೀಡುವ ಶಿಕ್ಷಣವೇ ಆಡಳಿತ. ನಿರ್ವಹಣಾ ಸಿದ್ಧಾಂತ,

ಮಾನವ ಸಂಬಂಧ ಸಿದ್ಧಾಂತ, ರಾಜಕೀಯ ಸಿದ್ಧಾಂತ ಜನತಾ ಪಾಲುದಾರಿಕೆ ಸಿದ್ಧಾಂತ ಈ ಎಲ್ಲಾ ಸಿದ್ಧಾಂತಗಳು ಸಾರ್ವಜನಿಕ ಆಡಳಿತದ ಬೆಳವಣಿಗೆ ಸಾಕಷ್ಟು ಸಹಕಾರಿಯಾಗಿವೆ. ಜೊತೆಗೆ ವೈಜ್ಞಾನಿಕ ನಿರ್ವಹಣಾ ಸಿದ್ಧಾಂತ, ಸಂಪ್ರದಾಯ ವಾದಿಗಳ ಸಿದ್ಧಾಂತಗಳು ಸಾರ್ವಜನಿಕ ಆಡಳಿತದ ಶಿಕ್ಷಣವನ್ನು ಉತ್ತುಂಗಕ್ಕೇರಿಸಿದೆ. ಇದನ್ನು ಮತ್ತಷ್ಟು ಬಲಪಡಿಸಬೇಕಾಗಿದೆ.

### 6) ಸಾಮಾಜಿಕ ಸಮಾನತೆ

ಮಾನವನ ಬೆಳವಣಿಗೆ ಧಕ್ಷ ಹಾಗೂ ನ್ಯಾಯಯುತವಾಗಿ ಬೆಳೆಯಬೇಕಿದ್ದಲ್ಲಿ ಅಂತಹ ಸಮಾಜದಲ್ಲಿ ಸಮಾನತೆ ಇರಬೇಕು ಇದನ್ನು ನೂತನ ಸಾರ್ವಜನಿಕ ಆಡಳಿತ ಪ್ರತಿ ಪಾದಿಸುತ್ತದೆ. ಸಮಾಜಿಕ ಸಮಾನತೆಯನ್ನು ಕಾರ್ಯಗತ ಮಾಡುವುದು ಸಾರ್ವಜನಿಕಾಡಳಿತದ ಪ್ರಮುಖ ಉದ್ದೇಶವೂ ಸಹ ಆಗಿದೆ. ಸಮಾಜಿಕ ಸಮಾನತೆ ಎಂದರೆ ಸಮಾಜದಲ್ಲಿ ತುಳಿತಕ್ಕೆ ಒಳದಾದವರನ್ನು ಸಂಕಟ ಹಾಗೂ ಬವಣೆಗಳಿಗೆ ಸ್ಪಂದಿಸುವುದು ಎಂದರ್ಥ. ಇದು ಸಾರ್ವಜನಿಕ ಆಡಳಿತದ ಮುಖ್ಯ ಕಾರ್ಯವಾಗಿರಬೇಕು, ಸಮಾಜದ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳಿಗೆ ಕೂಡಲೇ ಸ್ಪಂದಿಸುವಂತೆ ನೋಡಿಕೊಳ್ಳುವ ಕಾರ್ಯ ಸಾರ್ವಜನಿಕ ಆಡಳಿತದ್ವಾಗ ಬೇಕು.

### 7) ಹೊಸ ವಿಷಯಗಳಿಗೆ ಹಾಗೂ ಬದಲಾವಣೆಗೆ ಸ್ಪಂದಿಸಬೇಕು

ನೂತನ ಸಾರ್ವಜನಿಕ ಆಡಳಿತ ಯಾವಾಗಲೂ ಹೊಸ ಹೊಸ ವಿಷಯಗಳಿಗೆ ಹಾಗೂ ಬದಲಾವಣೆಗೆ ಸ್ಪಂದಿಸುತ್ತದೆ. ಆಡಳಿತದ ವ್ಯವಹಾರಗಳು ಹಾಗೂ ಅದರ ದಿನನಿತ್ಯದ ಆಡಳಿತದ ಆಗುಹೋಗುಗಳು ಪರಿಸರಕ್ಕೆ ತಕ್ಕಂತೆ ಜನತೆಯ ಇಚ್ಛೆಗೆ ತಕ್ಕಂತೆ ಬದಲಾವಣೆ ಆಗುತ್ತಿರುತ್ತದೆ. ಈ ರೀತಿ ಆಗುವಂತಹ ಹೊಸ ಬದಲಾವಣೆ ದಕ್ಷ ಆಡಳಿತದ ಒಂದು ಕುರುಹು ಎಂದು ಭಾವಿಸಲಾಗಿದೆ. ಆಡಳಿತ ಕೂಡಲೆ ಈ ರೀತಿ ಆಗುವ ಬದಲಾವಣೆಗೆ ಸ್ಪಂದಿಸಬೇಕು, ಹೊಸ ವಿಷಯಗಳು ಹಾಗೂ ಅಭಿವೃದ್ಧಿಗೆ ಪೂರಕವಾಗುವ ಸಲಹೆಗಳಿಗೆ ಸೂಕ್ತ ಪುರಸ್ಕಾರವನ್ನು ಆಡಳಿತ ನೀಡಬೇಕು.

### 8) ಮೌಲ್ಯಗಳು

ನೂತನ ಸಾರ್ವಜನಿಕ ಆಡಳಿತ ಸಿದ್ಧಾಂತ ಒಂದು ನಿಗಧಿತ ಪ್ರಮಾಣಕ್ಕೆ ಮಾತ್ರ ಸೀಮಿತವಾಗಿದೆ ಎಂದು ಭಾಸವಾಗುತ್ತಿದೆ. ಮಿನ್ನೋಬ್ರೂಕ್ ಸಮ್ಮೇಳನದಲ್ಲೂ ಕೂಡ ಸಾರ್ವಜನಿಕ ಆಡಳಿತ ಮೌಲ್ಯ ತಟಸ್ಥವಾಗಿರಲು ಸಾಧ್ಯವಿಲ್ಲ ಎಂಬ ವಾದವು ಕೂಡ ನಡೆಯಿತು. ಸಾರ್ವಜನಿಕ ಆಡಳಿತಕ್ಕೆ ತನ್ನದೆ ಆದ ಸಾಮಾಜಿಕ ಪಾತ್ರ ಹಾಗೂ ಜವಾಬ್ದಾರಿ ಇದೆ. ಅದು ಯಾವುದು ಎಂದರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕವಾಗಿ ಸೇವೆ ಸಲ್ಲಿಸುವುದು. ಇದು ತನ್ನದೇ ಆದ ಮೌಲ್ಯವನ್ನು ಕಾಪಾಡಿಕೊಂಡು ಬಂದಿದೆ. ಸಾರ್ವಜನಿಕ ಆಡಳಿತ ಸಮಾಜವನ್ನು ಕಾಪಾಡುವುದು, ರಕ್ಷಿಸುವುದು, ಕಾಯುವುದು ಹಾಗೂ ಇನ್ನಿತರ ಮಾನವೀಯತ ಮೌಲ್ಯವನ್ನು ಎತ್ತಿ ಹಿಡಿಯುವುದರಿಂದ ಅದು ಇಡೀ ಸಮಾಜದ ಮೌಲ್ಯವನ್ನು ಎತ್ತಿ ಹಿಡಿದಂತಾಗುತ್ತದೆ.

ಈ ಎಲ್ಲಾ ಮುಖ್ಯ ಲಕ್ಷಣಗಳ ಜೊತೆ ನೂತನ ಸಾರ್ವಜನಿಕ ಆಡಳಿತ ವಿವಿಧ ದೇಶಗಳಲ್ಲಿನ ಆಡಳಿತ ವ್ಯವಸ್ಥೆಯನ್ನು ಅರಿತುಕೊಳ್ಳಲು ತುಲನಾತ್ಮಕ ಸಾರ್ವಜನಿಕ ಆಡಳಿತದ ಅಧ್ಯಯನ ನಡೆಯಬೇಕೆಂದು ಪ್ರತಿಪಾದಿಸುತ್ತದೆ. ವಿಶ್ವದ ಆಡಳಿತ ವ್ಯವಸ್ಥೆಯನ್ನು ಅರಿತುಕೊಳ್ಳಲು "ನೇರವಾಗಿ ಹಾಗು ವಕ್ರವಾಗಿ"ದೇಶ ವಿದೇಶಗಳ ಆಡಳಿತ ವ್ಯವಸ್ಥೆಯನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಬೇಕೆಂದು ನೂತನ ಸಾರ್ವಜನಿಕ ಆಡಳಿತದ ಪ್ರತಿಪಾದಕರು ಇಚ್ಛಿಸುತ್ತಾರೆ.

**ಪ್ರಗತಿ ಪರಿಶೀಲನೆ**

**ಸೂಚನೆ :** 1) ಖಾಲಿ ಬಿಟ್ಟಿರುವ ಜಾಗವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿ.

2) ನಿಮ್ಮ ಉತ್ತರವನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಡನೆ ಪರಿಶೀಲಿಸಿ.

1) ನೂತನ ಸಾರ್ವಜನಿಕ ಆಡಳಿತದ ಸಿದ್ಧಾಂತ ಮತ್ತು ಕಾರ್ಯಾಚರಣೆ ಕುರಿತಂತೆರ್ಗೂಉರ ಫಿಲೆಡಲ್ಫಿಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ತಿಳಿಸಿ.

........................................................................................................................

........................................................................................................................

........................................................................................................................

........................................................................................................................

2) ನೂತನ ಸಾರ್ವಜನಿಕ ಆಡಳಿತದ ಗುರಿಗಳ ಬಗ್ಗೆ ಚರ್ಚಿಸಿ.

........................................................................................................................

........................................................................................................................

........................................................................................................................

........................................................................................................................

## 4.7 ಸಾರಂಶ

ಇತ್ತೀಚಿನ ದಿನಗಳಲ್ಲಿ ಆಡಳಿತದ ಬೆಳವಣಿಗೆಯಲ್ಲಿ ಪ್ರಮುಖವಾದದ್ದು ನೂತನ ಸಾರ್ವಜನಿಕ ಆಡಳಿತ. ಸಾರ್ವಜನಿಕ ಆಡಳಿತ ಸಿದ್ಧಾಂತ ಮತ್ತು ಆಚರಣೆಗೆ ಒಂದು ಹೊಸ ರೂಪ ಕೊಟ್ಟಿದ್ದೆ. ಈ ನೂತನ ಸಾರ್ವಜನಿಕ ಆಡಳಿತ. ಕ್ಯಾಂಪ್‌ಬೆಲ್ ರವರ ಪ್ರಕಾರಸಂಪ್ರದಾಯವಾದಿ ಹಾಗೂ ನೂತನ ಸಾರ್ವಜನಿಕ ಆಡಳಿತಕ್ಕೂ ಬಹಳ ವ್ಯತ್ಯಾಸ ಕಂಡು ಬರುತ್ತದೆ. ಅದೇನೆಂದರೆ ದಕ್ಷತೆ ಮತ್ತು ಮಿತವ್ಯಯ ಸಂಪ್ರದಾಯಿಕ ಆಡಳಿತದ ಗುರಿಯಾಗಿದ್ದರೆ ನೂತನ ಸಾರ್ವಜನಿಕ ಆಡಳಿತ ಸಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುತ್ತದೆ. ಪ್ರೊಫೆಸರ್ ನೀಗ್ರೋ ಮತ್ತು ನೀಗ್ರೋರವರ ಪ್ರಕಾರ ನೂತನ ಸಾರ್ವಜನಿಕ ಆಡಳಿತ ಸಮಾಜದ ಅನೇಕ ಹೊಸ ಆಯಾಮಗಳನ್ನು ಒಳಗೊಂಡಿದೆ. ಅವುಗಳಾವುವೆಂದರೆ ಸಮಂಜಸತೆ, ಮೌಲ್ಯ, ಸಾಮಾಜಿಕ ಸಮಾನತೆ ಹಾಗೂ ಸಮಾಜಿಕ ಪರಿವರ್ತನೆ. ಸಮಾಜದಲ್ಲಿ ತುಳಿತಕ್ಕೆ ಒಳಗಾದವರ ಬಗ್ಗೆ ಧನಿ ಎತ್ತುವುದು ಹಾಗೂ ಅವರ ಮೇಲ್ವಿಚಾರಣೆ ನೂತನಸಾರ್ವಜನಿಕ ಆಡಳಿತ ಮಾಡುತ್ತದೆ. ನೂತನ ಸಾರ್ವಜನಿಕ ಆಡಳಿತದ ಮತ್ತೊಂದು ಗುರಿ ಜನತೆಯ ಸಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಂಸ್ಕೃತಿಯ ಅಭಿವೃದ್ಧಿಯನ್ನು ಸಾಧಿಸುವುದು.

## 4.8 ಕಠಿಣ ಪದಗಳು

ಪರಿವರ್ತನೆ = ಬದಲಾವಣೆ

ಖಾತ್ರಿ = ಗ್ಯಾರಂಟಿ

ದೈನಂದಿನ = ದಿನನಿತ್ಯದ

## 4.9 ಉಪಯುಕ್ತ ಪುಸ್ತಕಗಳು


Towards New Public Administration = Frank Marini

Theory and the New Public Administration = (J.Bellue (ed)

Public Administration = Avasthi


## 4.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

ಪ್ರಶ್ನೆ 1ಕ್ಕೆ ವಿಭಾಗ 4.4 ನೋಡಿ


ಪ್ರಶ್ನೆ 2ಕ್ಕೆ ವಿಭಾಗ 4.6 ನೋಡಿ.


ಕರಾಮುವಿ/ಸಿಪಾವಿ/2-1136/2009-2010 ದಿನಾಂಕ: 29-10-2009

ಮುದ್ರಕರು : ಕುಸುಮ ಪ್ರಿಂಟರ್ಸ್, ಬೆಂಗಳೂರು - 53. 1000 ಪ್ರತಿಗಳು.

ಒಳಪುಟ : ಎಂ.ಪಿ.ಎಂ. 60 ಜಿ.ಎಸ್.ಎಂ. 15.2 ಕೆ.ಜಿ., ರಕ್ಷಾಪುಟ : 170 ಜಿ.ಎಸ್.ಎಂ. ಆರ್ಟ್‌ಕಾರ್ಡ್,

ಕ್ರಮಸಂಖ್ಯೆ : 1 ರಿಂದ 1000




| | | |
|---|---|---|
| ★ | ಪ್ರಾದೇಶಿಕ ಕೇಂದ್ರಗಳು<br>REGIONAL CENTRES | - 08 |
| ● | ಅಧ್ಯಯನ ಕೇಂದ್ರಗಳು<br>STUDY CENTRES | - 68 |
| ■ | B.Ed. STUDY CENTRES | - 10 |
| ✪ | M.Ed. NODAL CENTRE | - 01 |
| ▲ | M.Ed. STUDY CENTRES | - 08 |



INSTRUCTIONAL SYSTEM
M 3000